ಸೋಮವಾರ, ಏಪ್ರಿಲ್ 17, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಲ್ಫಿ ಸಮಯ

ಆಗ್ರಾದಲ್ಲಿ ತಾಜ್ ಮಹಲ್ ಮುಂದೆ ಭಾನುವಾರ ಪ್ರವಾಸಿಗರು ಸೆಲ್ಫಿ ತೆಗೆದುಕೊಂಡರು



ಬೆಳೆ ಸಮಸ್ಯೆಗಳಲ್ಲೂ 'ಮತದ ಫಸಲು'

• ಚಂದ್ರಹಾಸ ಹಿರೇಮಳಲಿ

ಧರ್ಮ, ಜಾತಿ, ಹಣ, ಬೆಲೆ ಏರಿಕೆ ಅಷ್ಟೇ ಅಲ್ಲ: ರಾಜ್ಯದ ಕೃಷಿ ಕ್ಷೇತ್ರದ ಸಮಸ್ಯೆಗಳೂ ಚುನಾವಣಾ ರಾಜಕಾರಣವನ್ನು ದಟ್ಟವಾಗಿ ಪ್ರಭಾವಿಸುತ್ತಿವೆ. 'ಬೆಳೆ ರಾಜಕಾರಣ'ದ ಮೂಲಕವೇ ಸಮೃದ್ಧ 'ಮತದ ಫಸಲು' ತೆಗೆಯಲು ಎಲ್ಲ ರಾಜಕೀಯ ಪಕ್ಷಗಳೂ 'ಸೈ' ಎನಿಸಿಕೊಂಡಿವೆ. ರಾಜ್ಯದ ಪ್ರಮುಖ ಬೆಳೆಗಳಾದ ಅಡಿಕೆ, ತೆಂಗು, ತೊಗರಿ ಬೆಳೆಗಾರರ ಸಮಸ್ಯೆಗಳು ಎಷ್ಟೋ ಚುನಾವಣೆಗಳ ಚಿತ್ರಣವನ್ನೇ ಬದಲಿಸಿವೆ. ರಾಜಕೀಯ ಪಕ್ಷಗಳ ಚುನಾವಣಾ ಅಸ್ತ್ರಗಳಾಗಿ ಹಲವು ಕ್ಷೇತ್ರಗಳಲ್ಲಿ ಫಲಿತಾಂಶದ ಮೇಲೆ ಪ್ರಭಾವ ಬೀರಿವೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲೂ 'ಬೆಳೆ ರಾಜಕಾರಣ' ಜೋರಾಗಿ ಸದ್ದು ಮಾಡುತ್ತಿದೆ.

ಪಶ್ಚಿಮಘಟ್ಟ ವ್ಯಾಪ್ತಿಯ ಮಲೆನಾಡಿನ ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ದಾವಣಗೆರೆ, ತುಮಕೂರು ಜಿಲ್ಲೆಗಳ 50ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಪ್ರತಿ ಚುನಾವಣೆಯಲ್ಲೂ ಬಹು ಚರ್ಚಿತ ವಿಷಯ. ಹಾಗೆಯೇ, ಹಳೇ ಮೈಸೂರು ಪ್ರಾಂತ್ಯದ ಜಿಲ್ಲೆಗಳಲ್ಲಿ ತೆಂಗು, ಉತ್ತರ ಕರ್ನಾಟಕದ ಕಲಬುರಗಿ, ಯಾದಗಿರಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳ ವ್ಯಾಪ್ತಿಯ ಕ್ಷೇತ್ರಗಳಲ್ಲಿ ತೊಗರಿ ಸಮಸ್ಯೆಗಳನ್ನು ವಿವಿಧ ರಾಜಕೀಯ ಪಕ್ಷಗಳು ಮತ ಸೆಳೆಯಲು ಬಳಸಿಕೊಳ್ಳುತ್ತಿವೆ.

ಮಲೆನಾಡಿನ ಸಾಂಪ್ರದಾಯಿಕ ಬೆಳೆ ಅಡಿಕೆಗೆ ಚಿನ್ನದ ಬೆಲೆ ದೊರೆತ ನಂತರ ಬೆಳೆ ಕ್ಷೇತ್ರ ಬಯಲು ಸೀಮೆಗೂ ಹಬ್ಬಿದೆ. ಕೊಳವೆಬಾವಿ, ಜಲಾಶಯಗಳ ಅಚ್ಚುಕಟ್ಟು, ಏತ ನೀರಾವರಿ ಸೌಲಭ್ಯಗಳನ್ನು ಬಳಸಿಕೊಂಡು ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ಬೆಳೆ ಕ್ಷೇತ್ರ ಹೆಚ್ಚಳವಾದಂತೆ ಬೆಳೆಗಾರರ ಸಂಖ್ಯೆಯಲ್ಲೂ ಭಾರಿ ಏರಿಕೆಯಾಗಿದೆ. ಹಾಗಾಗಿಯೇ, ಅಡಿಕೆ ಬೆಳೆಯ ಸಮಸ್ಯೆಗಳು ರಾಜಕೀಯ ಪಕ್ಷಗಳಿಗೆ 'ಮತಬೇಟೆ'ಯ ಪ್ರಮುಖ ವಿಷಯಗಳಾಗಿವೆ. ಅಡಿಕೆ ಬೆಲೆ ಏರಿಕೆಯ ಲಾಭವನ್ನು ತಮ್ಮ ಸಾಧನೆಯ ಕಿರೀಟವೆಂದು ಆಡಳಿತದಲ್ಲಿರುವ ರಾಜಕೀಯ ಪಕ್ಷಗಳು ಬಿಂಬಿಸಿಕೊಂಡರೆ, ಬೆಲೆ ಕುಸಿತವನ್ನು ಆಡಳಿತ ವಿರೋಧಿ ನೀತಿಯಾಗಿ ಪ್ರತಿಪಾದಿಸಿ, ಬೆಳೆಗಾರರ ಆಕ್ರೋಶವನ್ನು ಮತಗಳಾಗಿ ಪರಿವರ್ತಿಸಿಕೊಳ್ಳಲು ವಿರೋಧ ಪಕ್ಷಗಳು ನಿರಂತರ ಪ್ರಯತ್ನ ನಡೆಸುತ್ತಲೇ ಇವೆ.

2013ರಲ್ಲಿ ಕಾಂಗ್ರೆಸ್ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿತ್ತು. ಮಲೆನಾಡು ಭಾಗದ ಕ್ಷೇತ್ರಗಳಿಂದಲೂ ಆ ಪಕ್ಷದ ಹೆಚ್ಚಿನ ಸಂಖ್ಯೆಯ ಶಾಸಕರು ಆಯ್ಕೆಯಾಗಿದ್ದರು. ಅಡಿಕೆ ಧಾರಣೆ ಪ್ರತಿ ಕ್ವಿಂಟಲ್‌ಗೆ ₹ 1 ಲಕ್ಷದ ಸಮೀಪ ಬಂದು, ನಂತರ ಗಣನೀಯವಾಗಿ ಕುಸಿದದ್ದು 2018ರ ಚುನಾವಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿತ್ತು. ಪ್ರತಿಪಕ್ಷ ಬಿಜೆಪಿ ಧಾರಣೆ ಕುಸಿತದ ವಿಷಯವನ್ನೇ ಚುನಾವಣಾ ಅಸ್ತ್ರವಾಗಿ ಬಳಸಿತ್ತು.

ಅಡಿಕೆ ಚುನಾವಣಾ ವಿಷಯವಾಗಿ ಚಾಲ್ತಿಗೆ ಬಂದಿದ್ದು ಎರಡು ದಶಕಗಳ ಹಿಂದೆ. ಗುಟ್ಕಾ ಸೇವನೆ ಹೆಚ್ಚಾದಂತೆ ಅಡಿಕೆ ಬೆಲೆಯೂ ನಿರೀಕ್ಷೆಗೂ ಮೀರಿ ಏರಿಕೆಯಾಗತೊಡಗಿತ್ತು. ಗುಟ್ಕಾ ಜಗಿಸ ಸಹವಾಸ ಅಡಿಕೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರತೊಡಗಿತು. 'ಅಂಕೋರ್ ಗುಟ್ಕಾ ಕಂಪನಿ' ವಿರುದ್ಧ 'ಅಸ್ಸಾಮ ಕೇರ್ ಸೊಸೈಟಿ' ಸುಪ್ರೀಂಕೋರ್ಟ್‌ನಲ್ಲಿ ದಾವೆ ಹೂಡಿತ್ತು. ಅಡಿಕೆ ಬಗ್ಗೆ ಮಾಹಿತಿ ಪಡೆಯಲು 2001ರಲ್ಲಿ ಕೇಂದ್ರ ಸರ್ಕಾರ ಸಮಿತಿ ರಚಿಸಿತ್ತು. ಗುಟ್ಕಾದಲ್ಲಿ ಮಿಶ್ರಣ ಮಾಡಿದ್ದ ಅಡಿಕೆಯನ್ನು ಪರೀಕ್ಷೆಗೆ ಒಳಪಡಿಸಿದ್ದ ಸಮಿತಿ, 'ಅಡಿಕೆ ಹಾನಿಕರ, ಮನುಷ್ಯರ ಸೇವನೆಗೆ ಯೋಗ್ಯವಲ್ಲ, ಕ್ಯಾನ್ಸರ್ ಬರುತ್ತದೆ' ಎಂದು ವರದಿ ನೀಡಿತ್ತು. ಅಂದಿನಿಂದ ಅಡಿಕೆ ವಿಷಯದಲ್ಲಿ ರಾಜಕಾರಣ ಪ್ರವೇಶಿಸಿತು. ಕೇಂದ್ರದಲ್ಲಿ ಯುಪಿಎ ಅಧಿಕಾರಕ್ಕೆ ಬಂದ ನಂತರ ಇದೇ ವರದಿ ಆಧರಿಸಿ ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಹ ಸಲ್ಲಿಸಿತ್ತು. 2008, 2013ರ ವಿಧಾನಸಭಾ ಚುನಾವಣೆ, 2009, 2014ರ ಲೋಕಸಭಾ ಚುನಾವಣೆಯಲ್ಲಿ ಇದೇ ವಿಷಯ ಮುಂದಿಟ್ಟುಕೊಂಡು ಬಿಜೆಪಿಯು ಕಾಂಗ್ರೆಸ್ ವಿರುದ್ಧ ನಿರಂತರ ವಾಗ್ದಾಳಿ ನಡೆಸಿತ್ತು. ಮಲೆನಾಡು ಭಾಗದಲ್ಲಿ ತನ್ನ ಮತಬ್ಯಾಂಕ್ ವೃದ್ಧಿಸಿಕೊಳ್ಳಲು ಬಿಜೆಪಿಯು ಅಡಿಕೆಯನ್ನು ಬಳಸಿಕೊಂಡಿತ್ತು.

'ಅಡಿಕೆ ಆರೋಗ್ಯಕ್ಕೆ ಹಾನಿಕಾರಕ ಎಂದು ಯುಪಿಎ ಸರ್ಕಾರ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದರಿಂದಲೇ ಅಡಿಕೆ ನಿಷೇಧದ ತೂಗುಗತ್ತಿ ಎದುರಿಸುತ್ತಿದೆ. ಇದರಿಂದ ಅಡಿಕೆಯ ಮಾನ ಹರಾಜಾಗಿದೆ. ಮಾರುಕಟ್ಟೆಯಲ್ಲಿ ಬೆಲೆ ಕುಸಿತಕ್ಕೆ ದಾರಿಯಾಗಿದೆ' ಎಂದು ಟೀಕಿಸುತ್ತಲೇ ಬಂದ ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಅನಿವಾರ್ಯವಾಗಿ ಕೋರ್ಟ್‌ಗೆ ಹಿಂದೆ ಸಲ್ಲಿಸಿದ್ದ 'ಹಾನಿಕಾರಕ' ಎಂಬ ಅಫಿಡವಿಟ್ ಅನ್ನೇ ಪುನರ್ ಸಲ್ಲಿಸಿತ್ತು. ಇದು ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಇತರೆ ಪಕ್ಷಗಳಿಗೆ ಟೀಕಾಸ್ತ್ರವಾಯಿತು. ಸುಪ್ರಿಂಕೋರ್ಟ್‌ನಲ್ಲಿ ವಿಚಾರಣೆ ಇನ್ನೂ ನಡೆಯುತ್ತಲೇ ಇದೆ. ಬೆಳೆಗಾರರ ಭವಿಷ್ಯ ತೂಗುಗತ್ತಿಯಲ್ಲಿದೆ.

ಈ ಮಧ್ಯೆ 2018ರ ಸಂಸತ್ ಅಧಿವೇಶನದಲ್ಲಿ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು, 'ಅಡಿಕೆ ಸೇವನೆಯಿಂದ ಆರೋಗ್ಯಕ್ಕೆ ಹಾನಿಕರ ಹಾಗೂ ಕ್ಯಾನ್ಸರ್ ಬರುತ್ತದೆ. ಭಾರತ ಆಹಾರ ಸುರಕ್ಷತಾ ಹಾಗೂ ಗುಣಮಟ್ಟ ಪ್ರಾಧಿಕಾರದ ಜತೆ ಚರ್ಚಿಸಿ ಅಡಿಕೆ ಸೇವನೆ ನಿಷೇಧಿಸುವ ಕುರಿತು ನಿರ್ಧರಿಸಲಾಗುವುದು' ಎಂದು ಹೇಳಿಕೆ ನೀಡಿದ್ದರು. ನಂತರ ಜಾರ್ಖಂಡ್ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು, 'ಅಡಿಕೆ ಕ್ಯಾನ್ಸರ್‌ಕಾರಕ, ಬೆಳೆಯನ್ನೇ ನಿಷೇಧ ಮಾಡಬೇಕು' ಎಂದು ನೀಡಿದ್ದ ಹೇಳಿಕೆ ತಲ್ಲಣ ಮೂಡಿಸಿತ್ತು. ವಿವಾದ ತಣ್ಣಗಾಗಿಸಲು ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೆ ನೀಡಿ, 'ಅಡಿಕೆಗೆ ಗೌರವ ತಂದುಕೊಡುತ್ತೇವೆ. ಬೆಳೆಗಾರರ ಹಿತರಕ್ಷಣೆ ಮಾಡುತ್ತೇವೆ' ಎಂಬ ಭರವಸೆ ನೀಡಿದ್ದರು. ರಾಜ್ಯ ಸರ್ಕಾರ ಅಡಿಕೆ ಬೆಳೆಗಾರರ ಹಿತರಕ್ಷಣೆಗಾಗಿ ತೀರ್ಥಹಳ್ಳಿ ಶಾಸಕರಾಗಿದ್ದ ಆರಗ ಜ್ಞಾನೇಂದ್ರ ಅವರ ಅಧ್ಯಕ್ಷತೆಯಲ್ಲಿ 'ಅಡಿಕೆ ಕಾರ್ಯಪಡೆ' ರಚಿಸಿತ್ತು. ಕಾರ್ಯಪಡೆ ಮನವಿ ಮೇರೆಗೆ ರಾಮಯ್ಯ ಶಿಕ್ಷಣ ಸಂಸ್ಥೆಯ ಅನ್ವಯಿಕ ವಿಜ್ಞಾನ ವಿಭಾಗ ಅಡಿಕೆ ಕುರಿತು ಸಂಶೋಧನೆ ನಡೆಸಿತ್ತು. 'ಅಡಿಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ. ಔಷಧೀಯ ಗುಣಗಳನ್ನು ಒಳಗೊಂಡಿದೆ' ಎಂದು ಸಂಶೋಧನೆಯ ಬಳಿಕ ವರದಿ ನೀಡಿದೆ. ಈ ವರದಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಬೇಕಿದೆ.

'ಅಡಿಕೆಯ ಸಾಂಪ್ರದಾಯಿಕತೆ, ಮೌಲ್ಯ, ಪ್ರಾಚೀನತೆ ಕುರಿತು ಕೇಂದ್ರ ಸರ್ಕಾರ, ಕೋರ್ಟ್‌ಗೆ ಮನವರಿಕೆ ಮಾಡಿಕೊಡುವಲ್ಲಿ ಸಂಪೂರ್ಣ ವಿಫಲವಾಗಿದೆ. ತಂಬಾಕಿನಿಂದ ಕ್ಯಾನ್ಸರ್ ಹರಡುತ್ತದೆ ಎನ್ನುವುದು ಸಾಬೀತಾಗಿದ್ದರೂ, ತಂಬಾಕು ನಿಷೇಧಿಸದ ಸರ್ಕಾರ, ಔಷಧೀಯ ಗುಣಗಳುಳ್ಳ ಅಡಿಕೆ ನಿಷೇಧಿಸಲು ಹೊರಟಿದೆ' ಎಂದು ವಿವಿಧ ಪಕ್ಷಗಳು ಟೀಕಿಸಿವೆ.



ಬೆಳೆಗಳು	ಪ್ರದೇಶ (ಹೆಕ್ಟೇರ್‌ಗಳಲ್ಲಿ)	ಪ್ರಭಾವಿತ ಕ್ಷೇತ್ರಗಳು
ಅಡಿಕೆ	8 ಲಕ್ಷ	50
ತೊಗರಿ	6 ಲಕ್ಷ	30
ತೆಂಗು	6.5 ಲಕ್ಷ	40

'ತೊಗರಿ'ಯ ಜಿದ್ದಾಜಿದ್ದಿ

ಕಲಬುರಗಿ, ಯಾದಗಿರಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಫಲಿತಾಂಶದ ಮೇಲೆ ಪ್ರಭಾವ ಬೀರುವಷ್ಟು ತೊಗರಿ ಬೆಳೆ ಸಮಸ್ಯೆಗಳು ಸದ್ದು ಮಾಡಿವೆ. ಈ ಜಿಲ್ಲೆಗಳಲ್ಲಿ ತೊಗರಿ ಬೆಳೆಯಲಾಗುತ್ತದೆ. ಕಳೆದ ವರ್ಷ ಅತಿವೃಷ್ಟಿ, ಅನಾವೃಷ್ಟಿ ಹಾಗೂ ನೆಟೆ ರೋಗದಿಂದಾಗಿ 2.2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಗೆ ಹಾನಿಯಾಗಿತ್ತು. ಈ ಸಮಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ರೈತರಿಗೆ ಸರಿಯಾಗಿ ಸ್ಪಂದಿಸಲಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ. ಶಾಸಕ ಪ್ರಿಯಾಂಕ್ ಖರ್ಗೆ ನೇತೃತ್ವದಲ್ಲಿ ಬಿಜೆಪಿ ಶಾಸಕರಿಗೂ ಘೇರಾವ್ ಮಾಡಲಾಗಿದೆ. ತೊಗರಿ ಬೆಳೆಗಾಗರಿಗೆ ₹ 500 ಕೋಟಿ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿತ್ತು.

ಕಾಂಗ್ರೆಸ್ ಆರೋಪಕ್ಕೆ ತಿರುಗೇಟು ನೀಡಿದ ಬಿಜೆಪಿ, 'ನಮ್ಮ ಸರ್ಕಾರ ತೊಗರಿ ಬೆಳೆಗೆ ಸಂಭವಿಸಿದ ಬೆಳೆ ಹಾನಿಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಪ್ರತಿ ಹೆಕ್ಟೇರ್‌ಗೆ ₹ 10 ಸಾವಿರ ನೀಡಿದೆ. ₹ 223 ಕೋಟಿ ಪರಿಹಾರದ ಮೊತ್ತವನ್ನೂ ನೀಡಿದೆ. ಬಿಜೆಪಿ ಬೆಳೆಗಾರರ ಪರವಾಗಿದೆ' ಎಂದು ಪ್ರತಿಪಾದಿಸಿದೆ.

ಕಲಬುರಗಿಯಲ್ಲಿರುವ ತೊಗರಿ ಮಂಡಳಿಗೆ ₹ 500 ಕೋಟಿ ಹಣ ಬಿಡುಗಡೆ ಮಾಡಬೇಕು. ಕಲಬುರಗಿಯಲ್ಲಿ ತೊಗರಿ ಪಾರ್ಕ್ ನಿರ್ಮಿಸಬೇಕು. ರೈತರ ಬೆಳೆ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬೇಕು ಎನ್ನುವ ಬೇಡಿಕೆಗಳು ಈ ಬಾರಿಯ ಚುನಾವಣೆಯಲ್ಲಿ ಮತ್ತೆ ಮುನ್ನೆಲೆಗೆ ಬಂದಿವೆ.

ತೆಂಗು ಬೆಳೆಗಾರರ ಸಿಟ್ಟಿಗೆ ಸಚಿವರೇ ಸೋತಿದ್ದರು

ತೆಂಗಿನ ಬೆಳೆ ಹಾಗೂ ಬೆಲೆ ಹಳೇ ಮೈಸೂರು ಪ್ರಾಂತ್ಯದ ಕ್ಷೇತ್ರಗಳ ರಾಜಕೀಯದ ಮೇಲೆ ಪರಿಣಾಮ ಬೀರುತ್ತಲೇ ಬಂದಿದೆ. ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಟಿ.ಬಿ.ಜಯಚಂದ್ರ ಕೃಷಿ ಸಚಿವರಾಗಿದ್ದರು. ಆಗ ತೆಂಗು ಬೆಳೆಗೆ ನುಸಿ ಪೀಡೆ ಇನ್ನಿಲ್ಲದಂತೆ ಬಾಧಿಸಿತ್ತು. ರೋಗ ನಿಯಂತ್ರಿಸುವ ಸಲುವಾಗಿ ಮರದ ಕಾಂಡಕ್ಕೆ ಔಷಧ ಕೊಡಿಸಿದ್ದರು. ಇದರಿಂದ ನುಸಿಪೀಡೆ ಕಡಿಮೆಯಾಗುವ ಬದಲು ಮರಗಳೇ ಒಣಗಿ ಹೋಗಿದ್ದವು. ಸರಿಯಾದ ರೀತಿಯಲ್ಲಿ ಪ್ರಯೋಗ ಮಾಡದೆ ಔಷಧ ಕೊಡಿಸಿ ಮರ ಸಾಯುವಂತೆ ಮಾಡಿದರು ಎಂದು ತೆಂಗು ಬೆಳೆಗಾರರು ಸಿಟ್ಟಾದರು. ಇದರ ಪರಿಣಾಮವಾಗಿ 2004ರಲ್ಲಿ ನಡೆದ ಚುನಾವಣೆಯಲ್ಲಿ ಜಯಚಂದ್ರ ಸೋಲುವಂತಾಯಿತು.

ಇತ್ತೀಚಿನ ದಿನಗಳಲ್ಲಿ ಕೊಬ್ಬರಿ ಬೆಲೆ ಕುಸಿದು ಪಾತಾಳ ಮುಟ್ಟಿದ್ದರೂ ಈ ವಿಷಯ ಅಷ್ಟೊಂದು ತೀವ್ರತೆ ಪಡೆದುಕೊಂಡಿರಲಿಲ್ಲ. ಆದರೆ, ಚುನಾವಣೆ ಹೊತ್ತಿಗೆ ಈ ಕುರಿತು ಚರ್ಚೆ ಜೋರಾಗುತ್ತಿದೆ. ತೆಂಗು ಬೆಳೆಯುವ ತಿಪಟೂರು, ತುರುವೇಕೆರೆ, ಕುಣಿಗಲ್ ಭಾಗದಲ್ಲಿ ಹೆಚ್ಚು ಪ್ರಸ್ತಾಪವಾಗುತ್ತಿದೆ. ಮುಂದಿನ ದಿನಗಳಲ್ಲಾದರೂ ತೆಂಗಿಗೆ ಉತ್ತಮ ಬೆಲೆ ಕೊಡಿಸುವಂತಹ ಪಕ್ಷ, ವ್ಯಕ್ತಿಗಳಿಗೆ ಮತ ನೀಡಬೇಕು ಎಂಬ ಅಭಿಪ್ರಾಯ ಬಲಗೊಳ್ಳುತ್ತಿದೆ.

ಜಾರಿಯಾಗದ ಗೋರಖ್ ಸಿಂಗ್ ವರದಿ

ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಗೋರಖ್ ಸಿಂಗ್ ವರದಿ ಜಾರಿ ಮಾಡಬೇಕು ಎಂಬ ಆಗ್ರಹ ಮಲೆನಾಡಲ್ಲಿ ಮತ್ತೆ ಪ್ರತಿಧ್ವನಿಸುತ್ತಿದೆ. ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಯುಪಿಎ ನೇತೃತ್ವದ ಕೇಂದ್ರ ಸರ್ಕಾರ 2007ರಲ್ಲಿ ಕೇಂದ್ರ ತೋಟಗಾರಿಕಾ ಇಲಾಖೆಯ ಆಯುಕ್ತರಾಗಿದ್ದ ಗೋರಖ್ ಸಿಂಗ್ ಅವರನ್ನು ನೇಮಿಸಿತ್ತು. ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ, ಹಾಸನ, ದಾವಣಗೆರೆ, ಉಡುಪಿ, ದಕ್ಷಿಣ ಕನ್ನಡ, ಚಿತ್ರದುರ್ಗ ಸೇರಿದಂತೆ ಅಡಿಕೆ ಬೆಳೆಯುವ ಪ್ರದೇಶಗಳಿಗೆ ಭೇಟಿ ನೀಡಿದ್ದ ಸಿಂಗ್ ಅವರು, 2009ರಲ್ಲಿ ಸಲ್ಲಿಸಿದ್ದ ವರದಿಯಲ್ಲಿ ಮಲೆನಾಡಿನ ಸಣ್ಣ ಪ್ರಮಾಣದ ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಹಲವು ಶಿಫಾರಸುಗಳನ್ನು ಮಾಡಿದ್ದರು.

'ರಾಜ್ಯದ ಬೇರೆ ಪ್ರದೇಶಗಳಲ್ಲಿ ಅಡಿಕೆ ಬೆಳೆದರೂ ಹಳದಿ ಎಲೆ ರೋಗ, ಎಲೆ ಚುಕ್ಕಿ ರೋಗದಿಂದ ಮಲೆನಾಡಿನ ಭಾಗದ ಅಡಿಕೆ ಬೆಳೆಗಾರರು ಹೈರಾಣಾಗಿದ್ದಾರೆ. ರೋಗ ಬಾಧೆಗೆ ತುತ್ತಾದ 10 ಎಕರೆ ಒಳಗಿನ ಬೆಳೆಗಾರರ ಸಾಲ ಮನ್ನಾ ಮಾಡಬೇಕು. ಉಚಿತ ಔಷಧಗಳನ್ನು ದೊರಕಿಸಬೇಕು. ಹೊಸ ಸಾಲಸೌಲಭ್ಯ, ಆರ್ಥಿಕ ನೆರವು, ಪ್ರೋತ್ಸಾಹಧನ ಒದಗಿಸಬೇಕು ಎನ್ನುವುದು' ವರದಿಯ ಪ್ರಮುಖ ಶಿಫಾರಸುಗಳು. ವರದಿ ಜಾರಿಗೆ ಜೆಡಿಎಸ್‌ನ ಎಚ್.ಡಿ.ದೇವೇಗೌಡರು ಸಂಸತ್‌ನಲ್ಲೇ ಆಗ್ರಹಿಸಿದ್ದರು. ಯುಪಿಎ ಅಧಿಕಾರ ಕಳೆದುಕೊಂಡು ಎನ್‌ಡಿಎ ಗದ್ದುಗೆ ಏರಿದರೂ ವರದಿಯ ಶಿಫಾರಸುಗಳು ಅನುಷ್ಠಾನಗೊಂಡಿಲ್ಲ. ವಿಧಾನಸಭಾ ಅಧಿವೇಶನಗಳಲ್ಲೂ ಸಮಸ್ಯೆಗಳು ಪ್ರತಿಧ್ವನಿಸಿದರೂ, ಪರಿಣಾಮ ಶೂನ್ಯ.

ಸಮಿತಿ ಅಧ್ಯಯನ ಮಾಡುವಾಗ ರಾಜ್ಯದಲ್ಲಿ ಇದ್ದ ಅಡಿಕೆ ಬೆಳೆ ಕ್ಷೇತ್ರ 1.74 ಲಕ್ಷ ಹೆಕ್ಟೇರ್. ಅಡಿಕೆ ಬೆಳೆಯನ್ನು ಅಚ್ಚುಕಟ್ಟು, ಕೊಳವೆ ಬಾವಿ ಆಶ್ರಿತ ಬಯಲು ಸೀಮೆಯಲ್ಲಿ ಬೆಳೆಯದಂತೆ ನಿಷೇಧಿಸಬೇಕು ಎಂದು ಗೋರಖ್ ಸಿಂಗ್ ವರದಿ ಹೇಳಿದ್ದರೂ, ಇಂದು ಅಡಿಕೆ ಬೆಳೆ ಪ್ರದೇಶ 8 ಲಕ್ಷ ಹೆಕ್ಟೇರ್‌ಗೆ ವಿಸ್ತರಿಸಿದೆ.

ವಿದೇಶಿ ಅಡಿಕೆ ಆಮದು ತಡೆಗೆ ವಿಫಲ



ಅಡಿಕೆ ಬೆಲೆ ಸ್ಥಿರತೆ ಕೇಂದ್ರ ಸರ್ಕಾರದ ಜವಾಬ್ದಾರಿ. ವಿದೇಶದಿಂದ ಆಮದು ಮಾಡಿಕೊಳ್ಳುವ ಒಂದು ಕ್ವಿಂಟಲ್ ಅಡಿಕೆಗೆ ₹ 25,100 ಕನಿಷ್ಠ ಬೆಲೆ ನಿಗದಿಯಾಗಿದೆ. ಆದರೂ, ಕಳ್ಳ ಸಾಗಣೆ ಮೂಲಕವು ಅಡಿಕೆ ತರಲಾಗುತ್ತಿದೆ. ಇದು ದೇಸಿ ಅಡಿಕೆ ಧಾರಣೆ ಕುಸಿಯಲು ಪ್ರಮುಖ ಕಾರಣ. ಅಡಿಕೆ ಬೆಳೆಗಾರರ ಸಂರಕ್ಷಣೆಗೆ ಬದ್ಧ ಎನ್ನುವ ಬಿಜೆಪಿ ಕೇಂದ್ರದ ಮೇಲೆ ಒತ್ತಡ ತಂದು ವಿದೇಶಿ ಅಡಿಕೆಗೆ ಕಡಿವಾಣ ಹಾಕಬೇಕು

ಬಿ.ಎ.ರಮೇಶ್ ಹೆಗ್ಡೆ, ಕಾಂಗ್ರೆಸ್ ಮುಖಂಡ, ಶಿವಮೊಗ್ಗ.


ಮಧ್ಯವರ್ತಿಗಳಿಂದಲೇ ಧಾರಣೆ ಏರಿಳಿತ



ಅಡಿಕೆ ಧಾರಣೆ ಕುಸಿತ ಹಲವು ಚುನಾವಣೆಗಳಲ್ಲಿ ರಾಜಕೀಯ ತಲ್ಲಣಗಳನ್ನೇ ಸೃಷ್ಟಿಸಿದೆ. ಹಾಗೆ ನೋಡಿದರೆ ಧಾರಣೆ ನಿಯಂತ್ರಣ ಸರ್ಕಾರಗಳ ಬಳಿ ಇಲ್ಲ. ಗುಟ್ಕಾ ಕಂಪನಿಗಳ ಜತೆ ಒಪ್ಪಂದ ಮಾಡಿಕೊಂಡ ಕೆಲ ಮಧ್ಯವರ್ತಿಗಳು ತಮಗೆ ಬೇಕಾದ ಹಾಗೆ ಧಾರಣೆ ನಿರ್ಧಾರ ಮಾಡುತ್ತಾರೆ. ಆದರೆ, ಬೆಲೆ ಕುಸಿತದ ಆಕ್ರೋಶವನ್ನು ನಮ್ಮನ್ನಾಳುವ ಸರ್ಕಾರಗಳು ಎದುರಿಸುತ್ತಾ ಬಂದಿವೆ. ರೈತರೇ ನೇರ ಮಾರುಕಟ್ಟೆ ಪ್ರವೇಶಿಸಿ ವ್ಯಾಪಾರ ಮಾಡುವಂತಹ ಸ್ಥಿತಿ ನಿರ್ಮಾಣವಾದಾಗಲಷ್ಟೇ ಧಾರಣೆ ಸ್ಥಿರತೆ ಸಾಧ್ಯ

ಎನ್.ಎಸ್.ರುದ್ರೇಶ್, ಹುನುಮಂತಾಪುರ, ಅಡಿಕೆ ಬೆಳೆಗಾರ.

ವೈಜ್ಞಾನಿಕ ಬೆಲೆ ನಿಗದಿಯೇ ಪರಿಹಾರ



ಬೆಲೆ ಏರಿಳಿಕೆ ಎನ್ನುವುದು ಎಷ್ಟೋ ಸರ್ಕಾರಗಳ ಮೇಲೆ ಪರಿಣಾಮ ಬೀರಿವೆ. ಈರುಳ್ಳಿ ಬೆಲೆ ಏರಿಕೆಯ ವಿರುದ್ಧದ ಜನರ ಆಕ್ರೋಶ ದೆಹಲಿಯಲ್ಲಿ ಸುಷ್ಮಾ ಸ್ವರಾಜ್ ಅವರ ಸರ್ಕಾರವನ್ನೇ ಉರುಳಿಸಿದ್ದು ನಮ್ಮ ಕಣ್ಣ ಮುಂದಿದೆ. ಆದರೆ, ಯಾವ ಸರ್ಕಾರವೂ ಬೆಲೆ ಸ್ಥಿರತೆಯತ್ತ ಗಮನ ಹರಿಸಿಲ್ಲ. ಯಾವುದೇ ಸಿದ್ಧ ಸಾಮಗ್ರಿಗೆ ಗರಿಷ್ಠ ಮಾರಾಟ ಬೆಲೆ (ಎಂಆರ್‌ಪಿ) ಇರುವಂತೆ ರೈತರು ಬೆಳೆಯುವ ಪ್ರತಿ ಬೆಳೆಗೂ ಬೆಲೆ ನಿಗದಿಯಾಗಬೇಕು. ಬೆಂಬಲ ಬೆಲೆ ಬದಲು ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು. ಆಗ ಮಾತ್ರ ಬೆಲೆ ರಾಜಕಾರಣಕ್ಕೆ ವಿರಾಮ ಸಿಗುತ್ತದೆ

ಎಚ್.ಆರ್.ಬಸವರಾಜಪ್ಪ, ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ.


ಹೋರಾಟ ಅನಿವಾರ್ಯ



ನೆಟೆ ರೋಗದಿಂದ ತೊಗರಿ ಬೆಳೆ ಕಳೆದುಕೊಂಡು ರೈತರು ಈಗಾಗಲೇ ಸಂಕಷ್ಟದಲ್ಲಿದ್ದಾರೆ. ಸರ್ಕಾರವು ಸಮರ್ಪಕ ಪರಿಹಾರ ನೀಡದೇ ಮತ್ತು ಸಂಕಷ್ಟಗಳಿಗೆ ಸ್ಪಂದಿಸದೇ ನಿರ್ಲಕ್ಷ್ಯ ತೋರುವುದು ಮುಂದುವರೆಸಿದೆ. ರೈತರ ಬೇಡಿಕೆ ಈಡೇರಿಕೆಗೆ ಹೋರಾಟ ಮುಂದುವರೆಸುತ್ತೇವೆ

ಶರಣಬಸಪ್ಪ ಮಮಶೆಟ್ಟಿ, ಅಧ್ಯಕ್ಷ, ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಘಟಕ, ಕಲಬುರಗಿ

ಬುದ್ಧಿ ಕಲಿಸುತ್ತೇವೆ



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿದ್ದು, ಕೊಬ್ಬರಿಗೆ ಸೂಕ್ತ ಬೆಲೆ ಕೊಡಿಸುವಲ್ಲಿ ವಿಫಲವಾಗಿವೆ. ಪ್ರತಿ ಬಾರಿಯೂ ಚುನಾವಣೆ ಸಮಯದಲ್ಲಿ ಪ್ರಣಾಳಿಕೆಗಳನ್ನು ಹಿಡಿದು ರೈತರ ಬಳಿ ಬಂದು ಹುಸಿ ಭರವಸೆಗಳನ್ನು ನೀಡುತ್ತಿದ್ದಾರೆ. ಬೆಲೆ ಏರಿಕೆಗಾಗಿ ಹೋರಾಟ ಮಾಡಿದರೂ ಕಾಳಜಿ ತೋರದ ಸಚಿವರು, ಸರ್ಕಾರಕ್ಕೆ ರಾಜ್ಯದ ರೈತರೇ ಬುದ್ಧಿ ಕಲಿಸುತ್ತಾರೆ. 'ಕಲ್ಪತರು ನಾಡು' ತಿಪಟೂರಿನಲ್ಲಿ ಕೊಬ್ಬರಿಗೆ ಬೇಡಿಕೆ ಇಲ್ಲದೇ ರೈತರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ

ಬಿ.ಬಿ.ಸಿದ್ದಲಿಂಗಮೂರ್ತಿ, ಬಳ್ಳೇಕಟ್ಟೆ, ಗೌರವಾಧ್ಯಕ್ಷರು, ಕೊಬ್ಬರಿ ಬೆಲೆ ಹೋರಾಟ ಸಮಿತಿ, ತಿಪಟೂರು

ಆಮದು ತೆರಿಗೆ ಹೆಚ್ಚಳದಿಂದ ಅನುಕೂಲ



ಅಡಿಕೆ ಬೆಳೆಗಾರರ ಹಿತಕಾಯಲು ಬಿಜೆಪಿ ಸರ್ಕಾರವು ಶ್ರಮಿಸುತ್ತಿದೆ. ಅಡಿಕೆ ಮರಗಳನ್ನು ಬಾಧಿಸುತ್ತಿರುವ ಎಲೆ ಚುಕ್ಕಿ, ಕೊಳೆ ರೋಗ, ಹಳದಿ ಎಲೆ ರೋಗಗಳ ಹತೋಟಿಗೆ ಪ್ರಯತ್ನ ಮಾಡುತ್ತಿದೆ. ಆದರೆ, ಫಲಿತಾಂಶ ಆಶಾದಾಯಕವಾಗಿಲ್ಲ. ಆಮದು ತೆರಿಗೆ ಸ್ವಲ್ಪ ಹೆಚ್ಚಿಸಿರುವುದು ಅನುಕೂಲವಾಗಿದೆ. ಅಡಿಕೆ ಬೆಲೆ ನಾಲ್ಕು ವರ್ಷಗಳಿಂದ ಪರವಾಗಿಲ್ಲ, ಧಾರಣೆಯಲ್ಲಿ ತೀವ್ರ ಏರಿಳಿತ ಇಲ್ಲ. ಸರಾಸರಿ ಸ್ಥಿರತೆ ಇದ್ದರೆ ಬೆಳೆಗಾರರು ಮತ್ತು ವ್ಯಾಪಾರಸ್ಥರಿಗೆ ಒಳ್ಳೆಯದು

ಎ.ಎಸ್.ನಯನ, ಜಿಲ್ಲಾ ಉಪಾಧ್ಯಕ್ಷ, ಬಿಜೆಪಿ, ಚಿಕ್ಕಮಗಳೂರು



ಮತ ಜಾಗೃತಿಗಾಗಿ ಸೆಲ್ಫಿ

ಬಳ್ಳಾರಿ ಜಿಲ್ಲಾ ಸ್ವೀಪ್ ಸಮಿತಿ ಮತದಾನ ಜಾಗೃತಿಗೆ ಭಾನುವಾರ ಏರ್ಪಡಿಸಿದ್ದ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದ ಯುವಕರು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು

–ಪ್ರಜಾವಾಣಿ ಚಿತ್ರ

ಸೆಲೆಬ್ರಿಟಿ ಮಾತು



ಜನಪರ ಕಾಳಜಿ ಇರುವವರನ್ನು ಆರಿಸಿ

ನೀನಾಸಂ ಸತೀಶ, ನಟ

ಯಾರು ಯಾರಿಗೆ ಬೇಕಾದರೂ ಮತ ಚಲಾಯಿಸಬಹುದು. ಅದು ಅವರ ವೈಯಕ್ತಿಕ ನಿರ್ಧಾರ. ಒಳ್ಳೆಯ ಮತ್ತು ಸುಲಭವಾಗಿ ಸಂಪರ್ಕಕ್ಕೆ ಸಿಗಬಲ್ಲ ವ್ಯಕ್ತಿಯ ಪರ ಮತ ಚಲಾಯಿಸಬೇಕು. ನಿಮ್ಮ ಹಕ್ಕುಗಳನ್ನು ಕಿತ್ತುಕೊಳ್ಳುವವರಿಗೆ ಯಾವುದೇ ಕಾರಣಕ್ಕೂ ಮತ ಹಾಕಬಾರದು. ಕ್ಷೇತ್ರದ ಅಭಿವೃದ್ಧಿ ಮತ್ತು ಜನಪರ ಕಾಳಜಿ ತೋರುವವರನ್ನು ಆಯ್ಕೆ ಮಾಡಬೇಕು.

ಮಾತಿನೇಟು



'ನಾನಲ್ಲ, ನನ್ನ ಹಣವೂ ಬಿಜೆಪಿ ಕಚೇರಿಯತ್ತ ಹೋಗಬಾರದು' ಎಂದು ಲಕ್ಷ್ಮಣ ಸವದಿ ಹೇಳಿದ್ದಾರೆ. ಬಿಜೆಪಿ ಕಚೇರಿಯತ್ತ ಅವರ ಹಣ ಕೊಂಡೊಯ್ಯಲು ಅವರೇನು ಅಟಲ್ ಬಿಹಾರಿ ವಾಜಪೇಯಿ, ಅನಂತಕುಮಾರ್ ಅವರೇ? ಅವರ ಹಣ ಬಿಜೆಪಿ ಕಚೇರಿ ಕಡೆಗಲ್ಲ, ಸ್ಮಶಾನದ ಕಡೆಗೇ ಹೋಗಬೇಕು.

ಬಸನಗೌಡ ಪಾಟೀಲ ಯತ್ನಾಳ, ಶಾಸಕ, ವಿಜಯಪುರ ನಗರ ಕ್ಷೇತ್ರ

ಪ್ರಜಾ ಪತ್ರ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ. 9606038256

ಮತ ಕೇಳಲು ಬಂದಾಗ ಪ್ರಶ್ನಿಸಿ



ಮತದಾರರು ಅಭ್ಯರ್ಥಿಗಳು ಗೆದ್ದ ಮೇಲೆ ಯಾವುದೇ ಮೂಲಸೌಕರ್ಯ ನೀಡಲಿಲ್ಲ ಎಂದು ಬೈಯುವ ಬದಲು, ಅವರು ಮತ ಕೇಳಲು ನಿಮ್ಮ ಮತಕ್ಷೇತ್ರಕ್ಕೆ ಬಂದಾಗ ಈ ಕೆಳಕಂಡ ಪ್ರಶ್ನೆಗಳನ್ನು ಏಕೆ ಕೇಳಬಾರದು? ಗ್ಯಾಸ್, ಹಾಲು, ಪೆಟ್ರೋಲು ದಿನಸಿ, ತರಕಾರಿ ಬೆಲೆಗಳು ಗಗನಕ್ಕೆ ತಲುಪಿದೆ. ಇದರ ಬಗ್ಗೆ ತಾವು ಯಾವ ರೀತಿ ಹೋರಾಟ ಹಾಗೂ ಯೋಜನೆಗಳನ್ನು ರೂಪಿಸಿದ್ದೀರಿ? ನಿಮ್ಮ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳು, ಬಡಾವಣೆಗಳು ಬರುತ್ತವೆ, ಒಟ್ಟು ಜನಸಂಖ್ಯೆಯಲ್ಲಿ ಎಷ್ಟು ಜನ ಹಿಂದುಳಿದವರು, ಮಹಿಳೆಯರು, ಹಿರಿಯ ನಾಗರಿಕರು, ಮಕ್ಕಳಿದ್ದಾರೆ ಮತ್ತು ಅವರ ಸಮಸ್ಯೆಗಳೇನು ಎಂಬುದನ್ನು ತಿಳಿಸಿ ಎಂದು ಕೇಳಬೇಕು. ಮುಂದೆ ನೀವು ಗೆದ್ದ ನಂತರ ನಮ್ಮ ಕ್ಷೇತ್ರದಲ್ಲಿ ಸುಸಜ್ಜಿತ ಆಸ್ಪತ್ರೆ, ಡಯಾಗ್ನೋಸ್ಟಿಕ್ ಸೆಂಟರ್ ಹಾಗೂ ಕೇಂದ್ರೀಯ ವಿದ್ಯಾಲಯದಲ್ಲಿ ದೊರಕುವ ಗುಣಮಟ್ಟದ ಹಾಗೂ ಮೌಲ್ಯ ಶಿಕ್ಷಣವನ್ನು ನಮ್ಮ ಸರ್ಕಾರಿ ಶಾಲೆಗಳಲ್ಲಿ ದೊರಕುವಂತೆ ಮಾಡುವುದಾಗಿ ನಿಮ್ಮ ಪ್ರಣಾಳಿಕೆಯಲ್ಲಿ ಭರವಸೆ ನೀಡುತ್ತೀರಾ...? ಎನ್ನುವುದನ್ನೂ ಪ್ರಶ್ನಿಸಬೇಕು.

ಡಾ.ಸತೀಶ್ ಗೌಡ ಎನ್., ಸಹ ಪ್ರಾಧ್ಯಾಪಕ, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂಗಳೂರು

ಪ್ರಜಾಪ್ರಭುತ್ವದ ಉಸಿರು



ಜನರಿಂದ, ಜನರಿಗಾಗಿ, ಜನರಿಗೋಸ್ಕರ ಉತ್ತಮ ಆಡಳಿತ ನೀಡುವ ಪಕ್ಷವನ್ನು ಆಯ್ಕೆ ಮಾಡಬೇಕು. ಚುನಾವಣೆಗಳು ಪ್ರಜಾಪ್ರಭುತ್ವದ ಉಸಿರಿನಂತೆ ಕಾರ್ಯ ನಿರ್ವಹಿಸುತ್ತವೆ. ಪ್ರಜೆಗಳ ರಕ್ಷಣೆಗೆ ಆದ್ಯತೆ ನೀಡುವಂತಹ ಪಕ್ಷಗಳನ್ನೇ ಜನರು ಆಯ್ಕೆ ಮಾಡಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಪೂರಕವಾಗಿ ಕೆಲಸಗಳನ್ನು ಮಾಡಬೇಕು. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಭಗೀರಥನ ಹಾಗೆ ಇರಬೇಕು. ತಾನು ಮಾಡುವ ಕೆಲಸಗಳಲ್ಲಿ ಪ್ರಾಮಾಣಿಕತೆ, ಸಮಯಪ್ರಜ್ಞೆ, ಸಾರ್ವಜನಿಕರ ಕಷ್ಟಗಳಿಗೆ ಸ್ಪಂದಿಸುವ ಮನಸ್ಸು ಇರಬೇಕು. ಪ್ರಣಾಳಿಕೆ ಎಂಬುದು ಗೋರ್ಕಲ್ಲಿನ ಮೇಲೆ ನೀರು ಸುರಿದಂತಿರಬಾರದು. ಅದು ಸತ್ಯ ಹರಿಶ್ಚಂದ್ರನ ಮಾತಿನಂತಿರಬೇಕು. ದೇಶವನ್ನು ಕಲ್ಯಾಣ ರಾಜ್ಯವನ್ನಾಗಿ ಪರಿವರ್ತಿಸುವ ಉದ್ದೇಶ ಹೊಂದಿರುವ ಜನ ನಾಯಕನಿಗೆ ಮತ ಚಲಾಯಿಸೋಣ.

ಕಾರುಣ್ಯ, ಬೆಂಗಳೂರು

ಗಾಳಿ ಮಾತು

ಮಂಡ್ಯದಲ್ಲೂ ಸ್ಪರ್ಧಿಸ್ತಾರಾ ಕುಮಾರಸ್ವಾಮಿ



ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಚನ್ನಪಟ್ಟಣ ಜೊತೆಗೆ ಮಂಡ್ಯ ವಿಧಾನಸಭಾ ಕ್ಷೇತ್ರದಿಂದಲೂ ಕಣಕ್ಕಿಳಿಯುತ್ತಾರೆ ಎನ್ನುವ ಸುದ್ದಿ ಮತ್ತೊಮ್ಮೆ ರೆಕ್ಕೆಪುಕ್ಕ ಕಟ್ಟಿಕೊಂಡು ಮಂಡ್ಯದಲ್ಲಿ ಹಾರಾಡುತ್ತಿದೆ.

ಈ ಬಗ್ಗೆ ತಿಂಗಳ ಹಿಂದೆಯೇ ಚರ್ಚೆ ಹುಟ್ಟಿಕೊಂಡಿತ್ತು. ಕುಮಾರಸ್ವಾಮಿ ಇಲ್ಲೂ ಸ್ಪರ್ಧಿಸುತ್ತಾರೆ, ಅವರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಸಂಸದೆ ಸುಮಲತಾ ಕಣಕ್ಕಿಳಿಯುತ್ತಾರೆ ಎನ್ನುವ ಸುದ್ದಿ ಗಾಳಿಯಲ್ಲಿ ತೇಲಾಡುತ್ತಿತ್ತು. ಅದಕ್ಕೆ ಸ್ಪಷ್ಟನೆ ನೀಡಿದ್ದ ಎಚ್‌ಡಿಕೆ ಚನ್ನಪಟ್ಟಣದಿಂದ ಮಾತ್ರ ಸ್ಪರ್ಧಿಸುವೆ ಎಂದಿದ್ದರು.

ಆದರೆ, ಕಳೆದೆರಡು ದಿನಗಳಿಂದ ಸುದ್ದಿ ಮತ್ತೆ ಜೋರಾಗಿದೆ. ಅದಕ್ಕೆ ಕಾರಣ ಮಂಡ್ಯ ಕ್ಷೇತ್ರದಲ್ಲಿರುವ ಟಿಕೆಟ್ ಬದಲಾವಣೆಯ ಕಗ್ಗಂಟಂತೆ. ಜೆಡಿಎಸ್ ಮೊದಲ ಪಟ್ಟಿಯಲ್ಲಿ ಮಂಡ್ಯ ಕ್ಷೇತ್ರದಿಂದ ಶಾಸಕ ಎಂ.ಶ್ರೀನಿವಾಸ್ ಹೆಸರು ಘೋಷಿಸಿತ್ತು. ನಂತರ ಅವರ ಅನಾರೋಗ್ಯದ ಕಾರಣದಿಂದಾಗಿ ಕೆ.ವಿ.ಶಂಕರಗೌಡರ ಮೊಮ್ಮಗ ಕೆ.ಎಸ್.ವಿಜಯ್ ಆನಂದ್ ಅವರಿಗೆ ಕ್ಷೇತ್ರ ಬಿಟ್ಟುಕೊಡುವಂತೆ ಕೋರಲಾಗಿತ್ತು. ಇದಕ್ಕೆ ಒಪ್ಪದ ಶ್ರೀನಿವಾಸ್, 'ನನಗೇ ಅವಕಾಶ ಕೊಡಬೇಕು. ಇಲ್ಲ ಅಳಿಯ, ಜಿ.ಪಂ. ಮಾಜಿ ಸದಸ್ಯ ಎಚ್.ಎನ್.ಯೋಗೇಶ್ ಅವರಿಗೆ ಟಿಕೆಟ್ ನೀಡಬೇಕು' ಎಂದು ಪಟ್ಟು ಹಿಡಿದಿದ್ದಾರೆ. ಇನ್ನೊಂದೆಡೆ 'ಮನ್‌ಮುಲ್' ಅಧ್ಯಕ್ಷ ಬಿ.ಆರ್.ರಾಮಚಂದ್ರು ಕೂಡ ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿದ್ದಾರೆ. ಎಲ್ಲವೂ ಸ್ಪಷ್ಟವಾದ ನಂತರವೇ ನಾಮಪತ್ರ ಸಲ್ಲಿಸೋಣ ಎಂದು ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ನಿರ್ಧರಿಸಿದ್ದಾರಂತೆ.

ಇದರಿಂದ ಉಂಟಾಗಿರುವ ಗೊಂದಲ ನಿವಾರಣೆಗೆ ಸ್ಥಳೀಯ ಮುಖಂಡರು ಚನ್ನಪಟ್ಟಣದ ಜೊತೆಗೆ ಮಂಡ್ಯದಲ್ಲೂ ಸ್ಪರ್ಧಿಸುವಂತೆ ಒತ್ತಾಯ ಮಾಡಿದ್ದಾರೆ. ಅದಕ್ಕೆ ಕುಮಾರಸ್ವಾಮಿ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರಂತೆ.

ಕ್ಷೇತ್ರದ ಕೂಗು

• **ಕ್ಷೇತ್ರ: ದಾವಣಗೆರೆ ಉತ್ತರ**
• **ಶಾಸಕ: ಎಸ್.ಎ. ರವೀಂದ್ರನಾಥ್** (ಬಿಜೆಪಿ)

▸ ಚಿಗಟೇರಿ ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕು. ವೈದ್ಯಕೀಯ ಕಾಲೇಜು ಮಂಜೂರು ಮಾಡಬೇಕು ಎಂಬ ಬೇಡಿಕೆಗೆ ಮನ್ನಣೆ ಸಿಕ್ಕಿಲ್ಲ. ಜಿಲ್ಲಾ ಕೇಂದ್ರದಲ್ಲಿ ಜವಳಿ ಪಾರ್ಕ್ ನಿರ್ಮಿಸಬೇಕೆಂಬ ಕೂಗು ಇದೆ. ಐಟಿ ಹಬ್, ಉದ್ಯೋಗ ಸೃಷ್ಟಿ ಯೋಜನೆಗಳು, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಬಡಾವಣೆ, ಬೃಹತ್ ಕೈಗಾರಿಕೆ ಘಟಕಗಳನ್ನು ಸ್ಥಾಪಿಸಬೇಕು ಎಂಬ ದಶಕದ ಬೇಡಿಕೆ ಸಾಕಾರಗೊಂಡಿಲ್ಲ.



• **ಕ್ಷೇತ್ರ: ದಾವಣಗೆರೆ ದಕ್ಷಿಣ**
ಶಾಸಕ: ಶಾಮನೂರು ಶಿವಶಂಕರಪ್ಪ (ಕಾಂಗ್ರೆಸ್)

▸ ಕೈಗಾರಿಕಾ ಕಾರಿಡಾರ್ ನಿರ್ಮಿಸಬೇಕೆಂಬ ದಶಕಗಳ ಬೇಡಿಕೆ ಕನಸಾಗಿಯೇ ಉಳಿದಿದೆ. ಕೂಲಿ ಕಾರ್ಮಿಕರು ಹೆಚ್ಚಿರುವ ಹಳೆಯ ದಾವಣಗೆರೆ ಭಾಗದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಮರೀಚಿಕೆಯಾಗಿದೆ. ಮಂಡಕ್ಕಿ ಭಟ್ಟಿಗಳನ್ನು ಹೊಸ ಲೇಔಟ್ ಮಾಡಿ ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಪೈಲಟ್ ಯೋಜನೆ ಸ್ಥಗಿತಗೊಂಡಿದೆ. ಸ್ಮಾರ್ಟ್ ಸಿಟಿ ಅಡಿ ವಿದ್ಯುತ್ ಯಂತ್ರ ಬಳಸಿ ಮಂಡಕ್ಕಿ ತಯಾರಿಸುವ ಪ್ರಾಯೋಗಿಕ ಪರೀಕ್ಷೆ ಜಾರಿಗೆ ಬರಲಿಲ್ಲ. ಪಾಳು ಬಿದ್ದಿರುವ ಇಲ್ಲಿನ ಕೈಗಾರಿಕಾ ಪ್ರದೇಶಕ್ಕೆ ಬೃಹತ್ ಕೈಗಾರಿಕೆಗಳನ್ನು ಸೆಳೆಯಬೇಕು ಎಂಬ ಬೇಡಿಕೆಗೆ ಮನ್ನಣೆ ಸಿಕ್ಕಿಲ್ಲ.



• **ಕ್ಷೇತ್ರ: ಮಾಯಕೊಂಡ**
• **ಶಾಸಕ: ಪ್ರೊ.ಎನ್. ಲಿಂಗಣ್ಣ** (ಬಿಜೆಪಿ)

▸ ತಾಲ್ಲೂಕು ಕೇಂದ್ರ ಮಾಡಬೇಕೆಂಬ ನಾಲ್ಕು ದಶಕಗಳ ಬೇಡಿಕೆ ಬೇಡಿಕೆಯಾಗಿಯೇ ಉಳಿದಿದೆ. ಕ್ಷೇತ್ರದಾದ್ಯಂತ ಕೆರೆಗಳಿಗೆ ನೀರು ತುಂಬಿಸುವ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಆಮೆಗತಿಯಲ್ಲಿ ಸಾಗಿದೆ. ಮೂಲಸೌಲಭ್ಯ, ಅಗತ್ಯ ನೀರಾವರಿ ಯೋಜನೆಗಳನ್ನು ಜಾರಿ ಮಾಡಬೇಕಿದೆ.



• **ಕ್ಷೇತ್ರ: ಜಗಳೂರು**
• **ಶಾಸಕ: ಎಸ್.ವಿ. ರಾಮಚಂದ್ರ** (ಬಿಜೆಪಿ)

▸ ನೂರು ಹಾಸಿಗೆಯ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಕಾಯಕಲ್ಪ ಬೇಕಿದೆ. ಆಸ್ಪತ್ರೆಯಲ್ಲಿ ಒಬ್ಬರೂ ಫಿಜಿಷಿಯನ್ ಇಲ್ಲ. ₹ 640 ಕೋಟಿ ವೆಚ್ಚದ 57 ಕೆರೆಗಳನ್ನು ತುಂಬಿಸುವ ಯೋಜನೆ ಐದಾರು ವರ್ಷಗಳಿಂದ ಆಮೆಗತಿಯಲ್ಲಿ ಸಾಗಿದೆ. ಈ ಭಾಗದ ಜನರ ಬದುಕು ಹಸನಾಗಿಸುವ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಅನುಷ್ಠಾನ ಆಗಬೇಕಿದೆ.



• **ಕ್ಷೇತ್ರ: ಹೊನ್ನಾಳಿ**
• **ಶಾಸಕ: ಎಂ.ಪಿ. ರೇಣುಕಾಚಾರ್ಯ** (ಬಿಜೆಪಿ)

▸ ಹೊನ್ನಾಳಿಯ ರಾಜ್ಯ ಹೆದ್ದಾರಿಗಳನ್ನು ನೂರು ಅಡಿಗಳವರೆಗೆ ವಿಸ್ತರಿಸಬೇಕಿದೆ. ಖಾಸಗಿ ಬಸ್ ನಿಲ್ದಾಣವನ್ನು ಹೈಟೆಕ್ ನಿಲ್ದಾಣವನ್ನಾಗಿಸಬೇಕು. ಕೈಗಾರೀಕರಣಕ್ಕೆ ಒತ್ತು ನೀಡಬೇಕು. ಶೀತಲೀಕರಣ ಘಟಕ, ಮಿನಿ ವಿಧಾನಸೌಧವನ್ನು ನಿರ್ಮಿಸಬೇಕಿದೆ.



ನ್ಯಾಮತಿ ನೂತನ ತಾಲ್ಲೂಕು ರಚನೆಯಾಗಿದ್ದರೂ ತಾಲ್ಲೂಕು ಕಚೇರಿ ಮತ್ತು ತಾಲ್ಲೂಕು ಪಂಚಾಯಿತಿ ಹೊರತುಪಡಿಸಿ ಉಳಿದ 32 ಸರ್ಕಾರಿ ಕಚೇರಿಗಳು ಆರಂಭವಾಗಿಲ್ಲ. ಸಾಮರ್ಥ್ಯಸೌಧಕ್ಕೆ ಅನುದಾನ ಬಿಡುಗಡೆಯಾಗಿಲ್ಲ. ತಾಲ್ಲೂಕು ಕೇಂದ್ರ ಸೇರಿದಂತೆ ವಿವಿಧ ಗ್ರಾಮಗಳಿಗೆ ಸರ್ಕಾರಿ ಬಸ್ ಸೌಲಭ್ಯ ಇಲ್ಲ. ಸವಳಂಗ ಕಾಯಕ ಕೆರೆಗೆ ಏತ ನೀರಾವರಿ ಯೋಜನೆ ಅನುಷ್ಠಾನವಾಗಬೇಕಿದೆ. ಸುಸಜ್ಜಿತ ಸರ್ಕಾರಿ ಮತ್ತು ಖಾಸಗಿ ಬಸ್ ನಿಲ್ದಾಣ ನಿರ್ಮಾಣ ಆಗಬೇಕಿದೆ.

• **ಕ್ಷೇತ್ರ: ಹರಿಹರ**
• **ಶಾಸಕ: ಎಸ್. ರಾಮಪ್ಪ** (ಕಾಂಗ್ರೆಸ್)

▸ ಕ್ಷೇತ್ರದ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ನಾಲೆ ನೀರು ಸಮರ್ಪಕವಾಗಿ ಸಿಗುತ್ತಿಲ್ಲ. ಕೊನೆಭಾಗದ ರೈತರ ಆಶಾಕಿರಣವಾದ ಭೈರನಪಾದ ಏತ ನೀರಾವರಿ ಯೋಜನೆ 10 ವರ್ಷಗಳಿಂದ ಡಿಪಿಆರ್ ಹಂತದಲ್ಲಿದ್ದು, ನನೆಗುದಿಗೆ ಬಿದ್ದಿದೆ. ಶಿವಮೊಗ್ಗ–ಹರಿಹರ ರೈಲ್ವೆ ಯೋಜನೆ ಹಾಗೂ ಹೊಸಪೇಟೆ–ಮಂಗಳೂರು ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯಾಗುವ ಯೋಜನೆ ಕಾಗದದಲ್ಲೇ ಉಳಿದಿದ್ದು, ಕಾರ್ಯಗತವಾಗಬೇಕಿದೆ.



• **ಕ್ಷೇತ್ರ: ಚನ್ನಗಿರಿ**
• **ಶಾಸಕ: ಮಾಡಾಳ್ ವಿರೂಪಾಕ್ಷಪ್ಪ** (ಬಿಜೆಪಿ)

▸ ಐದು ವರ್ಷಗಳಿಂದ ನಡೆಯುತ್ತಿರುವ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಸಾಕಾರಗೊಳ್ಳಬೇಕಿದೆ. ಅಡಕೆ ನಾಡೆಂದು ಪ್ರಸಿದ್ಧಿ ಪಡೆದಿರುವ ಕ್ಷೇತ್ರದಲ್ಲಿ ವ್ಯಾಪಾರದ ಅಭಿವೃದ್ಧಿಗೆ ರೈಲು ಮಾರ್ಗ ನಿರ್ಮಾಣವಾಗಬೇಕಿದೆ. ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸಣ್ಣ ಕೈಗಾರಿಕೆಗಳ ಸ್ಥಾಪನೆ ಅಗತ್ಯವಿದೆ. ಕ್ರೀಡಾ ತರಬೇತಿ ಕೇಂದ್ರ, ಕನ್ನಡ ಭವನ ನಿರ್ಮಾಣಕ್ಕೆ ಆದ್ಯತೆ ನೀಡಬೇಕಿದೆ.



ಸೋಮವಾರ, ಏಪ್ರಿಲ್ 17, 2023 | ಹುಬ್ಬಳ್ಳಿ - ಧಾರವಾಡ | ₹ 6.00 | ಸಂಪುಟ 76 | ಸಂಚಿಕೆ 106 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಜಗದೀಶ ಶೆಟ್ಟರ್ ಮನವೊಲಿಕೆ ವಿಫಲ • ಕಾಂಗ್ರೆಸ್‌ಗೆ ಹಲವು ಜಿಲ್ಲೆಗಳಲ್ಲಿ ಪ್ರತಿರೋಧ

ಹೆಚ್ಚಿದ ಬಂಡಾಯದ ಕಿಚ್ಚು

ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಟಿಕೆಟ್ ಕೈತಪ್ಪಿದವರ ಬಂಡಾಯ ಭಾನುವಾರ ತೀವ್ರ ಸ್ವರೂಪ ಪಡೆದುಕೊಂಡಿದೆ. ದೀರ್ಘ ಕಾಲದಿಂದ ಗುರುತಿಸಿಕೊಂಡಿದ್ದ ಪಕ್ಷಗಳ ನಂಟನ್ನು ಕಡಿದುಕೊಂಡು ಹೊಸ ದಾರಿಯಲ್ಲಿ ಸಾಗಲು ಹಲವು ನಾಯಕರು ನಿರ್ಧಾರ ಕೈಗೊಂಡಿದ್ದು, ಉಭಯ ಪಕ್ಷಗಳಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಬಿಜೆಪಿಯ ಅಭ್ಯರ್ಥಿಗಳ ಎರಡನೇ ಪಟ್ಟಿ, ಕಾಂಗ್ರೆಸ್ ಅಭ್ಯರ್ಥಿಗಳ ಮೂರನೇ ಪಟ್ಟಿ ಪ್ರಕಟಗೊಂಡ ಬಳಿಕ ಬಂಡಾಯದ ಕಿಚ್ಚು ಹೆಚ್ಚಾಗಿದೆ

ಬಿಜೆಪಿಗೆ ಸಂಕಷ್ಟ ತಂದ ಶೆಟ್ಟರ್ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿ- ಧಾರವಾಡ ಕೇಂದ್ರ ಕ್ಷೇತ್ರದಿಂದ ಕೊನೆಯ ಬಾರಿಗೆ ವಿಧಾನಸಭೆಗೆ ಸ್ಪರ್ಧಿಸಲು ಅವಕಾಶ ನೀಡಬೇಕೆಂಬ ಪಟ್ಟು ಬಿಡದ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಬಿಜೆಪಿಯಿಂದ ಹೊರಬಂದು ಕಾಂಗ್ರೆಸ್ ಪಕ್ಷ ಸೇರುವ ಪ್ರಯತ್ನದಲ್ಲಿದ್ದಾರೆ.

ಶನಿವಾರವೇ ಬೆಂಬಲಿಗರ ಸಭೆ ನಡೆಸಿದ್ದ ಶೆಟ್ಟರ್, ಪಕ್ಷ ತೊರೆಯುವ ನಿರ್ಧಾರಕ್ಕೆ ಬಂದಿದ್ದರು. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ತಂಡ ಅವರ ಮನವೊಲಿಸಲು ಪ್ರಯತ್ನಿಸಿತ್ತು. ಭವಿಷ್ಯದಲ್ಲಿ ಉನ್ನತ ಹುದ್ದೆ ನೀಡುವ ಭರವಸೆಯನ್ನು ಶೆಟ್ಟರ್ ಸಾರಾಸಗಟಾಗಿ ತಿರಸ್ಕರಿಸಿದರು.

ಭಾನುವಾರ ಬೆಳಿಗ್ಗೆ ಹೆಲಿಕಾಪ್ಟರ್‌ನಲ್ಲಿ ಶಿರಸಿಗೆ ತೆರಳಿದ ಶೆಟ್ಟರ್, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಶಾಸಕ ಸ್ಥಾನದ ರಾಜೀನಾಮೆ ಸಲ್ಲಿಸಿದರು.

ಅಲ್ಲಿಂದ ಹುಬ್ಬಳ್ಳಿಗೆ ಮರಳಿದರು. ಮತ್ತೆ ಬೆಂಗಳೂರಿಗೆ ವಿಮಾನದಲ್ಲಿ ದೌಡಾಯಿಸಿದ ಶೆಟ್ಟರ್, ಬೀಗರಾದ ಶಾಮನೂರು ಶಿವಶಂಕರಪ್ಪ ನಿವಾಸದಲ್ಲಿ ಕಾಂಗ್ರೆಸ್ ನಾಯಕರ ಜತೆ ಮಾತುಕತೆ ನಡೆಸಿದರು.

ಶೆಟ್ಟರ್ ಅವರನ್ನು, ಹುಬ್ಬಳ್ಳಿ-ಧಾರವಾಡ ಕೇಂದ್ರ ಕ್ಷೇತ್ರದಿಂದಲೇ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವ ಸಾಧ್ಯತೆ ಇದೆ. ಸೋಮವಾರ ಬೆಳಿಗ್ಗೆ 8.15ಕ್ಕೆ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಉಪಸ್ಥಿತಿಯಲ್ಲಿ ಪಕ್ಷ ಸೇರುವ ಸಂಭವವಿದೆ ಎಂದು ಮೂಲಗಳು ತಿಳಿಸಿವೆ

ಜೆಡಿಎಸ್‌ನತ್ತ ಕರಡಿ ಸಂಗಣ್ಣ: ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಬಯಸಿದ್ದ ಹಾಲಿ ಸಂಸದ ಕರಡಿ ಸಂಗಣ್ಣ ಕೂಡ ಪಕ್ಷದ ನಿರ್ಧಾರದ ವಿರುದ್ಧ ಬಂಡಾಯ ಘೋಷಿಸಿದ್ದಾರೆ. ಭಾನುವಾರ ಬೆಂಬಲಿಗರ ಸಭೆ ನಡೆಸಿರುವ ಅವರು, ಪಕ್ಷ ತೊರೆಯುವ ಸುಳಿವು ನೀಡಿದ್ದಾರೆ.

4ನೇ ಪುಟ ನೋಡಿ

ಇಕ್ಕಟ್ಟಿಗೆ ಸಿಲುಕಿದ ‘ಕೈ’ ಪಡೆ

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರು, ಶಿವಮೊಗ್ಗ, ವಿಜಯನಗರ, ದಾವಣಗೆರೆ, ಬಾಗಲಕೋಟೆ ಜಿಲ್ಲೆಗಳಲ್ಲಿ ಕಾಂಗ್ರೆಸ್‌ನ ಹಲವರು ಭಾನುವಾರ ಬಂಡಾಯ ಎದ್ದಿದ್ದಾರೆ. ಕೆಲವರು ಬಂಡಾಯ ಅಭ್ಯರ್ಥಿಗಳಾಗಿ ಕಣಕ್ಕಿಳಿಯುವ ಘೋಷಣೆಯನ್ನೂ ಮಾಡಿದ್ದಾರೆ.

ಪುಲಕೇಶಿನಗರ ಕ್ಷೇತ್ರ ಶಾಸಕರಾಗಿರುವ ತಮಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನಿರಾಕರಿಸುವುದು ಬಹುತೇಕ ಖಚಿತ ಎನ್ನುವ ಸುಳಿವು ಅಖಂಡ ಶ್ರೀನಿವಾಸ ಮೂರ್ತಿ ಅವರಿಗೆ ಲಭಿಸಿದೆ. ಭಾನುವಾರ ರಾತ್ರಿ ಶಿರಸಿಗೆ ತೆರಳಿ ಸಭಾಧ್ಯಕ್ಷ ಕಾಗೇರಿ ಅವರನ್ನು ಭೇಟಿ ಮಾಡಿದ ಶ್ರೀನಿವಾಸಮೂರ್ತಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಅವರು ಬಿಜೆಪಿ ಅಥವಾ ಜೆಡಿಎಸ್‌ನಿಂದ ಕಣಕ್ಕಿಳಿಯುವ ಸಾಧ್ಯತೆ ಇದೆ.

ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಶಾಸಕ ವಾಸು, ‘ಅವಕಾಶ ಕೈತಪ್ಪಲು ಸಿದ್ದರಾಮಯ್ಯ ಅವರೇ ಕಾರಣ’ ಎಂದು ಭಾನುವಾರ ಆರೋಪಿಸಿದರು. ಪಕ್ಷೇತರನಾಗಿ ಕಣಕ್ಕಿಳಿಯುವ ಕುರಿತು ಎರಡು ದಿನಗಳಲ್ಲಿ ನಿರ್ಧಾರ ಪ್ರಕಟಿಸುವುದಾಗಿ ತಿಳಿಸಿದರು.

ಹರಪನಹಳ್ಳಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದ ಎಂ.ಪಿ. ಲತಾ ಮಲ್ಲಿಕಾರ್ಜುನ ಮತ್ತು ಎಂ.ಪಿ. ವೀಣಾ ಮಹಾಂತೇಶ್ (ಮಾಜಿ ಉಪ ಮುಖ್ಯಮಂತ್ರಿ ದಿವಂಗತ ಎಂ.ಪಿ. ಪ್ರಕಾಶ್ ಅವರ ಮಕ್ಕಳು), ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸುವುದಾಗಿ ಘೋಷಿಸಿದರು. ಇಬ್ಬರೂ ಪಕ್ಷೇತರರಾಗಿ ಕಣಕ್ಕಿಳಿಯುವುದಾಗಿ ಭಾನುವಾರ ನಡೆದ ಬೆಂಬಲಿಗರ ಸಭೆಯಲ್ಲಿ ಪ್ರಕಟಿಸಿದರು.

ಶಿವಮೊಗ್ಗ ಜಿಲ್ಲೆಯ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು ಬಂಡಾಯ ಸಾರುವತ್ತ ಹೆಜ್ಜೆ ಇಟ್ಟಿದ್ದಾರೆ. ಶಿವಮೊಗ್ಗ ನಗರ ಕ್ಷೇತ್ರದಲ್ಲಿ ಎಚ್.ಸಿ. ಯೋಗೇಶ್ ಅವರಿಗೆ ಟಿಕೆಟ್ ನೀಡಿರುವುದರಿಂದ ಮುನಿಸಿಕೊಂಡಿರುವ ಮಾಜಿ ಶಾಸಕ ಕೆ.ಬಿ. ಪ್ರಸನ್ನ ಕುಮಾರ್, ಭಾನುವಾರ ಬೆಂಬಲಿಗರ ಸಭೆ ನಡೆಸಿದರು. ಈ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಚ್.ಎನ್. ಸುಂದರೇಶ್ ಬೆಂಬಲಿಗರು ಕೂಡ ಪ್ರತಿಭಟನೆ ನಡೆಸಿದರು.

4ನೇ ಪುಟ ನೋಡಿ



ಜಗದೀಶ ಶೆಟ್ಟರ್ ಹಟಮಾಡಿ ಕಾಂಗ್ರೆಸ್ ಪಕ್ಷ ಸೇರಲು ಹೊರಟಿರುವುದು ಅಕ್ಷಮ್ಯ ಅಪರಾಧ. ಲಕ್ಷ್ಮಣ ಸವದಿ ಮತ್ತು ಶೆಟ್ಟರ್ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ

ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ



ಪಕ್ಷ ನಿಮಗೂ (ಬಿಎಸ್‌ವೈ) ಸ್ಥಾನಮಾನ ನೀಡಿತ್ತು. ಆದರೂ ನೀವು ಪಕ್ಷ (ಬಿಜೆಪಿ) ಒಡೆದು ಕೆಜೆಪಿ ಕಟ್ಟಿದ್ದು ಯಾಕೆ? ಇವತ್ತು ನನ್ನ ಬಗ್ಗೆ ಮಾತನಾಡುತ್ತಾರೆ

ಜಗದೀಶ ಶೆಟ್ಟರ್, ಮಾಜಿ ಮುಖ್ಯಮಂತ್ರಿ



ಕೋಲಾರದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಪಕ್ಷದ ‘ಜೈ ಭಾರತ್’ ಸಮಾವೇಶದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ದೇವನಹಳ್ಳಿ ಕಾಂಗ್ರೆಸ್ ಅಭ್ಯರ್ಥಿ ಕೆ.ಎಚ್.ಮುನಿಯಪ್ಪ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜನರತ್ತ ಕೈ ಬೀಸಿದರು
—ಪ್ರಜಾವಾಣಿ ಚಿತ್ರ: ರಂಜು ಪಿ.

ಮೋದಿ, ಅದಾನಿ ವಿರುದ್ಧ ಕಾಂಗ್ರೆಸ್ ನಾಯಕನ ವಾಗ್ದಾಳಿ

ಜಾತಿಗಣತಿ ವರದಿ ಪ್ರಕಟಿಸಿ: ರಾಹುಲ್ ಸವಾಲು

ಪ್ರಜಾವಾಣಿ ವಾರ್ತೆ

ಕೋಲಾರ: ‘ಹಿಂದುಳಿದ ವರ್ಗಗಳ ಬಗ್ಗೆ ಮಾತನಾಡುವ ನೈತಿಕತೆ ಕೇಂದ್ರ ಸರ್ಕಾರಕ್ಕೆ ಇಲ್ಲ. ಯುಪಿಎ-2 ಸರ್ಕಾರದ ಅವಧಿಯಲ್ಲಿ ಜಾತಿ ಜನಗಣತಿ ಮಾಡಲಾಗಿತ್ತು. ಆದರೆ, ಬಿಜೆಪಿ ಸರ್ಕಾರ ಬಂದ ಮೇಲೆ ಆ ಅಂಕಿಅಂಶ ಮುಚ್ಚಿಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧೈರ್ಯವಿದ್ದರೆ, ಒಬಿಸಿ ಮೇಲೆ ಪ್ರೀತಿ ಇದ್ದರೆ ಜಾತಿ ಜನಗಣತಿ ವರದಿ ಬಿಡುಗಡೆ ಮಾಡಲಿ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಹೇಳಿದ್ದಾರೆ.

ಕೋಲಾರದ ಹೊರವಲಯದ ಟಮಕದಲ್ಲಿ ನಡೆದ ‘ಜೈಭಾರತ್’ ಸಮಾವೇಶವನ್ನು ಉದ್ದೇಶಿಸಿ ರಾಹುಲ್ ಮಾತನಾಡಿದರು.

ಒಬಿಸಿ, ದಲಿತರು, ಆದಿವಾಸಿಗಳ ಸಂಖ್ಯೆ ಎಷ್ಟು ಎಂಬುದನ್ನು ಬಹಿರಂಗಪಡಿಸಲಿ. ಇಲ್ಲದಿದ್ದರೆ ಅದು ಆ ವರ್ಗದವರಿಗೆ ಮೋದಿ ಅವರು ಮಾಡುವ ಅವಮಾನ. ಯಾವ ಸಮುದಾಯದ ಜನಸಂಖ್ಯೆ ಹೆಚ್ಚು ಇದೆ ಎಂಬುದನ್ನು ತಿಳಿದುಕೊಳ್ಳಬೇಕಿದೆ. ಜಾತಿ ಜನಗಣತಿಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು. ಮೀಸಲಾತಿಗೆ ಶೇ 50ರ ಮಿತಿಯನ್ನು ತೆಗೆದು ಹಾಕಿ’ ಎಂದು ಆಗ್ರಹಿಸಿದರು.

4ನೇ ಪುಟ ನೋಡಿ

ಯಾರಾದರೂ ಸಿ.ಎಂ ಆಗಿ: ಕಾಂಗ್ರೆಸ್ ಅಧಿಕಾರಕ್ಕೆ ತನ್ನಿ– ಖರ್ಗೆ

‘ನೀವು ಯಾರಾದರೂ ಮುಖ್ಯಮಂತ್ರಿ ಆಗಿ. ನನಗದು ಬೇಕಾಗಿಲ್ಲ. ಕಾಂಗ್ರೆಸ್ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುವುದಷ್ಟೇ ನನಗೆ ಬೇಕಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯ ಮುಖಂಡರಿಗೆ ಹೇಳಿದರು.

ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿಗಳಾದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿಯೇ ಖರ್ಗೆ ನೇರವಾಗಿ ಈ ಮಾತು ಹೇಳಿದರು. ‘ಶಾಸಕರು, ಹೈಕಮಾಂಡ್ ಹೇಳಿದವರು ಮುಖ್ಯಮಂತ್ರಿ ಆಗುತ್ತಾರೆ. ಆ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಬೇಡಿ. ಜನರ ರಕ್ಷಣೆ ಬಗ್ಗೆ, ಅವ್ಯವಸ್ಥೆ ಸರಿಪಡಿಸುವ ಬಗ್ಗೆ ತಲೆಕೆಡಿಸಿಕೊಂಡು ಕೆಲಸ ಮಾಡಿ. ನಾನು ಕೈ ಜೋಡಿಸಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. 150ರಿಂದ 160 ಸ್ಥಾನ ಗೆಲ್ಲಿಸಿಕೊಡಿ’ ಎಂದು ಕೋರಿದರು.

‘ಅಧಿಕಾರಕ್ಕೆ ಬಂದ ದಿನವೇ ಭರವಸೆ ಜಾರಿ’

‘ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರ ಬರಲಿದ್ದು ಪಕ್ಷ ನೀಡಿರುವ ನಾಲ್ಕು ಭರವಸೆ ಈಡೇರಿಸಲು ಆರು ತಿಂಗಳು, ವರ್ಷ ಕಾಯಬಾರದು. ಸರ್ಕಾರ ರಚನೆಯಾದ ಮೊದಲ ದಿನವೇ ಘೋಷಣೆ ಮಾಡಬೇಕು’ ಎಂದು ರಾಹುಲ್, ಪಕ್ಷದ ರಾಜ್ಯ ಮುಖಂಡರಿಗೆ ತಾಕೀತು ಮಾಡಿದರು.

‘ಜನರಿಂದ ಲೂಟಿ ಹೊಡೆದಿರುವ ಶೇ 40ರಷ್ಟು ಕಮಿಷನ್ ಹಣವನ್ನು ಬಿಜೆಪಿಯವರು ಕಾಂಗ್ರೆಸ್ ಸರ್ಕಾರ ಉರುಳಿಸಲು ಬಳಸುತ್ತಾರೆ. ಹೀಗಾಗಿ, ಕಾಂಗ್ರೆಸ್‌ನ ಗುರಿ 150 ಸ್ಥಾನ ಗೆಲ್ಲುವುದಾಗಿರಲಿ. ಆಗ ಬಿಜೆಪಿಯ ಭ್ರಷ್ಟಾಚಾರ ತಪ್ಪಿಸಬಹುದು’ ಎಂದು ಮುಖಂಡರು, ಕಾರ್ಯಕರ್ತರಿಗೆ ಸಲಹೆ ಮಾಡಿದರು.

‘ಉದ್ಯಮಿಗಳಿಗಾಗಿ ಮೋದಿ ಬ್ಯಾಂಕ್ ಬಾಗಿಲು ತೆರೆದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು ಬಡವರಿಗೆ, ಕೃಷಿಕರಿಗೆ, ಮಹಿಳೆಯರಿಗೆ ಬ್ಯಾಂಕ್ ಬಾಗಿಲು ತೆರೆಯುತ್ತೇವೆ. ಅದಾನಿ ಅವರಿಗೆ ಮೋದಿ ಕೊಟ್ಟಂತರ ಹಣ ನೀಡಿ ಮನಪೂರ್ವಕ ಸಹಾಯ ಮಾಡಿದಂತೆ ಕಾಂಗ್ರೆಸ್ಸಿಗರು ಮನಪೂರ್ವಕವಾಗಿ ಮಹಿಳೆಯರು, ಬಡವರಿಗೆ ಸಹಾಯ ಮಾಡುತ್ತೇವೆ’ ಎಂದು ಘೋಷಿಸಿದರು.

ಸಿಬಿಐ ಎದುರು ಕೇಜ್ರಿವಾಲ್ ಹಾಜರು



ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಅಬಕಾರಿ ನೀತಿ ಹಗರಣದ ಸಂಬಂಧ ವಿಚಾರಣೆ ಎದುರಿಸಲು ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ಮುಂದೆ ಭಾನುವಾರ ಹಾಜರಾದರು.

ಬೆಳಿಗ್ಗೆ 11 ಗಂಟೆ ಸುಮಾರಿಗೆ ಸಿಬಿಐ ಕೇಂದ್ರ ಕಚೇರಿ ತಲುಪಿದ ಕೇಜ್ರಿವಾಲ್ ಅವರನ್ನು ಅಧಿಕಾರಿಗಳು ಮೊದಲ ಮಹಡಿಯಲ್ಲಿರುವ ಭ್ರಷ್ಟಾಚಾರ ನಿಗ್ರಹ ಘಟಕಕ್ಕೆ ಕರೆದೊಯ್ದರು. ಬಳಿಕ ಸುಮಾರು ಒಂಬತ್ತು ತಾಸು ವಿಚಾರಣೆ ನಡೆಸಿದರು. ಮಧ್ಯಾಹ್ನ ಊಟದ ವಿರಾಮ ನೀಡಿದ್ದರೂ ಕೂಡ ಕೇಜ್ರಿವಾಲ್ ಅವರು ಕಚೇರಿಯಿಂದ ಹೊರ ಬರಲಿಲ್ಲ. ರಾತ್ರಿ 8.30ರ ಸುಮಾರಿಗೆ ಆಚೆ ಬಂದ ಅವರು ಮಾಧ್ಯಮದವರತ್ತ ಕೈ ಬೀಸುತ್ತಲೇ ಸಿಬಿಐ ಕಚೇರಿ ತೊರೆದರು.

ಸಿಬಿಐ ವಿಚಾರಣೆಗೆ ಹಾಜರಾಗುವ ಮುನ್ನ ರಾಜ್‌ಘಾಟ್‌ಗೆ ಭೇಟಿ ನೀಡಿದ್ದ ಕೇಜ್ರಿವಾಲ್ ಅವರು ಮಹಾತ್ಮ ಗಾಂಧಿ ಅವರ ಸ್ಮಾರಕಕ್ಕೆ ನಮನ ಸಲ್ಲಿಸಿದ್ದರು. ಈ ವೇಳೆ ಅವರೊಂದಿಗೆ ಸಚಿವ ಸಂಪುಟದ ಕೆಲ ಸಹೋದ್ಯೋಗಿಗಳು ಹಾಗೂ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಇದ್ದರು.

ಇದಕ್ಕೂ ಮುನ್ನ, ಟ್ವಿಟರ್‌ನಲ್ಲಿ ಐದು ನಿಮಿಷಗಳ ವಿಡಿಯೊ ಸಂದೇಶವೊಂದನ್ನು ಪ್ರಕಟಿಸಿದ್ದ ಕೇಜ್ರಿವಾಲ್, ‘ಬಿಜೆಪಿಯವರು ನನ್ನನ್ನು ಬಂಧಿಸುವಂತೆ ಸಿಬಿಐಗೆ ನಿರ್ದೇಶನ ನೀಡಬಹುದು’ ಎಂದು ಆತಂಕ ವ್ಯಕ್ತಪಡಿಸಿದ್ದರು.

‘ಇವರು (ಬಿಜೆಪಿ) ತುಂಬಾ ಪ್ರಭಾವಿಗಳು. ಎಂತಹವರನ್ನಾದರೂ ಜೈಲಿಗೆ ಕಳುಹಿಸಬಲ್ಲರು. ವ್ಯಕ್ತಿಯು ಅಪರಾಧ ಮಾಡಿರಲಿ ಅಥವಾ ಮಾಡದಿರಲಿ, ಅದ್ಯಾವುದೂ ಗಣನೆಗೆ ಬರುವುದಿಲ್ಲ’ ಎಂದು ಆರೋಪಿಸಿದ್ದರು.

ಪ್ರತಿಭಟನೆ: ಸಿಬಿಐ ಕ್ರಮ ಖಂಡಿಸಿ ಎಎಪಿ ನಾಯಕರು ಹಾಗೂ ಕಾರ್ಯಕರ್ತರು ದೇಶದ ವಿವಿಧೆಡೆ ಪ್ರತಿಭಟನೆ ನಡೆಸಿದ್ದು, ಪೊಲೀಸರು ಸಾವಿರಾರು ಮಂದಿಯನ್ನು ಬಂಧಿಸಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಮಾನ್, ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ದೆಹಲಿ ಸರ್ಕಾರದ ಸಚಿವರು ಹಾಗೂ ಮುಖಂಡರು ಸಿಬಿಐ ಕಚೇರಿ ಹೊರಭಾಗದಲ್ಲಿನ ಪಾದಚಾರಿ ಮಾರ್ಗದ ಮೇಲೆ ಕುಳಿತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಕೂಗಿದ್ದಾರೆ.

‘ಕೇಳಿದ 56 ಪ್ರಶ್ನೆಗಳಿಗೂ ಉತ್ತರಿಸಿರುವೆ’

‘ಸಿಬಿಐ ಅಧಿಕಾರಿಗಳು 56 ಪ್ರಶ್ನೆಗಳನ್ನು ಕೇಳಿದ್ದು, ಎಲ್ಲದಕ್ಕೂ ಉತ್ತರ ನೀಡಿದ್ದೇನೆ’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ವಿಚಾರಣೆ ಎದುರಿಸಿ ಬಂದ ಬಳಿಕ ತಮ್ಮ ನಿವಾಸದ ಎದುರು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಅಬಕಾರಿ ಹಗರಣವೆಂಬುದೇ ಸುಳ್ಳು. ಎಎಪಿ ಭ್ರಷ್ಟಾಚಾರ ಎಸಗಿರುವುದನ್ನು ಸಾಬೀತುಪಡಿಸುವುದಕ್ಕೆ ಅವರ ಬಳಿ ಯಾವ ಸಾಕ್ಷ್ಯಗಳೂ ಇಲ್ಲ. ಇದು ಹೊಲಸು ರಾಜಕಾರಣ’ ಎಂದು ತಿಳಿಸಿದ್ದಾರೆ.

‘ಅಧಿಕಾರಿಗಳು ನನ್ನೊಂದಿಗೆ ಆತ್ಮೀಯತೆಯಿಂದ ವರ್ತಿಸಿದರು. ಅಬಕಾರಿ ನೀತಿಯನ್ನು ಯಾವಾಗ ಮತ್ತು ಏತಕ್ಕಾಗಿ ರಚಿಸಲಾಯಿತು ಎಂಬುದರ ಕುರಿತು ಸೌಜನ್ಯದಿಂದಲೇ ಕೇಳಿದರು. ನಾನು ಕೂಡ ತಾಳ್ಮೆಯಿಂದಲೇ ಉತ್ತರ ನೀಡಿದ್ದೇನೆ’ ಎಂದಿದ್ದಾರೆ.

ಇನ್ನೊಂದು ಸುದ್ದಿ 5

ಎಎಪಿಯು ಅಧಿಕಾರಕ್ಕೇರಲು ಅಣ್ಣಾ ಹಜಾರೆಯವರನ್ನು ಬಳಸಿಕೊಂಡಿತು. ಭ್ರಷ್ಟಾಚಾರದ ವಿಚಾರ ಪ್ರಸ್ತಾಪಿಸಿ ಹಜಾರೆಯವರನ್ನು ಮೂರ್ಖರನ್ನಾಗಿಸಿತು

ಕಿರಣ್ ರಿಜಿಜು, ಕೇಂದ್ರ ಕಾನೂನು ಸಚಿವ

‘ಜನಸಂಖ್ಯೆ ಹೆಚ್ಚಳಕ್ಕೆ ಅರಿವಿನ ಕೊರತೆ ಕಾರಣ’

ನವದೆಹಲಿ (ಪಿಟಿಐ): ಚೀನಾವನ್ನು ಹಿಂದಿಕ್ಕಿ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಎಂದು ಭಾರತ ಇಷ್ಟರಲ್ಲೇ ಹಣೆಪಟ್ಟಿ ಪಡೆಯಲಿದೆ. ದೇಶದ ಜನಸಂಖ್ಯೆ ಹೆಚ್ಚಾಗುತ್ತಲೇ ಇರುವುದಕ್ಕೆ ಸಾಕ್ಷರತೆ ಕೊರತೆ, ಗರ್ಭನಿರೋಧಕ ಮತ್ತು ಗರ್ಭಪಾತದ ಕುರಿತು ಹೆಚ್ಚಿನ ಅರಿವು ಇಲ್ಲದಿರುವುದು ಹಾಗೂ ಆರ್ಥಿಕ ಕಾರಣಗಳು ಪ್ರಮುಖವಾಗಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಅಂಕಿಅಂಶದಿಂದ ಈ ಮಾಹಿತಿ ಲಭ್ಯವಾಗಿದೆ.

‘ನಾಲ್ಕನೇ ಮಗುವಿಗೆ ಗರ್ಭಿಣಿ ಆಗುತ್ತಿದ್ದಂತೆ ವೈದ್ಯರಲ್ಲಿಗೆ ಹೋಗಿದ್ದೆ. ನಾನು ಪುನಃ ಗರ್ಭಿಣಿ ಆಗಿದ್ದಕ್ಕಾಗಿ ಅವರು ನನಗೆ ಬೈದರು. ಗರ್ಭ ಧರಿಸುವ ವಿಚಾರದಲ್ಲಿ ನನ್ನ ಅನುಮತಿಯನ್ನು ಕೇಳಲಾಗಿಲ್ಲ ಎಂಬುದು ಅವರಿಗೆ ಅರ್ಥವಾಗಲಿಲ್ಲ’ ಎಂದು ನೋಯ್ಡಾದಲ್ಲಿ ಮನೆ ಕೆಲಸದ ಸಹಾಯಕಿಯಾಗಿರುವ ಛಾಯಾದೇವಿ ಹೇಳಿದ್ದಾರೆ.

ಛಾಯಾದೇವಿ ಅವರ ಪರಿಸ್ಥಿತಿಯೇ ದೇಶದ ಅನೇಕ ಮಹಿಳೆಯರ ಪರಿಸ್ಥಿತಿಯಾಗಿದೆ. ಗರ್ಭನಿರೋಧಕ ಕುರಿತು ಇರುವ ತಪ್ಪು ತಿಳಿವಳಿಕೆ, ಕುಟುಂಬ ಸದಸ್ಯರಿಂದ ಅಭಿಪ್ರಾಯ ಹೇರಿಕೆ, ಸಂತಾನ ಶಕ್ತಿ ನಿಯಂತ್ರಣ ಕ್ರಮಗಳ ಕುರಿತು ಪತಿಗಿರುವ ನಿರ್ಲಕ್ಷ್ಯ ಭಾವನೆಯಂಥ ಅಂಶಗಳು ಮಹಿಳೆಯರು ಹೆಚ್ಚು ಮಕ್ಕಳನ್ನು ಪಡೆಯಲು ಕಾರಣವಾಗಿವೆ ಎಂಬುದನ್ನು ಸಮೀಕ್ಷೆ ಕಂಡುಕೊಂಡಿದೆ.

ಅತೀಕ್, ಅಶ್ರಫ್ ಹತ್ಯೆ: ಮಾಫಿಯಾ ರಾಜ್ಯ ಎಂದ ಪ್ರತಿಪಕ್ಷಗಳು

‘ಉತ್ತರಪ್ರದೇಶ ಜಂಗಲ್ ರಾಜ್’

ಪ್ರಜಾವಾಣಿ ವಾರ್ತೆ

ಲಖನೌ: ಪಾತಕಿ ಮತ್ತು ಮಾಜಿ ಸಂಸದ ಅತೀಕ್ ಅಹ್ಮದ್ ಹಾಗೂ ಆತನ ಸಹೋದರ ಅಶ್ರಫ್ ಅಹ್ಮದ್‌ನನ್ನು ಪೊಲೀಸರು ಮತ್ತು ಮಾಧ್ಯಮದವರ ಎದುರೇ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ. ಈ ಘಟನೆಯು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನೇತೃತ್ವದ ಉತ್ತರ ಪ್ರದೇಶವು ‘ಜಂಗಲ್ ರಾಜ್’, ‘ಮಾಫಿಯಾ ರಾಜ್’ ಆಗಿ ಮಾರ್ಪಟ್ಟಿರುವುದಕ್ಕೆ ನಿದರ್ಶನವಾಗಿದೆ ಎಂದು ಪ್ರತಿಪಕ್ಷಗಳು ಭಾನುವಾರ ಹರಿಹಾಯ್ದಿವೆ.

ಕಾಂಗ್ರೆಸ್, ಸಮಾಜವಾದಿ ಪಕ್ಷ, ಬಹುಜನ ಸಮಾಜ ಪಕ್ಷ, ರಾಷ್ಟ್ರೀಯ ಲೋಕ ದಳ, ಎಐಎಂಐಎಂ, ತೃಣಮೂಲ ಕಾಂಗ್ರೆಸ್ ಹಾಗೂ ಎಡ ಪಕ್ಷಗಳು ಯೋಗಿ ಆಡಳಿತದಲ್ಲಿ ಅರಾಜಕತೆ ತಾಂಡವವಾಡುತ್ತಿದೆ ಎಂದು ಟೀಕಿಸಿವೆ. ರಾಜಕೀಯ ದುರುದ್ದೇಶಕ್ಕಾಗಿ ಕಾನೂನಿನ ದುರ್ಬಳಕೆಯಾಗುತ್ತಿದೆ. ಯೋಗಿ ಸರ್ಕಾರವನ್ನು ವಜಾಗೊಳಿಸಲು ಅಥವಾ ರಾಷ್ಟ್ರಪತಿ ಆಡಳಿತ ಹೇರಲು ಇದು ಸಕಾಲ ಎಂದು ಅಭಿಪ್ರಾಯಪಟ್ಟಿವೆ.

ಪ್ರಯಾಗ್‌ರಾಜ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಪೊಲೀಸ್ ಭದ್ರತೆಯಲ್ಲಿ ಅತೀಕ್ ಮತ್ತು ಅಶ್ರಫ್ ಅವರನ್ನು ಕರೆದೊಯ್ಯುತ್ತಿದ್ದಾಗ ಪತ್ರಕರ್ತರ ಸೋಗಿನಲ್ಲಿದ್ದ ಮೂವರು ದುಷ್ಕರ್ಮಿಗಳು ಏಕಾಏಕಿ ಗುಂಡಿನ ದಾಳಿ ನಡೆಸಿ ಅವರನ್ನು ಶನಿವಾರ ರಾತ್ರಿ ಹತ್ಯೆ ಮಾಡಿದ್ದರು.

ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆಗೆ ಆಗ್ರಹ: ಸುಪ್ರೀಂ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ಪ್ರಕರಣದ ತನಿಖೆ ನಡೆಸಬೇಕು ಎಂದು ಎಐಎಂಐಎಂ ಆಗ್ರಹಿಸಿದರೆ, ಕುಕೃತ್ಯಕ್ಕೆ ಪೊಲೀಸರ ಮೌನ ಸಮ್ಮತಿ ಇದ್ದಂತಿದೆ. ಹಾಗಾಗಿ, ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಸಿಪಿಎಂ ಒತ್ತಾಯಿಸಿದೆ.

5ನೇ ಪುಟ ನೋಡಿ

ಕಾನೂನು ಮತ್ತು ಸುವ್ಯವಸ್ಥೆ ಜೊತೆಗಿನ ಕಣ್ಣಾಮುಚ್ಚಾಲೆ ಆಟವು ಅರಾಜಕತೆ ಸೃಷ್ಟಿಗೆ ಕಾರಣವಾಗುತ್ತದೆ. ಕಾನೂನು ಉಲ್ಲಂಘನೆಯ ಅಧಿಕಾರ ಯಾವುದೇ ಸರ್ಕಾರ ಅಥವಾ ವ್ಯಕ್ತಿಗೆ ಇಲ್ಲ

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸಮೀಕ್ಷೆ

ಮ್ಯಾನ್‌ಹೋಲ್ ಸ್ವಚ್ಛಪಡಿಸುವ 7,493 ಮಂದಿ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದಲ್ಲಿ ಮ್ಯಾನ್‌ಹೋಲ್‌ನೊಳಗೆ ಸ್ವತಃ ಇಳಿದು ಸ್ವಚ್ಛಗೊಳಿಸುವ (ಮ್ಯಾನುವಲ್ ಸ್ಕ್ಯಾವೆಂಜರ್) 7,493 ಮಂದಿ ಇದ್ದಾರೆ ಎಂಬ ಅಂಶ ಸಮೀಕ್ಷೆಯಿಂದ ತಿಳಿದು ಬಂದಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಅಂದರೆ 1,625 ಮಂದಿ ಇದ್ದಾರೆ. ನಂತರದ ಸ್ಥಾನಗಳಲ್ಲಿ ಮೈಸೂರು ಜಿಲ್ಲೆ (1,381) ಹಾಗೂ ಕೋಲಾರ ಜಿಲ್ಲೆ (1,224) ಇವೆ.

‘ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ನಾಲ್ಕು ವರ್ಷಗಳಿಂದ ನಡೆಸಿದ ಸಮೀಕ್ಷೆ ಪೂರ್ಣಗೊಂಡಿದ್ದು, ಈ ಅಂಕಿ ಅಂಶ ದೊರೆತಿದೆ’ ಎಂದು ಆಯೋಗದ ಅಧ್ಯಕ್ಷ ಎಂ.ಶಿವಣ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮ್ಯಾನ್‌ಹೋಲ್‌ಗೆ ಜನರನ್ನು ಇಳಿಸುವುದನ್ನು ನಿಷೇಧಿಸಲಾಗಿದೆ. ಹಾಗಿದ್ದರೂ ಇಳಿದು ಕೆಲಸ ಮಾಡುವುದು ಇಂದಿಗೂ ಮುಂದುವರಿದಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ ಈ ಹಿಂದೆಯೂ ಹಲವು ಸಮೀಕ್ಷೆ ನಡೆಸಲಾಗಿದೆ. 2020ರಲ್ಲಿ 1,968 ಮ್ಯಾನುವಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿತ್ತು. 2018ರಲ್ಲಿ 4,807 ಮಂದಿ ಇದ್ದರು. ಅವರಲ್ಲಿ 1,424 ಮಂದಿ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದರೆ, ಮೈಸೂರಿನಲ್ಲಿ 1,381, ಕೋಲಾರದಲ್ಲಿ 985 ಮಂದಿ ಇದ್ದರು. 2016ರ ಸಮೀಕ್ಷೆ ಪ್ರಕಾರ, 417 ಮಂದಿ ಇದ್ದರು. ಅವರಲ್ಲಿ 148 ಮಂದಿ ಕೋಲಾರದವರು. 2013ರ ಸಮೀಕ್ಷೆಯಲ್ಲಿ 301 ಮಂದಿ ಗುರುತಿಸಲಾಗಿತ್ತು, 201 ಮಂದಿ ಬಿಬಿಎಂಪಿ ವ್ಯಾಪ್ತಿಯಲ್ಲೇ ಇದ್ದರು’ ಎಂದು ಮಾಹಿತಿ ನೀಡಿದರು.

92 ಮಂದಿ ಸಾವು: ‘1993ರಿಂದ ಇಲ್ಲಿಯವರೆಗೆ ರಾಜ್ಯದಾದ್ಯಂತ 92 ಮಂದಿ ಮ್ಯಾನ್ಯುವಲ್ ಸ್ಕ್ಯಾವೆಂಜರ್‌ಗಳು ಮೃತಪಟ್ಟಿದ್ದಾರೆ. ಇವರಲ್ಲಿ ಬೆಂಗಳೂರಿನವರು 40 ಮಂದಿ, ಮೈಸೂರಿನ 6 ಹಾಗೂ ಕೋಲಾರದ ಐವರು ಸೇರಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ 10 ಜನರು ಮೃತಪಟ್ಟಿದ್ದು, ಪ್ರಕರಣಗಳೂ ದಾಖಲಾಗಿವೆ’ ಎಂದು ತಿಳಿಸಿದರು.

‘ಸುರಕ್ಷಾ ಪರಿಕರಗಳಿಲ್ಲ’

‘ಸ್ಥಳೀಯ ಸಂಸ್ಥೆಗಳು ಒಳಚರಂಡಿ ಹೂಳು ತೆಗೆಯಲು ಡಿಸಿಲ್ಟಿಂಗ್, ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸಲು ಮುಂದಾಗಿವೆ. ಆದರೆ, ಮ್ಯಾನುವಲ್ ಸ್ಕ್ಯಾವೆಂಜರ್‌ಗಳನ್ನು ಮಳೆಗಾಲದಲ್ಲಿ ಬಳಸಿಕೊಳ್ಳುತ್ತಾರೆ. ಆದರೆ, ಸುರಕ್ಷತಾ ಪರಿಕರಗಳನ್ನು ಕೊಡುತ್ತಿಲ್ಲ. ಮ್ಯಾನ್‌ಹೋಲ್, ಸೆಪ್ಟಿಕ್ ಟ್ಯಾಂಕ್‌ಗಳಿಗೆ ಇಳಿಸಲಾಗುತ್ತಿದೆ’ ಎಂದು ಪೌರಕಾರ್ಮಿಕರೊಬ್ಬರು ತಿಳಿಸಿದರು. ‘ನನ್ನಂತೆಯೇ ಹಲವು ಪೌರಕಾರ್ಮಿಕರು ಆರೋಗ್ಯದ ಸಮಸ್ಯೆ ಎದುರಿಸುತ್ತಿದ್ದಾರೆ’ ಎಂದು ಮತ್ತೊಬ್ಬರು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ದಸಂಸ ರಾಜ್ಯ ಸಂಚಾಲಕ ಚೋರನಹಳ್ಳಿ ಶಿವಣ್ಣ, ‘ಪರಿಶಿಷ್ಟರಿಗೆ ಸಮಾನತೆ ಮರೀಚಿಕೆಯಾಗಿದೆ. ಪೌರಕಾರ್ಮಿಕರನ್ನು ಮಲಗುಂಡಿಗಳ ಸ್ವಚ್ಛತೆಗೆ ಬಳಸಿಕೊಳ್ಳಲಾಗುತ್ತಿದೆ. ಇದು ನಿಲ್ಲಬೇಕು. ಪೌರಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಹಾಗೂ ಪುನರ್ವಸತಿ ಕಲ್ಪಿಸಬೇಕು. ಸುರಕ್ಷಾ ಪರಿಕರಗಳನ್ನು ಒದಗಿಸಬೇಕು. ಅಮಾನವೀಯ ಕೆಲಸಕ್ಕೆ ಬಳಸಿಕೊಂಡರೆ ಕಾನೂನು ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

‘ಬನಶಂಕರಿ: ಕಸ ತೆರವುಗೊಳಿಸಿ’

ಬನಶಂಕರಿ 6ನೇ ಹಂತದ 9ನೇ ಬ್ಲಾಕ್‌ನ ಚಿನ್ಮಯ ಶಾಲೆಗೆ ಸಂಪರ್ಕಿಸುವ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ನಿರಂತರವಾಗಿ ಕಸ ತಂದು ಸುರಿಯಲಾಗುತ್ತಿದೆ. ಇಲ್ಲಿ ಮನೆಗಳು ವಿರಳವಾಗಿದ್ದು ಜನಸಂಚಾರ ಕಡಿಮೆಯಿದೆ. ಇದರ ಲಾಭ ಪಡೆಯುವ ಸುಶಿಕ್ಷಿತರು, ಆದರೆ ತಿಳಿವಳಿಕೆಯಿಲ್ಲದ ಜನರು ಬೈಕುಗಳಲ್ಲಿ, ಕಾರುಗಳಲ್ಲಿ ಬಂದು ಎಲ್ಲೆಂದರಲ್ಲಿ ಕಸ ಬಿಸಾಡಿ ಹೋಗುತ್ತಿದ್ದಾರೆ. ಇಲ್ಲಿ ಕಸ ಎಸೆಯಬಾರದು ಎಂದು ಎಷ್ಟು ಸಾರಿ ಹೇಳಿದರೂ ಪ್ರಯೋಜನವಾಗುತ್ತಿಲ್ಲ. ಈ ಭಾಗದಲ್ಲಿ ವಾಸಿಸುವ ನಾಗರಿಕರೆಲ್ಲ ಸೇರಿ ಸ್ವಚ್ಛತಾ ಅಭಿಯಾನವನ್ನೂ ಮಾಡಿದ್ದೇವೆ. ಆದರೂ ರಾತ್ರಿ ಸಮಯದಲ್ಲಿ ಕಸವನ್ನು ತಂದು ಎಸೆಯುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಈ ಪ್ರದೇಶದಲ್ಲಿರುವ ಕಸವನ್ನು ವಿಲೇವಾರಿ ಮಾಡುವುದರ ಮೂಲಕ ಕಸದ ತೊಟ್ಟಿಗಳನ್ನು ಇಡಬೇಕು.

ಸುಘೋಷ ಸ. ನಿಗಳೆ, ಸ್ಥಳೀಯ ನಿವಾಸಿ



ಬನಶಂಕರಿಯ ಚಿನ್ಮಯ ಶಾಲೆಗೆ ಸಂಪರ್ಕಿಸುವ ರಸ್ತೆಬದಿ ಕಸ ಹಾಕಿರುವುದು.

‘ಬೀದಿನಾಯಿಗಳ ಕಾಟ ಹೆಚ್ಚಾಗಿದೆ’

ಯಶವಂತಪುರ ವಿಧಾನಸಭಾ ಕ್ಷೇತ್ರದ ನಾಗರಭಾವಿ ಸಮೀಪದ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದೆ. ಮಕ್ಕಳು, ವೃದ್ಧರು, ಮಹಿಳೆಯರು ಜೀವ ಕೈಯಲ್ಲಿ ಹಿಡಿದುಕೊಂಡು ಸಾಗುವ ಪರಿಸ್ಥಿತಿ ಇದೆ. ಇಲ್ಲಿನ ನಾಯಿಗಳು ಬೆಳಗಿನ ಹೊತ್ತಿನಲ್ಲಿ ಕಚ್ಚುವುದಕ್ಕೆ ಬರುತ್ತಿವೆ. ರಾತ್ರಿಯಿಡೀ ಬೊಗಳುವುದರಿಂದ ನಿದ್ರೆ ಮಾಡುವುದಕ್ಕೆ ಆಗುತ್ತಿಲ್ಲ. ಈ ಭಾಗದಲ್ಲಿರುವ ನಾಯಿಗಳನ್ನು ಸ್ಥಳಾಂತರ ಮಾಡುವುದರ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಯನ್ನು ನಿವಾರಿಸಬೇಕು.

ಕೃಷ್ಣ ಭಟ್ ಗೋಸಾಡ, ಸರ್ ಎಂ.ವಿ. ಬಡಾವಣೆಯ ನಿವಾಸಿ

‘ಪಾದಚಾರಿ ಮಾರ್ಗವೇ ಒತ್ತುವರಿ’



ಬಾಣಸವಾಡಿಯ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ವಾಹನಗಳನ್ನು ನಿಲ್ಲಿಸಿರುವುದು

ಬಾಣಸವಾಡಿಯ 100 ಅಡಿ ರಸ್ತೆಯ ಸಿಟಿ ಬೇಕರಿಯ ಪಾದಚಾರಿ ಮಾರ್ಗವನ್ನು ಅಂಗಡಿಕಾರರು ಒತ್ತುವರಿ ಮಾಡಿಕೊಂಡಿದ್ದು, ಸಾರ್ವಜನಿಕ ಓಡಾಟಕ್ಕೆ ಅನಾನುಕೂಲವಾಗಿದೆ. ಬೇಕರಿಯ ಮುಂಭಾಗದಲ್ಲಿ ಟೇಬಲ್, ಖುರ್ಚಿಗಳನ್ನು ಹಾಕಿದ್ದು, ಇದರ ಪಕ್ಕದಲ್ಲಿ ವಾಹನ ಮಾರಾಟಗಾರರು ಕಾರು, ಬೈಕ್‌ಗಳನ್ನು ಪಾರ್ಕಿಂಗ್ ಮಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಒತ್ತುವರಿಯನ್ನು ತೆರವುಗೊಳಿಸಿ ಪಾದಚಾರಿಗಳ ಓಡಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಗೋಪಾಲ್ ಕೆ, ಬಾಣಸವಾಡಿಯ ನಿವಾಸಿ

‘ಪಾದಚಾರಿ ಮಾರ್ಗದಲ್ಲಿ ಕಸ’

ಗಾಂಧಿನಗರದ ಕಾಳಿದಾಸ ರಸ್ತೆಯ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೇ ಕಸ ಹಾಕಲಾಗುತ್ತಿದೆ. ಇದರಲ್ಲಿ ಬಹುತೇಕ ಕಟ್ಟಡ ತ್ಯಾಜ್ಯವನ್ನು ಪಾದಚಾರಿ ಮಾರ್ಗದಲ್ಲಿ ಸುರಿಯಲಾಗಿದೆ. ಇದರಿಂದ ನಡಿಗೆದಾರರಿಗೆ ಅನಾನುಕೂಲವಾಗಿದೆ. ಈ ಭಾಗದಲ್ಲಿ ಹಲವಾರು ವಾಣಿಜ್ಯ ಮಳಿಗೆಗಳಿದ್ದು, ನಿತ್ಯ ಸಾವಿರಾರೂ ವಾಹನಗಳು ಸಂಚರಿಸುತ್ತವೆ. ಪಾದಚಾರಿಗಳು ಜೀವ ಕೈಯಲ್ಲಿ ಹಿಡಿದುಕೊಂಡು ಮುಖ್ಯರಸ್ತೆಯಲ್ಲಿ ಸಾಗುವ ಪರಿಸ್ಥಿತಿ ಎದುರಾಗಿದೆ. ಕಸ ತೆರವುಗೊಳಿಸುವಂತೆ ಹಲವಾರು ಮನವಿ ಸಲ್ಲಿಸಿದರೂ ಪ್ರಯೋಜನ ಆಗಿಲ್ಲ.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ



ಗಾಂಧಿನಗರದ ಕಾಳಿದಾಸ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸ.

ಕ್ಯಾಮೆರಾ ಕಾವಲು: 18.34 ಲಕ್ಷ ಪ್ರಕರಣ, ₹ 80.61 ಕೋಟಿ ದಂಡ

ಸಂಚಾರ ನಿಯಮ ಉಲ್ಲಂಘನೆ ಪತ್ತೆಗೆ ‘ಎಐ’ • ಮೂರು ತಿಂಗಳ ಅಂಕಿ–ಅಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪತ್ತೆಗಾಗಿ ಕೃತಕ ಬುದ್ಧಿಮತ್ತೆ (ಎ.ಐ) ಸಂಚಾರ ನಿರ್ವಹಣಾ ವ್ಯವಸ್ಥೆಯಡಿ (ಐಟಿಎಂಎಸ್) ಆಧುನಿಕ ಕ್ಯಾಮೆರಾ ಅಳವಡಿಸಲಾಗಿದ್ದು, ಇದರಿಂದಾಗಿ ಮೂರು ತಿಂಗಳಿನಲ್ಲಿ 18.34 ಲಕ್ಷ ಪ್ರಕರಣಗಳು ದಾಖಲಾಗಿವೆ. ₹ 80.61 ಕೋಟಿ ದಂಡ ವಿಧಿಸಲಾಗಿದೆ.

ನಿಯಮ ಉಲ್ಲಂಘಿಸುವ ವಾಹನ ಮಾಲೀಕರಿಗೆ ಸಂಪರ್ಕ ರಹಿತವಾಗಿ ದಂಡ ವಿಧಿಸಲು ನಗರದ 50 ಜಂಕ್ಷನ್‌ಗಳಲ್ಲಿ 250 ಕೃತಕ ಬುದ್ಧಿಮತ್ತೆ ಕ್ಯಾಮೆರಾ ಅಳವಡಿಸಲಾಗಿದೆ. ದಿನದ 24 ಗಂಟೆಯೂ ಕ್ಯಾಮೆರಾಗಳು ಸಕ್ರಿಯವಾಗಿದ್ದು, ನಿಯಮ ಉಲ್ಲಂಘಿಸುವವರ ಫೋಟೊವನ್ನು ಕ್ಲಿಕ್ಕಿಸುತ್ತಿವೆ. ವಾಹನ ನೋಂದಣಿ ಸಂಖ್ಯೆ ಆಧರಿಸಿ ಐಟಿಎಂಎಸ್ ಮೂಲಕ ಮಾಲೀಕರಿಗೆ ದಂಡದ ಬಗ್ಗೆ ಸಂದೇಶಗಳು ರವಾನೆಯಾಗುತ್ತಿವೆ.

ಅತೀ ವೇಗದ ಚಾಲನೆ, ಸಿಗ್ನಲ್ ಜಂಪ್, ಜಿಬ್ರಾ ಕ್ರಾಸಿಂಗ್, ಹೆಲ್ಮೆಟ್ ರಹಿತ ಚಾಲನೆ, ತ್ರಿಬಲ್ ರೈಡಿಂಗ್ ಹಾಗೂ ಚಾಲನೆ ವೇಳೆ ಮೊಬೈಲ್ ಬಳಕೆ ಉಲ್ಲಂಘನೆ ಕ್ಯಾಮೆರಾದಲ್ಲಿ ಸೆರೆಯಾಗಲಿದೆ.

‘ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸುವುದು ನಮ್ಮ ಕರ್ತವ್ಯ. ನಿಯಮ ಉಲ್ಲಂಘನೆ ಪತ್ತೆ ಮಾಡುವುದರಲ್ಲಿ ಹೆಚ್ಚು ಸಮಯ ಹೋಗುತ್ತಿತ್ತು. ಹೀಗಾಗಿ, ಸ್ವಯಂಚಾಲಿತ ಕ್ಯಾಮೆರಾ ಅಳವಡಿಸಲಾಗಿದೆ. ನಿತ್ಯವೂ ಸಾವಿರಾರು ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗುತ್ತಿವೆ’ ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಹೇಳಿದರು.



ನಗರದ ಕಬ್ಬನ್ ರಸ್ತೆ ವೃತ್ತದಲ್ಲಿ ಅಳವಡಿಸಿರುವ ಕೃತಕ ಬುದ್ಧಿಮತ್ತೆ ಸಂಚಾರ ನಿರ್ವಹಣಾ ವ್ಯವಸ್ಥೆಯ ಕ್ಯಾಮೆರಾಗಳು – ಪ್ರಜಾವಾಣಿ ಚಿತ್ರ

‘ಹೆಲ್ಮೆಟ್ ಧರಿಸದ 10.50 ಲಕ್ಷ ಸವಾರರಿಗೆ ದಂಡ’

‘ದ್ವಿಚಕ್ರ ವಾಹನ ಸವಾರ ಹಾಗೂ ಹಿಂಬದಿ ಸವಾರರಿಗೆ ಹೆಲ್ಮೆಟ್ ಕಡ್ಡಾಯ ಮಾಡಲಾಗಿದೆ. ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಲಾಯಿಸಿದ್ದ ಸವಾರ ಹಾಗೂ ಹಿಂಬದಿ ಸವಾರನ ಫೋಟೊವನ್ನು ಕ್ಯಾಮೆರಾಗಳು ಸೆರೆ ಹಿಡಿದಿವೆ. ನಿಯಮ ಉಲ್ಲಂಘಿಸಿದ್ದ 10.50 ಲಕ್ಷ ಮಂದಿಗೆ ದಂಡ ವಿಧಿಸಲಾಗಿದ್ದು, ಅವರಿಗೆ ಸಂದೇಶ ಸಹ ಕಳುಹಿಸಲಾಗಿದೆ’ ಎಂದು ಸಂಚಾರ ಪೊಲೀಸರು ಹೇಳಿದರು.

ಕೆಲ ನಿಯಮ ಉಲ್ಲಂಘನೆ ಪ್ರಕರಣ ವಿವರ

ನಿಯಮ	ಪ್ರಕರಣಗಳ ಸಂಖ್ಯೆ
ತಪ್ಪು ನಿಲುಗಡೆ	2,91,899
ಸಿಗ್ನಲ್ ಜಂಪ್	2,32,626
ಸೀಟ್ ಬೆಲ್ಟ್ ಧರಿಸದಿರುವುದು	2,06,303
ನಿರ್ಬಂಧಿತ ರಸ್ತೆಯಲ್ಲಿ ಸಂಚಾರ	33,649
ದ್ವಿಚಕ್ರ ವಾಹನದಲ್ಲಿ ಮೂವರ ಸವಾರಿ	23,975
ದೋಷಪೂರಿತ ನೋಂದಣಿ ಸಂಖ್ಯೆ ಫಲಕ	18,636
ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ	16,524
ಚಾಲನೆ ವೇಳೆ ಮೊಬೈಲ್ ಬಳಕೆ	11,018
ಅಜಾಗೂರಕತೆ ಚಾಲನೆ	660
ಅತಿ ವೇಗ	917
ಪಾನಮತ್ತ ಚಾಲನೆ	975
ದೋಷಪೂರಿತ ಸೈಲೆನ್ಸರ್	47
ಡಿ.ಎಲ್ ಇಲ್ಲದೇ ಚಾಲನೆ	826
ಸಮವಸ್ತ್ರ ರಹಿತ ಚಾಲನೆ	1,406

‘1,197 ಅಪಘಾತ, 205 ಸಾವು’

‘2023ರ ಜನವರಿಯಿಂದ ಮಾರ್ಚ್ ಅಂತ್ಯದವರೆಗೆ ನಗರದಲ್ಲಿ 1197 ಅಪಘಾತಗಳು ಸಂಭವಿಸಿದೆ. ಇದರಲ್ಲಿ 205 ಮಂದಿ ಮೃತಪಟ್ಟಿದ್ದಾರೆ’ ಎಂದು ಸಂಚಾರ ಪೊಲೀಸರು ಹೇಳಿದರು.

ಬಿಸಿಲಿನ ಝಳಕ್ಕೆ 11 ಸಾವು

ನವಿ ಮುಂಬೈ: ‘ಮಹಾರಾಷ್ಟ್ರ ಭೂಷಣ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ

ಠಾಣೆ/ನವಿ ಮುಂಬೈ: ಸಾಮಾಜಿಕ ಕಾರ್ಯಕರ್ತ ದತ್ತಾತ್ರೇಯ ನಾರಾಯಣ ಅವರಿಗೆ ‘ಮಹಾರಾಷ್ಟ್ರ ಭೂಷಣ ಪ್ರಶಸ್ತಿ’ ಪ್ರದಾನ ಸಮಾರಂಭದಲ್ಲಿ ಸುಡು ಬಿಸಿಲಿನ ಝಳಕ್ಕೆ ತತ್ತರಿಸಿ ಮತ್ತು ನಿರ್ಜಲೀಕರಣದಿಂದ 11 ಜನರು ಸಾವನ್ನಪ್ಪಿದ ಘಟನೆ ಭಾನುವಾರ ನವಿ ಮುಂಬೈನ ಖಾರ್‌ಘರ್‌ನಲ್ಲಿ ನಡೆದಿದೆ.

ಇತರ 50 ಜನರು ನವಿ ಮುಂಬೈನ ಕಾಮಾಟಿಯ ಎಂಜಿಎಂ ಆಸ್ಪತ್ರೆ ಮತ್ತು ರಾಯಗಡ ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎನ್ನಲಾಗಿದೆ.

‘ಅಪ್ಪಾಸಾಹೇಬ್ ಧರ್ಮಾಧಿಕಾರಿ’ ಎಂದೇ ಜನಪ್ರಿಯರಾಗಿರುವ ದತ್ತಾತ್ರೇಯ ನಾರಾಯಣ ಅವರ ಲಕ್ಷಾಂತರ ಅನುಯಾಯಿಗಳು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಶಸ್ತಿ ಪ್ರದಾನ ಮಾಡಿದರು. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಕೂಡ ಇದ್ದರು.


ಖಾರ್‌ಘರ್ ಕಾರ್ಪೊರೇಟ್ ಪಾರ್ಕ್‌ನ ಸುಮಾರು 306 ಎಕರೆ ಮೈದಾನದಲ್ಲಿ ಬೆಳಿಗ್ಗೆ 11.30ಕ್ಕೆ ಶುರುವಾದ ಈ ಕಾರ್ಯಕ್ರಮ ಮಧ್ಯಾಹ್ನ 1 ಗಂಟೆವರೆಗೂ ನಡೆಯಿತು. ರಾಜ್ಯ ಮತ್ತು ಹೊರ ರಾಜ್ಯಗಳಿಂದ ಲಕ್ಷಾಂತರ ಜನರು ಬೆಳಿಗ್ಗೆಯಿಂದಲೇ ಮೈದಾನದಲ್ಲಿ ಜಮಾವಣೆಗೊಂಡಿದ್ದರು.

ಪ್ರಶಸ್ತಿ ಮೊತ್ತ ಸಿಎಂ ಪರಿಹಾರ ನಿಧಿಗೆ: ಪ್ರಶಸ್ತಿಯ ಮೊತ್ತ ₹25 ಲಕ್ಷದ ಚೆಕ್ಕನ್ನು ದತ್ತಾತ್ರೇಯ ನಾರಾಯಣ ಅವರು ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆ ನೀಡಿದರು.



ಖಾರ್‌ಘರ್‌ನಲ್ಲಿ ಸಾಮಾಜಿಕ ಕಾರ್ಯಕರ್ತ ದತ್ತಾತ್ರೇಯ ನಾರಾಯಣ ಅವರಿಗೆ ಭಾನುವಾರ 2022ನೇ ಸಾಲಿನ ಮಹಾರಾಷ್ಟ್ರ ಭೂಷಣ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ನೆರೆದಿದ್ದ ಅನುಯಾಯಿಗಳು – ಪಿಟಿಐ ಚಿತ್ರ

‘ಪರಿಸ್ಥಿತಿ ಲಾಭ ಪಡೆಯುವ ಮಿಷನರಿಗಳು’



ಮೋಹನ್ ಭಾಗವತ್

ಬುರ್ಹಾನಪುರ (ಮಧ್ಯಪ್ರದೇಶ): ‘ಸಮಾಜವು ನಮ್ಮೊಂದಿಗೆ ಇಲ್ಲ ಎಂಬುದಾಗಿ ಜನರು ಭಾವಿಸಿದಾಗ, ಮಿಷನರಿಗಳು ಆ ಪರಿಸ್ಥಿತಿಯ ಲಾಭವನ್ನು ಪಡೆಯಲು ಯತ್ನಿಸುತ್ತವೆ’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಇಲ್ಲಿ ಗೋವಿಂದನಾಥ ಮಹಾರಾಜರ ಸಮಾಧಿಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾವು ನಮ್ಮ ಸ್ವಂತ ಜನರ ಬಗ್ಗೆಯೇ ಕಾಳಜಿ ವಹಿಸುವುದಿಲ್ಲ. ಆದರೆ, ಕೆಲವು ಮಿಷನರಿಗಳು ನಮ್ಮಲ್ಲಿಯೇ ಉಳಿದು, ನಮ್ಮ ಆಹಾರವನ್ನೇ ಸೇವಿಸಿ, ನಮ್ಮ ಜನರನ್ನು ಮತಾಂತರಿಸುತ್ತಾರೆ. 100 ವರ್ಷಗಳಲ್ಲಿ ಎಲ್ಲವನ್ನೂ ಬದಲಾಯಿಸಲು ಅವರು ಇಲ್ಲಿಗೆ ಬಂದರು. ಆದರೆ, ಪೂರ್ವಜರ ಪ್ರಯತ್ನದಿಂದಾಗಿ ನಮ್ಮ ಬೇರು ಗಟ್ಟಿಯಾಗಿ ಉಳಿದಿವೆ’ ಎಂದಿದ್ದಾರೆ.

ಫ್ರೀಡಂ ಆ್ಯಪ್: ಮತ್ತೆ 15 ಮಂದಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂಡಿಯನ್ ಮನಿ ಡಾಟ್ ಕಾಮ್ ಕಂಪನಿ ಹಾಗೂ ಫ್ರೀಡಂ ಆ್ಯಪ್‌ನಿಂದ ವಂಚನೆಯಾಗಿದೆ’ ಎಂದು ಆರೋಪಿಸಿ ಮತ್ತೆ 15 ಮಂದಿ ಬನಶಂಕರಿ ಠಾಣೆಗೆ ಪ್ರತ್ಯೇಕ ದೂರು ನೀಡಿದ್ದಾರೆ.

‘ಅರೆಕಾಲಿಕ ಕೆಲಸದ ಆಮಿಷವೊಡ್ಡಿ ಯುವಕ–ಯುವತಿಯರನ್ನು ವಂಚಿಸಿದ್ದ ಹಾಗೂ ಕೋರ್ಸ್ ಹೆಸರಿನಲ್ಲಿ ಹಣ ಸಂಗ್ರಹಿಸಿ ಮೋಸ ಮಾಡಿದ್ದ ಬಗ್ಗೆ ಕಂಪನಿ ಉದ್ಯೋಗಿಗಳು ಸೇರಿ 44 ಮಂದಿ ದೂರು ನೀಡಿದ್ದರು. ಅದರನ್ವಯ 6 ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಇದೀಗ 15 ಮಂದಿ ಪ್ರತ್ಯೇಕ ದೂರು ನೀಡಿದ್ದು, ಅವರನ್ನೂ ಹಳೇ ಪ್ರಕರಣದ ಫಿರ್ಯಾದುದಾರರಾಗಿ ಪರಿಗಣಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಸಿ.ಎಸ್. ಸುಧೀರ್

‘ಕಂಪನಿಯ ಸಿಇಒ ಸಿ.ಎಸ್.ಸುಧೀರ್ ಹಾಗೂ ಮಾನವ ಸಂಪನ್ಮೂಲ ವಿಭಾಗದ ರಘು ಅವರನ್ನು ಈಗಾಗಲೇ ಬಂಧಿಸಲಾಗಿದೆ. ಅವರಿಬ್ಬರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರಿಂದ ಹೆಚ್ಚಿನ ಮಾಹಿತಿ ಕಲೆ ಹಾಕಬೇಕಿದೆ. ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಸೋಮವಾರ ಅರ್ಜಿ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

‘ದೂರಿನ ಸಂಗತಿಗಳಿಗೆ ಸಂಬಂಧಪಟ್ಟಂತೆ ಉದ್ಯೋಗಿಗಳು ಹಾಗೂ ಕಂಪನಿಯ ಆಡಳಿತ ಮಂಡಳಿ ಸದಸ್ಯರ ವಿಚಾರಣೆ ನಡೆಸಿ ಮಾಹಿತಿ ಪಡೆಯುತ್ತಿದ್ದೇವೆ. ವಂಚನೆ ಪ್ರಕರಣಗಳು ಒಂದೊಂದಾಗಿ ಬಯಲಾಗುತ್ತಿದ್ದು, ದೂರು ನೀಡುವವರ ಸಂಖ್ಯೆ ಹೆಚ್ಚಾಗಬಹುದು. ವಂಚನೆಗೀಡಾದವರು ಠಾಣೆಗೆ ಬಂದು ದೂರು ನೀಡಬಹುದು’ ಎಂದು ಅಧಿಕಾರಿ ಹೇಳಿದರು.


ವಿಮೆ ಹಣ ವಂಚನೆ: ‘ತೀರ್ಥಹಳ್ಳಿ ತಾಲ್ಲೂಕಿನ ಚಿಕ್ಕಳ್ಳಿಯ ಸುಧೀರ್, ಆರಂಭದಲ್ಲಿ ‘ಇಂಡಿಯನ್ ಮನಿ ಡಾಟ್ ಕಾಮ್’ ಕಂಪನಿ ಸ್ಥಾಪಿಸಿದ್ದ. ಕಮಿಷನ್ ಆಸೆಗಾಗಿ ಕೆಲ ವಿಮೆ ಕಂಪನಿಗಳ ಪಾಲಿಸಿಗಳನ್ನು ಹೆಚ್ಚು ಪ್ರಚಾರ ಮಾಡುತ್ತಿದ್ದ. ಕೆಲವರಿಗೆ ಆಮಿಷವೊಡ್ಡಿ ವಿಮೆ ಮಾಡಿಸಿದ್ದ. ಕಂತು ಕಟ್ಟಿದ್ದ ಇಬ್ಬರಿಗೆ ಯಾವುದೇ ಹಣ ವಾಪಸು ಬಂದಿಲ್ಲ. ವಂಚನೆ ಬಗ್ಗೆ ಅವರಿಬ್ಬರು ದೂರು ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಇಂಡಿಯನ್ ಮನಿ ಡಾಟ್ ಕಾಮ್ ಕಂಪನಿ ಜೊತೆಯಲ್ಲೇ ಸುಧೀರ್, ಫೈನಾನ್ಸಿಯಲ್ ಫ್ರೀಡಂ ಸಂಸ್ಥೆ ಕಟ್ಟಿದ್ದ. ಅದರಡಿ ‘ಫ್ರೀಡಂ’ ಆ್ಯಪ್ ಅಭಿವೃದ್ಧಿಪಡಿಸಿದ್ದ. ಅರೆಕಾಲಿಕ ಕೆಲಸದ ಆಮಿಷವೊಡ್ಡಿ ಯುವಕ–ಯುವತಿಯರಿಂದ ಆ್ಯಪ್ ಚಂದಾದಾರಿಕೆ ಮಾಡಿಸಿ ವಂಚಿಸಿದ್ದ. ಜೊತೆಗೆ, ರೈತರು ಹಾಗೂ ವಿವಿಧ ಕ್ಷೇತ್ರಗಳ ಸಾಧಕರ ಹೆಸರಿನಲ್ಲಿ ಕೋರ್ಸ್ ಆರಂಭಿಸಿ ಜನರಿಂದ ಹಣ ಪಡೆದು ಮೋಸ ಮಾಡಿರುವುದು ತನಿಖೆಯಿಂದ ಗೊತ್ತಾಗುತ್ತಿದೆ’ ಎಂದು ಹೇಳಿದರು.

ಚಿತ್ರಾವಳಿ



ಬಸವನಗುಡಿಯ ರಾಮಕೃಷ್ಣ ಮಠ ಆಯೋಜಿಸಿದ್ದ ‘ರಾಮಕೃಷ್ಣ ಸಂಗೀತ ಸೌರಭ’ ಸಂಗೀತೋತ್ಸವದಲ್ಲಿ ಅರುಣಾಚಲ ಪ್ರದೇಶದ ಇಟಾನಗರದ ರಾಮಕೃಷ್ಣ ಆಶ್ರಮದ ಸ್ವಾಮಿ ಕೃಪಾಕರಾನಂದಜೀ ಮಹಾರಾಜ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಭಾನುವಾರ ಪ್ರಸ್ತುತಪಡಿಸಿದರು. ತಬಲಾದಲ್ಲಿ ಜಗದೀಶ್ ಕುರ್ತಕೋಟಿ ಹಾಗೂ ಹಾರ್ಮೋನಿಯಂನಲ್ಲಿ ವ್ಯಾಸಮೂರ್ತಿ ಕಟ್ಟಿ ಸಾಥ್ ನೀಡಿದರು.



ನಗರದ ಕುಮಾರಸ್ವಾಮಿ ಬಡಾವಣೆಯಲ್ಲಿರುವ ಕೆ.ವಿ.ಸುಬ್ಬಣ್ಣ ಆಪ್ತ ರಂಗಮಂದಿರದಲ್ಲಿ ನುಡಿರಂಗ ಪ್ರಸ್ತುತಪಡಿಸಿದ ‘ಸಕುಬಾಯಿ’ ಏಕಪಾತ್ರ ನಾಟಕವನ್ನು ಕಲಾವಿದರಾದ ನುಡಿ ಸುದರ್ಶನ್ ಅವರು ಭಾನುವಾರ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಕೇಜ್ರಿವಾಲ್‌ಗೆ ಬೆಂಬಲ ಸಲ್ಲ: ಅಜಯ್ ಮಾಕೆನ್

ನವದೆಹಲಿ (ಪಿಟಿಐ): ಭ್ರಷ್ಟಾಚಾರದ ಗಂಭೀರ ಆಪಾದನೆಗಳನ್ನು ಎದುರಿಸುತ್ತಿರುವ ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಹಾಗೂ ಅವರ ಸಂಪುಟ ಸದಸ್ಯರಿಗೆ ಯಾವುದೇ ಬೆಂಬಲ ಮತ್ತು ಸಹಾನುಭೂತಿ ತೋರಬಾರದು ಎಂದು ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಅಜಯ್ ಮಾಕೆನ್ ಭಾನುವಾರ ಹೇಳಿದ್ದಾರೆ.

ಕಾಂಗ್ರೆಸ್ ವರಿಷ್ಠರ ನಿಲುವಿಗೆ ವಿರುದ್ಧವಾಗಿ ಮಾಕೆನ್, ಕೇಜ್ರಿವಾಲ್ ವಿರುದ್ಧ ಸರಣಿ ಟ್ವೀಟ್ ಸಮರ ನಡೆಸಿದ್ದಾರೆ. ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಅರವಿಂದ ಕೇಜ್ರಿವಾಲ್ ಅವರಿಗೆ ಸಿಬಿಐ ನೋಟಿಸ್ ಜಾರಿ ಮಾಡಿದ್ದ ಬೆನ್ನಲ್ಲೇ ಶನಿವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಕೇಜ್ರಿವಾಲ್ ಅವರಿಗೆ ದೂರವಾಣಿ ಕರೆ ಮಾಡಿ ಬೆಂಬಲ ಸೂಚಿಸಿದ್ದರು. ಬಿಜೆಪಿ ವಿರುದ್ಧ ಒಗ್ಗಟ್ಟು ಕಾಯ್ದುಕೊಳ್ಳುವಂತೆ ವಿಪಕ್ಷಗಳಿಗೆ ಕರೆ ಕೂಡ ನೀಡಿದ್ದರು.

ನಗರದಲ್ಲಿ ಇಂದು

ನಾಟ್ಯಾಂಜಲಿ ಉತ್ಸವ: ಅತಿಥಿಗಳು: ಎಸ್.ಸಿ. ಪ್ರಸನ್ನಮೂರ್ತಿ, ಎಲ್. ಸಿದ್ಧರಾಜು, ಮಹೇಂದ್ರ ಮುನ್ನೋತ್, ಆಯೋಜನೆ: ನೃತ್ಯ ಸಂಜೀವಿನಿ ಅಕಾಡೆಮಿ, ಸ್ಥಳ: ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ: ಅತಿಥಿಗಳು: ಆರ್.ಎನ್. ರಾಜಾನಾಯಕ್, ನಿರ್ಮಲ್ ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಭಾರತ್ ವಿದ್ಯಾ ಸಂಸ್ಥೆ, ಜಯನಗರ, ಮಧ್ಯಾಹ್ನ 2

ಚಿತ್ರಕಲಾ ತರಗತಿ ಸಮಾರೋಪ ಸಮಾರಂಭ: ಅತಿಥಿ: ಎಸ್. ಪಿನಾಕಪಾಣಿ, ಬಹುಮಾನ ವಿತರಣೆ: ಪಿ.ಆರ್. ಪ್ರಸನ್ನ, ಅಧ್ಯಕ್ಷತೆ: ಸಿ. ನಿರಂಜನ್, ಆಯೋಜನೆ: ತೃಪ್ತಿ ಪ್ಲೇಹೋಂ ಸ್ಕ್ರಿಬಲ್ ಆರ್ಟ್ ಇನ್‌ಸ್ಟಿಟ್ಯೂಷನ್, ಸ್ಥಳ: ಬೆಳಕು, 7ನೇ ಮುಖ್ಯರಸ್ತೆ, ಕೆ.ಸಿ.ಎಚ್.ಎಸ್ ಲೇಔಟ್, ದೊಡ್ಡಬಸ್ತಿ ರಸ್ತೆ, ನಾಗದೇವನಹಳ್ಳಿ, ಸಂಜೆ 5

ರಾಮೋತ್ಸವ ವಿಶೇಷ



ವಿನಯ್ ಶರ್ವ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ವೇದಾಂತ್ ಮತ್ತು ತಂಡ, ಸಂಗೀತ ಕಛೇರಿ: ವಿನಯ್ ಶರ್ವ, ಪ್ರಾದೇಶಾಚಾರ್, ಬಿ.ಸಿ. ಮಂಜುನಾಥ್, ಭಾರದ್ವಾಜ್ ಶಥವಲ್ಲಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

30ನೇ ಶ್ರೀರಾಮನವಮಿ ಸಂಗೀತೋತ್ಸವ: ಭರತನಾಟ್ಯ ಪ್ರದರ್ಶನ: ನಿಧಿ, ಗಾಯನ: ಪವನ್ ರಂಗಾಚಾರ್, ಪಿಟೀಲು: ಅಚ್ಯುತ್ ರಾವ್, ಮೃದಂಗ: ಪುತ್ತೂರು ನಿಕ್ಷಿತ್, ಮೋರ್ಚಿಂಗ: ಭಾಗ್ಯಲಕ್ಷ್ಮಿ ಎಂ. ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ದ್ವಂದ್ವ ಗಾಯನ: ಅಕ್ಕರೈ ಸುಬ್ಬಲಕ್ಷ್ಮಿ, ಅಕ್ಕರೈ ಸ್ವರ್ಣಲತಾ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ವಿಜಯ್ ನಟೇಶನ್, ಘಟ: ಗಿರಿಧರ್ ಉಡುಪ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮಾದರಿ ಕ್ಷೇತ್ರ

ಪದ್ಮನಾಭನಗರ

ಬೆಂಗಳೂರು ದಕ್ಷಿಣ ಭಾಗದಲ್ಲಿರುವ ಪದ್ಮನಾಭನಗರ ಕ್ಷೇತ್ರದಲ್ಲಿ ನಾಗರಿಕ ಸೌಕರ್ಯಗಳ ಕೊರತೆಗಳಿವೆ. ಅವುಗಳನ್ನು ಸರಿಪಡಿಸಿ ಮಾದರಿ ಕ್ಷೇತ್ರವನ್ನಾಗಿಸಬೇಕು ಎಂಬುದು ನಾಗರಿಕರ ಆಶಯ.

ಬಸ್ ತಂಗುದಾಣಗಳ ನಿರ್ಮಾಣವಾಗಬೇಕು



ಕ್ಷೇತ್ರದಲ್ಲಿ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸಬೇಕು. ಬಸ್ ನಿಲ್ದಾಣ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಉಚಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಸರ್ಕಾರಿ ಗ್ರಂಥಾಲಯ ನಿರ್ಮಿಸಬೇಕು, ಪಾರ್ಕ್‌ಗಳಲ್ಲಿ ಸ್ವಚ್ಛತೆ ಕಾಪಾಡಲು ಆದ್ಯತೆ ನೀಡಬೇಕು. ಉತ್ತಮ ಆರೋಗ್ಯ ಮತ್ತು ಶಿಕ್ಷಣಕ್ಕೆ ಸರ್ಕಾರ ಉತ್ತೇಜನ ಕೊಡಬೇಕು. ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಮತ್ತು ಉದ್ಯೋಗ ಆಕಾಂಕ್ಷಿಗಳಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಸದಾ ಕನ್ನಡ ಭಾಷೆಗೆ ಆದ್ಯತೆ ನೀಡಬೇಕು, ನಾಡಿಗೆ ಭಾಷೆಗೆ ಮೆರಗು ತರುವ ಕಾರ್ಯಕ್ರಮಗಳನ್ನು ಮಾಡಬೇಕು.

ಚನ್ನೇಗೌಡ, ತಿಮ್ಮರಾಯಗೌಡರ ಬಡಾವಣೆ, ಪದ್ಮನಾಭ ನಗರ ಕ್ಷೇತ್ರ

ಕ್ರೀಡಾಂಗಣ ನಿರ್ಮಾಣ ಆಗಬೇಕು



ಇಟ್ಟಮಡು ಮುಖ್ಯರಸ್ತೆಯಲ್ಲಿ ಹೆಚ್ಚು ಖಾಸಗಿ ಶಾಲೆಗಳಿದ್ದು, ರಸ್ತೆ ಚಿಕ್ಕದಾಗಿದೆ. ಮಕ್ಕಳನ್ನು ಶಾಲೆಗೆ ಬಿಡಲು ಪೋಷಕರು ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುತ್ತಾರೆ. ಆದ್ದರಿಂದ ವಾಹನ ಸಂಚಾರರು ಪರದಾಡುವುದು ನಿತ್ಯದ ಸಮಸ್ಯೆ. ಕಸದ ಗಾಡಿಗಳು ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ. ಇದನ್ನು ಸರಿ ಪಡಿಸಬೇಕು. ಕ್ಷೇತ್ರದಲ್ಲಿ ಸಾರ್ವಜನಿಕ ಶೌಚಾಲಯದ ಅವಶ್ಯಕತೆ ಇದ್ದು, ಅಗತ್ಯ ಇರುವ ಕಡೆ ನಿರ್ಮಿಸಬೇಕು. ಭುವನೇಶ್ವರಿನಗರ, ಹೊಸಕೆರಹಳ್ಳಿ, ಇಟ್ಟಮಡು ವ್ಯಾಪ್ತಿಯಲ್ಲಿ ಕ್ರೀಡಾಂಗಣ ಇಲ್ಲ. ಕ್ಷೇತ್ರದ ಯುವಕರಿಗೆ ಆಟ ಆಡಲು ಒಂದು ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ ನಿರ್ಮಿಸಬೇಕು.

ಜಿ.ಸಿ. ನಾಗೇಶ್, ಪದ್ಮನಾಭನಗರ

ಕೆರೆಗಳನ್ನು ಉಳಿಸಬೇಕು



ಬೆಂಗಳೂರು ಎಂದರೆ ಕೆರೆಗಳಿಂದ ಕೂಡಿದ ನಗರ. ಇಂದು ಕೆರೆಗಳನ್ನು ಉಳಿಸುವ ಅನಿವಾರ್ಯತೆ ಇದೆ. ಪದ್ಮನಾಭನಗರ ವ್ಯಾಪ್ತಿಯಲ್ಲಿ ಚಿಕ್ಕಲ್ಲಸಂದ್ರ ಕೆರೆ, ಇಟ್ಟಮಡು ಕೆರೆ, ಹೊಸಕೆರೆಹಳ್ಳಿ ಕೆರೆಗಳು ದಿನೇ ದಿನೇ ರೂಪ ಕಳೆದುಕೊಂಡು ನಶಿಸಿ ಹೋಗುತ್ತಿವೆ. ಇವುಗಳನ್ನು ಉಳಿಸಬೇಕು. ಹೊಸಕೆರಹಳ್ಳಿ ವ್ಯಾಪ್ತಿಯಲ್ಲಿ ಒಂದು ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆ ನಿರ್ಮಿಸಬೇಕು. ಹೊರ ವರ್ತುಲ ರಸ್ತೆಯ ಜನತಾ ಬಜಾರ್‌ನಿಂದ ಇಟ್ಟಮಡು ಮುಖ್ಯರಸ್ತೆ ಮೂಲಕ ಹೋಗುವ ರಸ್ತೆ ಅಗಲೀಕರಣ ಮಾಡಬೇಕು. ಗಣೇಶ ಮಂದಿರ ವಾರ್ಡ್‌ನಲ್ಲಿ ಹೆರಿಗೆ ಆಸ್ಪತ್ರೆ ನಿರ್ಮಾಣದ ಪ್ರಸ್ತಾವನೆ ಹಾಗೇ ಉಳಿದಿದೆ. ಕೂಡಲೇ ಆರಂಭಿಸಬೇಕು.

ಜಿ.ಜೆ. ಯೋಗೇಶ್ ಪುಣ್ಯಕೋಟಿ, ಇಟ್ಟಮಡು ನಿವಾಸಿ

ಬೊಮ್ಮನಹಳ್ಳಿ

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರವು ಹೊಸ ಮತ್ತು ಹಳೇ ಬಡಾವಣೆಗಳಿಂದ ಕೂಡಿದೆ. ಈ ಕ್ಷೇತ್ರದಲ್ಲೂ ಹಲವು ಮೂಲಸೌಕರ್ಯದ ಕೊರತೆಯನ್ನು ಜನ ಎದುರಿಸುತ್ತಿದ್ದು, ಮುಂದಿನ ಶಾಸಕರು ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬೇಕು ಎಂಬುದು ಜನರ ನಿರೀಕ್ಷೆ.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಬೇಕು



ಬೊಮ್ಮನಹಳ್ಳಿ ವ್ಯಾಪ್ತಿಯ ಸರ್ಕಾರಿ ಶಾಲೆಗಳ ಉನ್ನತೀಕರಣ ಮತ್ತು ಉತ್ತಮ ಕುಡಿಯುವ ನೀರಿನ ಸೌಲಭ್ಯ ಎಲ್ಲಾ ಶಾಲೆಗಳಲ್ಲಿ ಮಾಡಬೇಕು. ದೇವರಚಿಕ್ಕನಹಳ್ಳಿ ಸಾರಿಗೆ ಕಚೇರಿ ಸುತ್ತ ಮುತ್ತ ಸರ್ಕಾರಿ ಜಾಗ ಬಳಸಿಕೊಂಡು ಹೈಟೆಕ್ ಕ್ರೀಡಾಂಗಣ ನಿರ್ಮಿಸಬೇಕು. ಸಾರ್ವಜನಿಕ ಗ್ರಂಥಾಲಯ, ಉದ್ಯಾನಗಳಲ್ಲಿ ವ್ಯಾಯಾಮ ಸಲಕರಣೆಗಳ್ನು ಅಳವಡಿಸಬೇಕು. ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಐಟಿ ಕಂಪನಿಗಳು ಇರುವುದರಿಂದ ಸಂಚಾರ ದಟ್ಟಣೆ ಹೆಚ್ಚಿದ್ದು, ನಿರ್ವಹಣೆಗೆ ಹೆಚ್ಚು ಆದ್ಯತೆ ನೀಡಬೇಕು. ಸರ್ಕಾರಿ ಆಸ್ಪತ್ರೆಯನ್ನು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಮಾಡಬೇಕು.

ಬಿ.ಎ.ವೇಣುಕುಮಾರ್, ಹುಳಿಮಾವು ನಿವಾಸಿ, ಬೊಮ್ಮನಹಳ್ಳಿ ಕ್ಷೇತ್ರ

ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು



ಕ್ಷೇತ್ರದಲ್ಲಿ ಖಾಲಿ ಇರುವ ಜಾಗದಲ್ಲಿ ಕಸ ಎಸೆದು ಹೋಗುತ್ತಾರೆ. ಅಂತಹ ಸ್ಥಳಗಳಿಗೆ ಸಿಸಿಟಿವಿ ಕ್ಯಾಮರಾ ಅಳವಡಿಕೆ ಮಾಡಿ ಸ್ವಚ್ಛತೆ ಕಾಪಾಡಬೇಕು. ಬೀದಿ ನಾಯಿಗಳ ಹೆಚ್ಚಿದ್ದು, ನಾಗರಿಕರು ವಾಯು ವಿಹಾರ ಮಾಡಲು ಸಮಸ್ಯೆ ಆಗುತ್ತದೆ. ಅದರಲ್ಲೂ ವಯೋವೃದ್ಧರು ವಾಯು ವಿಹಾರ ಮಾಡಲು ಕಷ್ಟವಾಗುತ್ತಿದೆ. ಹಿರಿಯ ನಾಗರಿಕರ ವೇದಿಕೆ ಸ್ಥಾಪಿಸಬೇಕು. ಹುಳಿಮಾವು ಮತ್ತು ನ್ಯಾನಪ್ಪನಹಳ್ಳಿ ಮುಖ್ಯರಸ್ತೆಯ ಕೃಷ್ಣ ಕುಟೀರ ಹೋಟೆಲ್ ಬಳಿ ಸಿಗ್ನಲ್ ನಿರ್ಮಿಸಬೇಕು. ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು. ಬನಶಂಕರಿ, ಮೆಜೆಸ್ಟಿಕ್, ಹೆಬ್ಬಾಳ, ಯಲಹಂಕ ಕಡೆಗೆ ಹೋಗುವ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು.

ಶಂಕರ್ ಎಚ್.ವಸ್ತ್ರದ್, ಅವನಿ ಶೃಂಗೇರಿ ನಗರ ನಿವಾಸಿ

ಸ್ವಚ್ಛತೆ ನಿರಂತರವಾಗಿ ಇರಬೇಕು



ಅಭಿವೃದ್ಧಿ ಕಾಮಗಾರಿಗಳು ಚುನಾವಣೆ ನೆಪಕ್ಕೆ ಮಾತ್ರ ಸೀಮಿತವಾಗಬಾರದು. ರಸ್ತೆ, ಚರಂಡಿ, ಅಭಿವೃದ್ಧಿ ನಿರಂತರರವಾಗಿ ಆಗಬೇಕು. ಎಎಸ್‌ಆರ್ ಬಡಾವಣೆಯಲ್ಲಿ ಬೀದಿ ದೀಪದ ಸಮಸ್ಯೆ ಸರಿಪಡಿಸಬೇಕು. ಬಡವರಿಗೆ ಆಶ್ರಯ ಯೋಜನೆಯಡಿ ವಸತಿ ಕಲ್ಪಿಸಬೇಕು. ಯಾವುದೇ ಸರ್ಕಾರಿ ಕಾಮಗಾರಿಗಳು ವಿಳಂಬ ಆಗದಂತೆ ನೋಡಬೇಕು. ರಸ್ತೆಯಲ್ಲಿ ಸ್ವಚ್ಛತೆ ಕಾಪಾಡಬೇಕು. ಉತ್ತಮ ಆರೋಗ್ಯ ಉತ್ತಮ ಪರಿಸರ ವಾತವರಣ ನಿರ್ಮಿಸಲು ನಾಗರಿಕರ ಜವಾಬ್ದಾರಿ ಮತ್ತು ಕಾಳಜಿ ಕೂಡ ಬಹಳ ಮುಖ್ಯ. ಈ ಬಗ್ಗೆ ಅರಿವು ಮೂಡಿಸುವ ಕೆಲಸವನ್ನೂ ಮುಂದಿನ ಶಾಸಕರು ಮಾಡಬೇಕು.

ಎಂ.ಚಂದ್ರಶೇಖರ್, ಬೊಮ್ಮನಹಳ್ಳಿ ಕ್ಷೇತ್ರ

ಸೆಲೆಬ್ರಿಟಿ ಮಾತು



ಉದಾಸೀನ ಬೇಡ, ಉತ್ಸಾಹವಿರಲಿ

ಸ್ವಾತಿ, ಕಿರುತೆರೆ ಕಲಾವಿದೆ

ನಮ್ಮನ್ನು ಆಳುವವರನ್ನು ನಾವೇ ಆಯ್ಕೆ ಮಾಡಿಕೊಳ್ಳುವಂತಹ ಸುಂದರ ಪ್ರಜಾಪ್ರಭುತ್ವ ವ್ಯವಸ್ಥೆ ನಮ್ಮದು. ಪ್ರಜೆಯೇ ಪ್ರಭು ಎಂಬ ಮಾತಿಗೆ ನಿಜವಾದ ಅರ್ಥ ಬರುವುದು ನಾವೆಲ್ಲ ನಮ್ಮ ಹಕ್ಕು ಚಲಾಯಿಸಿ ಸೂಕ್ತ ನಾಯಕರನ್ನು ಆಯ್ಕೆ ಮಾಡಿದಾಗ ಮಾತ್ರ. ಸರ್ಕಾರ ಎಂಬುದು ನಮ್ಮಿಂದ, ನಮಗಾಗಿ, ನಾವೇ ರೂಪಿಸಿಕೊಳ್ಳುವ ಆಡಳಿತ ವ್ಯವಸ್ಥೆ. ಅದು ನಮಗೆ ಬೇಕಾದಂತೆ ಇರಬೇಕು ಎಂದಾದರೆ ಮೊದಲು ನಾವು ಮತಗಟ್ಟೆಗೆ ಹೋಗಿ ಮತ ಹಾಕಬೇಕು. ಈ ಸಲ ಮೇ 10 ನೆನಪಿದೆಯಲ್ವಾ? ನಾವೆಲ್ಲ ನಮ್ಮ ಹಕ್ಕು ಚಲಾಯಿಸುವ ದಿನ. ಯಾರೋ ಒಬ್ಬರು ಗೆಲ್ಲುತ್ತಾರೆ, ನಮಗ್ಯಾಕೆ ರಾಜಕೀಯದ ಉಸಾಬರಿ ಎಂದು ಉದಾಸೀನ ಮಾಡದೆ ಉತ್ಸಾಹದಿಂದ ಮತ ಚಲಾಯಿಸಿ.



ಕ್ಷೇತ್ರ	ಬಿಟಿಎಂ ಲೇಔಟ್
ಅಭ್ಯರ್ಥಿ	ಕೆ.ಆರ್. ಶ್ರೀಧರ (55)
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹180.84 ಕೋಟಿ
ಅಪರಾಧ ಪ್ರಕರಣ	4 ಕ್ರಿಮಿನಲ್ ಪ್ರಕರಣ
ಶಿಕ್ಷಣ	ಎಸ್‌ಎಸ್‌ಎಲ್‌ಸಿ
ಚರಾಸ್ತಿ	₹43.83 ಕೋಟಿ
ಸ್ಥಿರಾಸ್ತಿ	₹137.01 ಕೋಟಿ
ಸಾಲ	₹33.49 ಕೋಟಿ
ವಾಹನಗಳು	ಆಡಿ, ಫಾರ್ಚ್ಯೂನರ್, ಇನ್ನೋವಾ ಕಾರು ಸೇರಿದಂತೆ ₹53.54 ಲಕ್ಷ ಮೌಲ್ಯದ 4 ವಾಹನ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹4.51 ಕೋಟಿ
ಸಾಲ	₹2.27 ಲಕ್ಷ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	₹19 ಲಕ್ಷ

‘ಸಂಚಾರ ದಟ್ಟಣೆ ಪರಿಹರಿಸುವಷ್ಟು ಮೆಟ್ರೊ ರೈಲು ಯೋಜನೆಗಳು ಅನುಷ್ಠಾನವಾಗಿಲ್ಲ’

ಇನ್ನೂ ಬಲವಾಗಬೇಕು ಮೆಟ್ರೊ ಜಾಲ

• ವಿಜಯಕುಮಾರ್ ಎಸ್.ಕೆ.



ಪ್ರಜಾವಾಣಿ ವಿಶೇಷ

ಬೆಂಗಳೂರು: ಸಿಲಿಕಾನ್ ಸಿಟಿ ನಿರೀಕ್ಷೆಗೂ ಮೀರಿ ವೇಗವಾಗಿ ಬೆಳೆಯುತ್ತಿದ್ದರೆ, ಸಂಚಾರ ದಟ್ಟಣೆ ಸಮಸ್ಯೆಯೂ ಅಷ್ಟೇ ದೊಡ್ಡದಾಗುತ್ತಿದೆ. ಇದಕ್ಕೆ ಪರಿಹಾರ ಆಗಬಹುದಾದ ಮೆಟ್ರೊ ರೈಲು ಯೋಜನೆಗಳು ಮಾತ್ರ ಅಷ್ಟು ವೇಗವಾಗಿ ಅನುಷ್ಠಾನವಾಗುತ್ತಿಲ್ಲ ಎಂಬ ಅಸಮಾಧಾನ ನಗರದ ಜನರಲ್ಲಿದೆ.

ಹೈದರಾಬಾದ್ ಮತ್ತು ಚೆನ್ನೈ ನಗರಕ್ಕೆ ಹೋಲಿಸಿದರೆ ಬೆಂಗಳೂರಿನಲ್ಲಿ ನಮ್ಮ ಮೆಟ್ರೊ ಯೋಜನೆ ವಿಸ್ತರಣೆ ನಿಧಾನವಾಗುತ್ತಿದೆ. ನಮ್ಮ ಮೆಟ್ರೊ ರೈಲು ಯೋಜನೆ 2006ರಲ್ಲಿ ಮೊದಲ ಅನುಮೋದನೆ ದೊರೆತಿದ್ದು, 2011ರಲ್ಲಿ ಬೈಯಪ್ಪನಹಳ್ಳಿಯಿಂದ ಎಂ.ಜಿ. ರಸ್ತೆ ತನಕ ಮೊದಲ ಮೆಟ್ರೊ ರೈಲು ಕಾರ್ಯಾಚರಣೆ ಆರಂಭವಾಯಿತು. ಸದ್ಯ 69.66 ಕಿಲೋ ಮೀಟರ್‌ನಲ್ಲಿ ಮೆಟ್ರೊ ಜಾಲ ಇದೆ.

ದೆಹಲಿಯಲ್ಲಿ 2002ರಿಂದಲೇ ಮೆಟ್ರೊ ರೈಲು ಕಾರ್ಯಾಚರಣೆ ಆರಂಭವಾಗಿದ್ದು, 349 ಕಿಲೋ ಮೀಟರ್‌ನಷ್ಟು ಜಾಲ ವಿಸ್ತರಣೆಗೊಂಡಿದೆ. ಹೈದರಾಬಾದ್‌ನಲ್ಲಿ 2017ರಲ್ಲಿ ಮೊದಲ ಮೆಟ್ರೊ ರೈಲು ಕಾರ್ಯಾಚರಣೆಗೊಂಡಿದ್ದು, 67 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ರೈಲು ಸಂಚರಿಸುತ್ತಿವೆ. ಚೆನ್ನೈನಲ್ಲಿ 2015ರಿಂದ ಕಾರ್ಯಾಚರಣೆಯಲ್ಲಿದ್ದು, 54 ಕಿಲೋ ಮೀಟರ್‌ನಲ್ಲಿ ಮೆಟ್ರೊ ರೈಲು ಕಾರ್ಯಾಚರಣೆ ಮಾಡುತ್ತಿವೆ.

ದಕ್ಷಿಣ ಭಾರತದಲ್ಲೇ ಮೆಟ್ರೊ ರೈಲು ಕಾರ್ಯಾಚರಣೆ ಮೊದಲು ಆರಂಭವಾಗಿದ್ದು ಬೆಂಗಳೂರಿನಲ್ಲಿ. ಹೈದರಾಬಾದ್ ಮೆಟ್ರೊ ದೇಶದಲ್ಲಿ ಎರಡನೇ ಸ್ಥಾನಕ್ಕೆ ಹೋಗಿತ್ತು. ವೈಟ್‌ಫೀಲ್ಡ್ ಮೆಟ್ರೊ ಮಾರ್ಗ ಆರಂಭವಾದ ನಂತರ ಈಗ ಆ ಸ್ಥಾನವನ್ನು ಬೆಂಗಳೂರು ಮೆಟ್ರೊ ಹಿಂದಿಕ್ಕಿದೆ. 2023ರ ಅಂತ್ಯದೊಳಗೆ 100 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಮೆಟ್ರೊ ರೈಲು ಕಾರ್ಯಾಚರಣೆ ಮಾಡುವ ಗುರಿಯನ್ನು ಬಿಎಂಆರ್‌ಸಿಎಲ್ ಹೊಂದಿದೆ.

ಆದರೂ, ನೆರೆ ರಾಜ್ಯಗಳ ಕಾಮಗಾರಿಯ ವೇಗ ನೋಡಿದರೆ ಬೆಂಗಳೂರು ಮೆಟ್ರೊ ರೈಲು ಯೋಜನೆ ಅನುಷ್ಠಾನ ವಿಳಂಬ ಎನ್ನುತ್ತಾರೆ ಸಾರಿಗೆ ತಜ್ಞರು. ಬೇರೆಲ್ಲಾ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ಸಂಪರ್ಕ ಉತ್ತಮವಾಗಿದೆ. ಉಪನಗರ ರೈಲು ಯೋಜನೆಗಳು ಅನುಷ್ಠಾನಗೊಂಡಿವೆ. ಬೆಂಗಳೂರಿನಲ್ಲಿ ಉಪನಗರ ರೈಲು ಯೋಜನೆ ಕಾಮಗಾರಿ ಶೇ 1ಕ್ಕಿಂತ ಮೇಲೇರಿಲ್ಲ. ಸಂಚಾರ ದಟ್ಟಣೆ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಮೆಟ್ರೊ ರೈಲು ಯೋಜನೆಯನ್ನು ವೇಗವಾಗಿ ಅನುಷ್ಠಾನ ಮಾಡಬೇಕಾಗುತ್ತದೆ. ಅದನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಮಾಡುತ್ತಿಲ್ಲ. ಈ ಬಗ್ಗೆ ರಾಜಕೀಯ ಇಚ್ಛಾಶಕ್ತಿಯೂ ಇಲ್ಲ ಎಂದು ತಜ್ಞರು ಬೇಸರ ವ್ಯಕ್ತಪಡಿಸುತ್ತಾರೆ.

‘ವೇಗವಾಗಿ ವಿಸ್ತರಣೆಯಾಗಬೇಕು’



ಚೆನ್ನೈಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಮೆಟ್ರೊ ರೈಲು ಕಾಮಗಾರಿ ನಿಧಾನವಾಗಿ ನಡೆಯುತ್ತಿದೆ. ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡಲು ಮೆಟ್ರೊ ರೈಲು ಯೋಜನೆಯೇ ಸದ್ಯಕ್ಕೆ ಇರುವ ಪರಿಹಾರ. ಮುಂಬೈ ಮತ್ತು ಚೆನ್ನೈ ನಗರಗಳಲ್ಲಿ ಉಪನಗರ ರೈಲುಗಳಿವೆ. ಬೆಂಗಳೂರಿನಲ್ಲಿ ಉಪನಗರ ರೈಲುಗಳ ಕಾರ್ಯಾಚರಣೆಗೆ ಇನ್ನೂ ಸಾಕಷ್ಟು ವರ್ಷ ಕಾಯಬೇಕಿದೆ. ಈ ಸಂದರ್ಭದಲ್ಲಿ ಮೆಟ್ರೊ ಜಾಲವನ್ನು ವೇಗವಾಗಿ ವಿಸ್ತರಣೆ ಮಾಡುವ ಅವಶ್ಯಕತೆ ಇದೆ.

ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

‘ಐಟಿ ಕಂಪನಿಯಂತೆ ಮೆಟ್ರೊ ಜಾಲವೂ ಬೆಳೆಯಬೇಕು’



800 ಚದರ ಕಿಲೋ ಮೀಟರ್ ವಿಸ್ತರಿಸಿಕೊಂಡಿರುವ ಬೆಂಗಳೂರು ನಗರದಲ್ಲಿ ಮೆಟ್ರೊ ರೈಲು ಈವರೆಗೆ 69 ಕಿಲೋ ಮೀಟರ್ ಮಾತ್ರ ಕಾರ್ಯಾಚರಣೆಯಾಗುತ್ತಿದೆ. ಬಿಟಿಎಂ ಲೇಔಟ್‌ನಲ್ಲಿ ಕಾಮಗಾರಿ ಆರಂಭವಾಗಿ ಹಲವು ವರ್ಷಗಳೇ ಕಳೆದಿದ್ದು, ಇನ್ನೂ ಕಾಮಗಾರಿ ನಡೆಯುತ್ತಲೇ ಇದೆ. ಐಟಿ ಕಂಪನಿಗಳು ನೆಲೆಯೂರಿದ್ದರಿಂದ ಮಹದೇವಪುರ, ಬೆಳ್ಳಂದೂರು, ಸರ್ಜಾಪುರ ವ್ಯಾಪ್ತಿಯಲ್ಲಿ ಮೆಟ್ರೊ ರೈಲುಗಳ ಸಂಚಾರಕ್ಕೆ ಇನ್ನೂ ಸಾಕಷ್ಟು ವರ್ಷಗಳೇ ಬೇಕು. ಈ ವ್ಯಾಪ್ತಿಯಲ್ಲಿ ಪ್ರಯಾಣ ಮಾಡಲಾಗದೆ ಜನ ಪರದಾಡುತ್ತಿದ್ದಾರೆ. ನಗರ ಬೆಳೆದಂತೆ ಮೆಟ್ರೊ ರೈಲು ಯೋಜನೆ ವಿಸ್ತರಣೆ ಮಾಡುವ ಕೆಲಸವನ್ನು ಮುಂದೆ ಬರುವ ರಾಜ್ಯ ಸರ್ಕಾರ ಮಾಡಬೇಕು.

ಅನಿಲ್‌ಕುಮಾರ್, ಸಾಫ್ಟ್‌ವೇರ್ ಕಂಪನಿ ಉದ್ಯೋಗಿ

‘ಐಟಿ ಕಂಪನಿ ಜತೆಯಲ್ಲೇ ಮೆಟ್ರೊ ಬರಬೇಕಿತ್ತು’



ಬೆಂಗಳೂರಿನಲ್ಲಿ ಐಟಿ ಕಂಪನಿಗಳು ನೆಲೆಯೂರಲು ಅನುಮತಿ ನೀಡಿದ ಸಂದರ್ಭದಲ್ಲೇ ಮೆಟ್ರೊ ರೈಲು ಯೋಜನೆಯನ್ನೂ ಅನುಷ್ಠಾನಗೊಳಿಸುವ ಯೋಚನೆಯನ್ನು ಅಂದಿನ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಾಡಬೇಕಿತ್ತು. ಅದನ್ನು ಮಾಡದಿರುವುದರಿಂದ ಬೆಂಗಳೂರಿನ ಜನ ಸಂಚಾರ ದಟ್ಟಣೆಯಲ್ಲಿ ಸಿಲುಕುವಂತಾಗಿದೆ. ಇಷ್ಟು ದೊಡ್ಡದಾಗಿ ಬೆಳೆದಿರುವ ನಗರದಲ್ಲಿ ಕೇವಲ 69 ಕಿಲೋ ಮೀಟರ್ ಮಾತ್ರ ಮೆಟ್ರೊ ಜಾಲವಿದೆ ಎಂದರೆ ಬೇಸರದ ಸಂಗತಿ. ಮುಂದೆ ಅಧಿಕಾರಕ್ಕೆ ಬರುವ ಸರ್ಕಾರವಾದರೂ ಮೆಟ್ರೊ ಜಾಲ ವಿಸ್ತರಣೆಗೆ ಆದ್ಯತೆ ನೀಡಬೇಕು.

ವಂಶಿ, ಸಾಫ್ಟ್‌ವೇರ್ ಕಂಪನಿ ಉದ್ಯೋಗಿ



ರಾಜಾಜಿನಗರ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್‌.ಸುರೇಶ್‌ಕುಮಾರ್ ಅವರು ಪ್ರಕಾಶ್ ನಗರದಲ್ಲಿ ಭಾನುವಾರ ಬೆಂಬಲಿಗರೊಂದಿಗೆ ಮತಯಾಚಿಸಿದರು —ಪ್ರಜಾವಾಣಿ ಚಿತ್ರ

‘ಅಲೆಮಾರಿ ಸಮುದಾಯಗಳಿಗೆ ಮೂರು ಪಕ್ಷದಲ್ಲೂ ಟಿಕೆಟ್ ಇಲ್ಲ’

ಬೆಂಗಳೂರು: ‘ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಪರಿಶಿಷ್ಟ ಜಾತಿಯಲ್ಲಿನ ಅಲೆಮಾರಿ ಸಮುದಾಯಗಳಿಗೆ ಯಾವುದೇ ರಾಜಕೀಯ ಪಕ್ಷವೂ ಅವಕಾಶ ನೀಡಿಲ್ಲ’ ಎಂದು ಅಖಿಲ ಕರ್ನಾಟಕ ಕುಳುವ ಮಹಾಸಂಘ ಆರೋಪಿಸಿದೆ.

‘ರಾಜ್ಯದಲ್ಲಿರುವ 36 ಮೀಸಲು ಕ್ಷೇತ್ರಗಳಲ್ಲಿ ಕನಿಷ್ಠ ಒಂದು ಕ್ಷೇತ್ರವನ್ನೂ ಕೊರಮ–ಕೊರಚ ಸಮುದಾಯಕ್ಕೆ ನೀಡಿಲ್ಲ. ಕಾಂಗ್ರೆಸ್‌ನ ಎರಡನೇ ಪಟ್ಟಿಯಲ್ಲಿ ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಿಂದ ಜಿ. ಪಲ್ಲವಿ ಹೆಸರು ಅಂತಿಮವಾಗಿತ್ತು. ಆದರೆ, ಎಡಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂಬ ನೆಪವೊಡ್ಡಿ ಈಗಾಗಲೇ 6 ಬಾರಿ ಸೋತಿರುವ ಅಭ್ಯರ್ಥಿಗೆ ಮಣೆ ಹಾಕಲಾಗಿದೆ’ ಎಂದು ಕೊರಮ- ಕೊರಚ-ಕೊರವ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಶಿವಾನಂದ ಎಂ. ಭಜಂತ್ರಿ ದೂರಿದ್ದಾರೆ.

‘ಪರಿಶಿಷ್ಟ ಜಾತಿಯಲ್ಲಿನ ಬಲಾಢ್ಯ 4 ಜಾತಿಗಳಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ಅಲೆಮಾರಿ ಹಾಗೂ ಇತರೆ ಸಮುದಾಯಗಳಿಗೆ ಆದ್ಯತೆ ನೀಡದೆ ವಂಚಿಸಿರುವುದು ಸಾಮಾಜಿಕ ನ್ಯಾಯದ ಕಗ್ಗೊಲೆ’ ಎಂದು ಅವರು ಟೀಕಿಸಿದ್ದಾರೆ. ‘ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಟಿಕೆಟ್ ವಂಚಿತರಾಗಿರುವ ಜಿ. ಪಲ್ಲವಿ ಅವರು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಕುಳುವ ಸಮಾಜಕ್ಕೆ ಟಿಕೆಟ್ ತಪ್ಪಿಸಿದ ಎಲ್ಲಾ ಪಕ್ಷಗಳಿಗೂ ತಕ್ಕ ಪಾಠ ಕಲಿಸುತ್ತೇವೆ. ಈ ಸಂಬಂಧ ರಾಜ್ಯ ಪ್ರವಾಸ ಕೈಗೊಂಡು ಜನಜಾಗೃತಿ ಮೂಡಿಸಲಾಗುವುದು’ ಎಂದು ತಿಳಿಸಿದ್ದಾರೆ.

ಎಲೆಕ್ಥಾನ್: ಹೊಸ ಆಲೋಚನೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಮತದಾರರ ನೋಂದಣಿ, ನಗರ ಮತ್ತು ಯುವ ಮತದಾರರನ್ನು ಮತಗಟ್ಟೆಯತ್ತ ಸೆಳೆಯಲು ಹಲವು ತಾಂತ್ರಿಕ ಆಲೋಚನಾ ವಿಧಾನಗಳು ‘ಎಲೆಕ್ಥಾನ್ 2023’ನಲ್ಲಿ ಅನಾವರಣಗೊಂಡವು.

ಎಲೆಕ್ಟ್ರಾನಿಕ್ ಸಿಟಿಯ ಇಂಟರ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿಯಲ್ಲಿ (ಐಐಐಟಿ) ನಿರಂತರ 30 ಗಂಟೆಗಳ ಕಾಲ ಈ ಎಲೆಕ್ಥಾನ್ ನಡೆಯಿತು.

‘ಎಲೆಕ್ಥಾನ್ 2023’ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಿದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು, ‘ಮತದಾರರು ಪ್ರಜಾಪ್ರಭುತ್ವದ ನಿಜವಾದ ಪ್ರಭುಗಳು’ ಎಂದು ಅಭಿಪ್ರಾಯಪಟ್ಟರು.

ಬದಲಾದ ಜಗತ್ತಿಗೆ ಅನುಗುಣವಾಗಿ ಎಲ್ಲಾ ಕ್ಷೇತ್ರದಲ್ಲೂ ತಂತ್ರಜ್ಞಾನದ ಆವಿಷ್ಕಾರಗಳ ಮೊರೆ ಹೋಗಲಾಗುತ್ತಿದೆ. ಯುವಜನರಿಂದ ಹೊಸ ಹೊಸ ಆಲೋಚನೆಗಳನ್ನು ಸಂಗ್ರಹಿಸಲು ಈ ಎಲೆಕ್ಥಾನ್ ಹಮ್ಮಿಕೊಳ್ಳಲಾಗಿದೆ ಎಂದರು.

ಒಂದು ತಿಂಗಳ ಕಾಲ ಆನ್‌ಲೈನ್‌ನಲ್ಲಿ ನಡೆದ ಈ ಹ್ಯಾಕಥಾನ್‌ನಲ್ಲಿ 2,936 ತಂಡಗಳು ಭಾಗವಹಿಸಿ 493 ಆವಿಷ್ಕಾರಗಳನ್ನು ಸಲ್ಲಿಸಿದರು. ಶನಿವಾರ ಮತ್ತು ಭಾನುವಾರ ಸೇರಿ ನಿರಂತರವಾಗಿ 30 ಗಂಟೆಗಳ ಆಫ್‌ಲೈನ್ ಹ್ಯಾಕಥಾನ್‌ನಲ್ಲಿ 40 ತಂಡಗಳು ಭಾಗವಹಿಸಿದ್ದವು ಎಂದು ವಿವರಿಸಿದರು.

ವಿಜೇತ ತಂಡಗಳಿಗೆ ಪ್ರಥಮ ಬಹುಮಾನ ₹1 ಲಕ್ಷ, ದ್ವಿತೀಯ ಬಹುಮಾನ ₹50 ಸಾವಿರ ಮತ್ತು ತೃತೀಯ ಬಹುಮಾನ ₹25 ಸಾವಿರ ವಿತರಿಸಲಾಯಿತು.

ಯುವ ಮತದಾರರ ನೋಂದಣಿ ಭಾಗದಲ್ಲಿ ಬೆಂಗಳೂರಿನ ಫ್ಯೂಚರ್ ಫೋರ್ಸ್ ತಂಡ ಪ್ರಥಮ ಬಹುಮಾನ ಪಡೆಯಿತು. ನಗರ ಮತ್ತು ಯುವ ಮತದಾರರನ್ನು ಸೆಳೆಯುವ ವಿಭಾಗದಲ್ಲಿ ಚೆನ್ನೈನ ವಸೂಲಿ ತಂಡ ಪ್ರಥಮ ಬಹುಮಾನ, ಕೊಯಮತ್ತೂರಿನ ಹ್ಯಾಕ್ ಓವರ್ ಫ್ಲೋ, ನಾಸಿಕ್‌ನ ಬ್ರೈನ್ ವೋಲ್ಟ್ ತಂಡ ದ್ವಿತೀಯ ಬಹುಮಾನ, ಬೆಂಗಳೂರಿನ ನೂಬ್ ಸ್ಮಾಷರ್ಸ್ ತಂಡ ತೃತೀಯ ಬಹುಮಾನ ಪಡೆಯಿತು. ಮತದಾನ ಪ್ರಮಾಣ ಹೆಚ್ಚಿಸುವಿಕೆ ವಿಭಾಗದಲ್ಲಿ ಚೆನ್ನೈನ ಟೆಕ್ ಮಿಲೆನಿಯಲ್ಸ್ ತಂಡ ಪ್ರಥಮ, ಪುಣೆಯ ವಿಹೈಟಿ ತಂಡ ದ್ವಿತೀಯ ಮತ್ತು ಬೆಂಗಳೂರಿನ ದಿ ಸೆಫಾಲಜಿಸ್ಟ್ ತಂಡ ತೃತೀಯ ಬಹುಮಾನ ಪಡೆಯಿತು.

ಯಲಹಂಕದಲ್ಲಿ ಮತದಾನ ಜಾಗೃತಿ

ಬೆಂಗಳೂರು: ಯಲಹಂಕ ವ್ಯಾಪ್ತಿಯ ರೈಲ್ವೆ ನಿಲ್ದಾಣ, ಆರ್.ಎಂ.ಝಡ್ ಮಾಲ್, ಪೆಟ್ರೋಲ್ ಬಂಕ್‌ಗಳಲ್ಲಿ ಬಿಬಿಎಂಪಿ ವತಿಯಿಂದ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಬಸ್ ಪ್ರಯಾಣಿಕರು, ಆಟೊ ಚಾಲಕರು, ಬೀದಿ ವ್ಯಾಪಾರಿಗಳೊಂದಿಗೆ ವಲಯ ಜಂಟಿ ಆಯುಕ್ತೆ ಪೂರ್ಣಿಮಾ ನೇತೃತ್ವದಲ್ಲಿ ಮತದಾನ ಜಾಗೃತಿ ಅಭಿಯಾನ ನಡೆಯಿತು.

ಯಲಹಂಕ ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡಿ ಮತದಾನ ದಿನದ ಬ್ಯಾನರ್ ಹಾಗೂ ಜಾಗೃತಿ ಮೂಡಿಸುವ ಭಿತ್ತಿಪತ್ರಗಳನ್ನು ಪ್ರದರ್ಶಿಸಲಾಯಿತು. ಆರ್.ಎಂ.ಝಡ್ ಮಾಲ್‌ಗೆ ಬಂದಂಥ ನಾಗರಿಕರು ಹಾಗೂ ಅಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಮತದಾನ ಮಾಡುವ ಬಗ್ಗೆ ತಿಳಿವಳಿಕೆ ನೀಡಲಾಯಿತು.



ಯಲಹಂಕದ ಮಾಲ್‌ನಲ್ಲಿ ಬಿಬಿಎಂಪಿ ವತಿಯಿಂದ ಮತದಾನ ಕುರಿತು ಜಾಗೃತಿ ಮೂಡಿಸಲಾಯಿತು

ಕೊಡಿಗೆಹಳ್ಳಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕರೊಂದಿಗೆ ಮಾನವ ಸರಪಳಿ ರಚಿಸಿ ವಿಧಾನಸಭೆ ಚುನಾವಣೆಯಲ್ಲಿ ಮತದಾನ ಮಾಡಲು ಎಲ್ಲರಲ್ಲೂ ಜಾಗೃತಿ ಮೂಡಿಸಲಾಯಿತು. ಉಪ ಆಯುಕ್ತೆ ಮಮತಾ, ಕಂದಾಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಜೆಡಿಎಸ್ ಸೇರಿದ ಸೂರ್ಯಕಾಂತ

ಬೀದರ್: ಬೀದರ್ ಕ್ಷೇತ್ರದ ಬಿಜೆಪಿ ಟಿಕೆಟ್ ಕೈತಪ್ಪಿದ ನಂತರ ಮಾಜಿ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ಪುತ್ರ ಸೂರ್ಯಕಾಂತ ನಾಗಮಾರಪಳ್ಳಿ ಬೆಂಗಳೂರಲ್ಲಿ ಭಾನುವಾರ ರಾತ್ರಿ ಜೆಡಿಎಸ್ ಸೇರಿದರು.

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೂಗುಚ್ಛ ನೀಡಿ ಪಕ್ಷಕ್ಕೆ ಬರ ಮಾಡಿಕೊಂಡರು. ಶಾಸಕ ಬಂಡೆಪ್ಪ ಕಾಶೆಂಪೂರ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಪಾಟೀಲ ಸೋಲಪುರ ಸೇರಿದಂತೆ ಪ್ರಮುಖರು ಇದ್ದರು.

ಮಂಗಳವಾರ ಬೀದರ್ ಕ್ಷೇತ್ರದಿಂದ ಜೆಡಿಎಸ್ ನಿಂದ ನಾಮಪತ್ರ ಸಲ್ಲಿಸುವ ಸಾಧ್ಯತೆ ಇದೆ.

ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಶಿರಸಿ: ಬೆಂಗಳೂರಿನ ಪುಲಿಕೇಶಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಶಿರಸಿಯಲ್ಲಿರುವ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಕಚೇರಿಗೆ ಭಾನುವಾರ ರಾತ್ರಿ 8.30ರ ಸುಮಾರಿಗೆ ಬಂದ ಅವರು ರಾಜೀನಾಮೆ ಪತ್ರ ಸಲ್ಲಿಸಿದರು. ನಂತರ ಅವರೊಂದಿಗೆ ಮಾತುಕತೆ ನಡೆಸಿದ ಕಾಗೇರಿ ಬಿಜೆಪಿಗೆ ಬರುವಂತೆ ಆಹ್ವಾನ ನೀಡಿದರು. ಇದಕ್ಕೆ ಪ್ರತಿಕಿಯಿಸಿದ ಅಖಂಡ ಶ್ರೀನಿವಾಸಮೂರ್ತಿ, ಕ್ಷೇತ್ರದ ಜನರೊಂದಿಗೆ ಚರ್ಚಿಸಿ ನಿರ್ಣಯ ತಿಳಿಸುವುದಾಗಿ ಹೇಳಿದರು.

ಈ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ನಾನು ಮನೆ ಸುಟ್ಟುಕೊಂಡರೂ ಪಕ್ಷಕ್ಕಾಗಿ ಶ್ರಮಿಸಿದ್ದೇನೆ. ಆದರೆ ಪಕ್ಷ ಬರೀ ನೋವನ್ನೇ ನೀಡುತ್ತಿದೆ. ಕಳೆದ ಚುನಾವಣೆಯಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು ಮತ ಪಡೆದು ಆಯ್ಕೆಯಾದರೂ ಕಾಂಗ್ರೆಸ್ ಬಿಡುಗಡೆ ಮಾಡಿದ ಮೂರು ಪಟ್ಟಿಯಲ್ಲಿ ನನ್ನ ಹೆಸರು ಇಲ್ಲ.ಸಾಕಷ್ಟು ನೋವು ತಿಂದಿದ್ದೇನೆ. ನನಗೆ ಟಿಕೆಟ್ ತಪ್ಪಲು ಕಾಂಗ್ರೆಸ್ ಕೆಲ ಹಿರಿಯ ನಾಯಕರೇ ಕಾರಣ. ಅವರಿಗೆ ದೇವರು ಒಳ್ಳೆಯದು ಮಾಡಲಿ. ಪಕ್ಷದ ನಡೆಯಿಂದ ಕ್ಷೇತ್ರದ ಮತದಾರರಿಗೂ ನೋವಾಗಿದೆ. ಇದನ್ನು ಪಕ್ಷದವರು ಅರ್ಥ ಮಾಡಿಕೊಳ್ಳಬೇಕು. ನನಗೆ ಅನ್ಯಾಯ ಮಾಡಬೇಡಿ’ ಎಂದು ಹೇಳಿದರು.

‘ಕ್ಷೇತ್ರದ ಜನತೆ ಹೇಳಿದಂತೆ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ’ ಎಂದು ಹೇಳಿದರು.

ನಿಮ್ಮ ಸೇವೆಯಿಂದಲೇ ನನ್ನ ಆತ್ಮಕ್ಕೆ ಶಾಂತಿ: ಜವರಾಯಿಗೌಡ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಮೂರು ಬಾರಿ ಸೋಲಿಸಿದ್ದೀರಿ. ನಾಲ್ಕನೇ ಬಾರಿಗೆ ಸೋಲಿಸಬೇಡಿ. ಒಮ್ಮೆ ವಿಧಾನಸೌಧಕ್ಕೆ ಕಳುಹಿಸಿಕೊಡಿ. ನಿಮ್ಮ ಸೇವೆ ಮಾಡಿದಾಗ ಮಾತ್ರ ನನ್ನ ಆತ್ಮಕ್ಕೆ ಶಾಂತಿ ಸಿಗುತ್ತದೆ’ ಎಂದು ಹೇಳುತ್ತಲೇ ಜೆಡಿಎಸ್ ಅಭ್ಯರ್ಥಿ ಟಿ.ಎನ್.ಜವರಾಯಿಗೌಡ ಕಣ್ಣೀರು ಹಾಕಿದರು.

ಮಾಗಡಿ ರಸ್ತೆಯ ಅಂಜನಾನಗರ ಬಳಿಯ ಬಿಇಎಲ್ ಬಡಾವಣೆಯಲ್ಲಿ ನಡೆದ ಪ್ರಚಾರದಲ್ಲಿ ಅವರು ಮಾತನಾಡಿದರು. ‘ಈ ನೆಲದ ಋಣವನ್ನು ತೀರಿಸಲು, ಅಭಿವೃದ್ಧಿ ಕಾಮಗಾರಿ ನಡೆಸಲು, ನೊಂದವರು, ಕಾರ್ಮಿಕರು, ಎಲ್ಲವರ್ಗದ ಬಡವರು, ಜನಸಾಮಾನ್ಯರ ಸೇವೆಗೆ ಅವಕಾಶ ಮಾಡಿ ಕೊಡಿ’ ಎಂದು ಮನವಿ ಮಾಡಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಮಾತನಾಡಿ, ‘ಭ್ರಷ್ಟ, ಲೂಟಿಕೋರ, ಜಾತಿವಾದಿ, ಕೋಮುವಾದಿ ಬಿಜೆಪಿಯನ್ನು ಬೇರುಸಹಿತ ಕಿತ್ತುಹಾಕುವ ಮೂಲಕ ನಾಡನ್ನು ಕಟ್ಟುವ ಪ್ರಾದೇಶಿಕ ಪಕ್ಷಕ್ಕೆ ಬೆಂಬಲ ನೀಡಿ’ ಎಂದು ಕೋರಿದರು.

ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಮಾತನಾಡಿ, ವಿಧಾನಸಭಾ ಚುನಾವಣೆ ನ್ಯಾಯಯುತವಾಗಿ ನಡೆಯುತ್ತಿಲ್ಲ, ಆಡಳಿತ ಪಕ್ಷದ ಅಣತಿಯಂತೆ ಕೆಲವು ಅಧಿಕಾರಿಗಳು ವರ್ತಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಾಲಿಕೆ ಮಾಜಿ ಸದಸ್ಯ ಎ.ಎಂ. ಹನುಮಂತೇಗೌಡ, ಬಮೂಲ್ ಮಾಜಿ ನಿರ್ದೇಶಕ ಪಂಚಲಿಂಗಯ್ಯ, ಜೆಡಿಎಸ್ ನಾಯಕರಾದ ದೊಡ್ಡಮನೆ ವೆಂಕಟೇಶ್, ಚೇತನ್‌ಗೌಡ, ಜಿ.ಪಂ ಉಪಾಧ್ಯಕ್ಷೆ ಪಾರ್ವತಿ ಚಂದ್ರಪ್ಪ, ಮಾಜಿ ಸದಸ್ಯೆ ಲತಾ ಹನುಮಂತೇಗೌಡ, ಕೇಶವಮೂರ್ತಿ, ನರಸಿಂಹಮೂರ್ತಿ, ಅರುಣ್‌ಗೌಡ ಅವರು ಇದ್ದರು.

ಬಿಎಸ್‌ಪಿ: 3ನೇ ಪಟ್ಟಿ ಬಿಡುಗಡೆ

ಬೆಂಗಳೂರು: 35 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು (ಬಿಎಸ್‌ಪಿ) ಭಾನುವಾರ ಬಿಡುಗಡೆ ಮಾಡಿದೆ.

‘ಒಟ್ಟು 137 ವಿಧಾನಸಭೆ ಕ್ಷೇತ್ರಗಳಿಗೆ ಬಿಎಸ್‌ಪಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ’ ಎಂದು ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಎಂ. ಕೃಷ್ಣಮೂರ್ತಿ ತಿಳಿಸಿದ್ದಾರೆ.

ಡಿಕೆಶಿ, ಎಚ್‌ಡಿಕೆ ನಾಮಪತ್ರ ಸಲ್ಲಿಕೆ ಇಂದು

ರಾಮನಗರ: ಜಿಲ್ಲೆಯ ಘಟಾನುಘಟಿ ನಾಯಕರು ವಿಧಾನಸಭೆ ಚುನಾವಣೆಗೆ ಸೋಮವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಕನಕಪುರ ಕ್ಷೇತ್ರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಮನಗರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ, ಚನ್ನಪಟ್ಟಣದಲ್ಲಿ ಜೆಡಿಎಸ್‌ನಿಂದ ಎಚ್.ಡಿ. ಕುಮಾರಸ್ವಾಮಿ, ಹೊಸಕೋಟೆಯಲ್ಲಿ ಎಂ.ಟಿ.ಬಿ ನಾಗರಾಜ್, ಶರತ್ ಬಚ್ಚೇಗೌಡ ನಾಮಪತ್ರ ಸಲ್ಲಿಸಲಿದ್ದಾರೆ.

ದಾಖಲೆ ಇಲ್ಲದ ₹ 1 ಕೋಟಿ ಜಪ್ತಿ: ಐಟಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಖಲೆ ಇಲ್ಲದೆ ಆಟೊದಲ್ಲಿ ಸಾಗಿಸುತ್ತಿದ್ದ ₹ 1 ಕೋಟಿ ಹಣ ಜಪ್ತಿ ಮಾಡಿದ್ದ ಪ್ರಕರಣದ ಕುರಿತು ಆದಾಯ ತೆರಿಗೆ ಇಲಾಖೆ (ಐಟಿ) ಅಧಿಕಾರಿಗಳು ತನಿಖೆ ನಡೆಸುತ್ತಿದ್ದು, ಸಂಬಂಧಪಟ್ಟ ಕೆಲವರಿಗೆ ನೋಟಿಸ್ ನೀಡಿದ್ದಾರೆ.

ಎಸ್. ಜೆ.ಪಾರ್ಕ್ ಠಾಣೆ ವ್ಯಾಪ್ತಿಯ ಕಾಳಿಂಗರಾವ್ ಬಸ್ ತಂಗುದಾಣ ಸಮೀಪ ಚೆಕ್‌ಪೋಸ್ಟ್ ಬಳಿ ಇತ್ತೀಚೆಗೆ ಕೆಟ್ಟು ನಿಂತಿದ್ದ ಆಟೊದಲ್ಲಿ ₹1 ಕೋಟಿ ಹಣ ಪತ್ತೆಯಾಗಿತ್ತು. ಆಟೊದಲ್ಲಿದ್ದ ಪ್ರವೀಣ್, ಸುರೇಶ್ ಎಂಬುವವರನ್ನು ವಶಕ್ಕೆ ಪಡೆಯಲಾಗಿತ್ತು.

‘ಹಣ ಜಪ್ತಿ ಮಾಡಿದ್ದ ಬಗ್ಗೆ ಐಟಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಅವರೇ ತನಿಖೆ ನಡೆಸುತ್ತಿದ್ದಾರೆ. ಹಣ ಸಾಗಿಸುತ್ತಿದ್ದ ವ್ಯಕ್ತಿಗಳು, ತೆರಿಗೆ ಸಲಹೆಗಾರರೆಂದು ಹೇಳಿಕೊಳ್ಳುತ್ತಿದ್ದಾರೆ. ಅವರಿಬ್ಬರಿಗೂ ಐಟಿ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ಹಣ ಯಾರಿಗೆ ಸೇರಿದ್ದು? ಅದನ್ನು ಎಲ್ಲಿಂದ? ಎಲ್ಲಿಗೆ ಸಾಗಿಸಲಾಗುತ್ತಿತ್ತು? ಎಂಬ ಬಗ್ಗೆ ಮಾಹಿತಿ ಕೋರಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹಣವೆಲ್ಲವೂ ಪಕ್ಷವೊಂದರ ಮುಖಂಡನಿಗೆ ಸೇರಿದ್ದೆಂಬ ಮಾಹಿತಿ ಇದೆ. ಅದನ್ನು ಐಟಿ ಅಧಿಕಾರಿಗಳೇ ಖಚಿತ ಪಡಿಸಬೇಕು’ ಎಂದು ತಿಳಿಸಿವೆ.

ರೌಡಿಗಳ ಮನೆ ಮೇಲೆ ದಾಳಿ

ಬೆಂಗಳೂರು: ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಅಪರಾಧ ಕೃತ್ಯ ಹತ್ತಿಕ್ಕಲು ವಿಶೇಷ ತಂಡಗಳನ್ನು ರಚಿಸಿಕೊಂಡಿರುವ ನಗರದ ಪೊಲೀಸರು, ಅಪರಾಧ ಹಿನ್ನೆಲೆಯುಳ್ಳವರು ಹಾಗೂ ರೌಡಿಗಳ ವಿರುದ್ಧ ಕಾರ್ಯಾಚರಣೆ ಆರಂಭಿಸಿದ್ದಾರೆ.

ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜನರನ್ನು ಬೆದರಿಸುತ್ತಿದ್ದ ಮಾಹಿತಿ ಬರುತ್ತಿದ್ದಂತೆ ಚಂದ್ರಾಲೇಔಟ್ ಠಾಣೆ ಪೊಲೀಸರು, ಇಬ್ಬರು ರೌಡಿಗಳ ಮನೆ ಮೇಲೆ ದಾಳಿ ಮಾಡಿದ್ದಾರೆ. ಮಾರಕಾಸ್ತ್ರಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ನಾಯಂಡಹಳ್ಳಿ ಸರ್ಕಾರಿ ಶಾಲೆ ಬಳಿಯ ನಿವಾಸಿಯಾದ ರೌಡಿ ವರ್ಷಿತ್ ಅಲಿಯಾಸ್ ಜಾನಿ ಹಾಗೂ ಸೊಲ್ಲಾಪುರದಮ್ಮ ದೇವಸ್ಥಾನ ಬಳಿ ಇರುವ ಪಿ. ಜೀವನ್‌ರಾಜ್ ಅಲಿಯಾಸ್ ಪುಟ್ಟಾಚಾರಿ ಮನೆಗಳ ಮೇಲೆ ದಾಳಿ ಮಾಡಲಾಗಿದೆ. ಕತ್ತಿ, ಲಾಂಗ್, ಮಚ್ಚು ಹಾಗೂ ಚಾಕು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸ್ಥಳೀಯ ಕೆಲ ರಾಜಕೀಯ ಮುಖಂಡರ ಜೊತೆ ಓಡಾಡುತ್ತಿದ್ದ ವರ್ಷಿತ್ ಹಾಗೂ ಜೀವನ್, ಚುನಾವಣೆ ಸಮಯದಲ್ಲಿ ಜನರನ್ನು ಬೆದರಿಸುತ್ತಿದ್ದರು. ಚುನಾವಣೆ ಅಕ್ರಮ ಎಸಗುವ ಉದ್ದೇಶವನ್ನೂ ಇಟ್ಟುಕೊಂಡಿದ್ದರು. ಈ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿಯೇ ಅವರಿಬ್ಬರ ಮನೆ ಮೇಲೆ ದಾಳಿ ಮಾಡಲಾಯಿತು’ ಎಂದರು.

ಟಿಕೆಟ್ ಕೊಡಲು ಇಷ್ಟೊಂದು ಸತಾಯಿಸುವ ಅಗತ್ಯವಿದೆಯೇ: ಜಗದೀಶ ಶೆಟ್ಟರ್ ಪ್ರಶ್ನೆ

‘ಲಿಂಗಾಯತರನ್ನು ತುಳಿಯಲಾಗುತ್ತಿದೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಶಿರಸಿ: ‘ಕೆಲವರ ಸ್ವ ಹಿತಾಸಕ್ತಿಗಾಗಿ ಬಿಜೆಪಿಯನ್ನು ಬಲಿಕೊಡುತ್ತಿದ್ದಾರೆ. ಹಿರಿಯರ ಕಡೆಗಣನೆ ಬಿಜೆಪಿಗೆ ಮುಳುವಾಗಲಿದೆ. ಲಿಂಗಾಯತರನ್ನು ಪಕ್ಷದೊಳಗೆ ವ್ಯವಸ್ಥಿತವಾಗಿ ತುಳಿಯಲಾಗುತ್ತಿದೆ’ ಎಂದು ಜಗದೀಶ ಶೆಟ್ಟರ್ ಭಾನುವಾರ ಕಿಡಿಕಾರಿದರು.

ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಶಿರಸಿಗೆ ತೆರಳುವ ಮುನ್ನ ಮತ್ತು ಅಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿ ವಾಪಸ್ಸಾದ ಬಳಿಕ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಮೂಲೆ ಸೇರಬೇಕೆ?: ‘ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಕ್ಕೆ ಮೊದಲು ಕರೆ ಮಾಡಿದ್ದ ಪಕ್ಷದ ವರಿಷ್ಠರು, ರಾಜ್ಯಸಭಾ ಸ್ಥಾನಕ್ಕೆ ಆಯ್ಕೆ ಮಾಡುವುದಾಗಿ ಹೇಳಿದ್ದರು. ಆರು ಸಲ ಶಾಸಕನಾದವನು ರಾಜ್ಯಸಭಾ ಸದಸ್ಯನಾಗಿ ಮೂಲೆಯಲ್ಲಿ ಕೂರಲು ಸಾಧ್ಯವೇ? ಒಂದು ಟಿಕೆಟ್ ಕೊಡಲು ಇಷ್ಟೊಂದು ಸತಾಯಿಸುವ ಅಗತ್ಯವಿದೆಯೇ’ ಎಂದರು.

‘ಪಕ್ಷ ನನಗೆ ಮುಖ್ಯಮಂತ್ರಿ ಹುದ್ದೆಯಂತಹ ಹಲವು ಸ್ಥಾನಮಾನಗಳನ್ನು ಕೊಟ್ಟಿದೆ. ಅದಕ್ಕೆ ನಾನು ಚಿರಋಣಿ. ಪ್ರತಿಯಾಗಿ ನಾನು ಸಹ ಪಕ್ಷವನ್ನು ತಳಮಟ್ಟದಿಂದ ಕಟ್ಟಿ ಬೆಳೆಸಿದ್ದೇನೆ. ಪಕ್ಷಕ್ಕೆ ಯಾವುದೇ ಅನ್ಯಾಯ ಮಾಡಿಲ್ಲ’ ಎಂದರು.

ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಸೆಂಟ್ರಲ್ ಕ್ಷೇತ್ರದ ಶೆಟ್ಟರ್ ಬೆಂಬಲಿಗ ಪಾಲಿಕೆ ಸದಸ್ಯರೊಂದಿಗೆ ಸಭೆ ನಡೆಸಿದ್ದರ ಕುರಿತು ಪ್ರತಿಕ್ರಿಯಿಸಿದ ಅವರು, ‘ಅವರೆಲ್ಲರೂ ನಾನು ಬೆಳೆಸಿದ ಹುಡುಗರು. ದೈಹಿಕವಾಗಿ ಅವರನ್ನು ಹಿಡಿದಿಟ್ಟುಕೊಳ್ಳಬಹುದೇ ಹೊರತು ಮಾನಸಿಕವಾಗಿ ಅಲ್ಲ. ಆ ರೀತಿ, ಎಷ್ಟು ದಿನ ಹಿಡಿದಿಟ್ಟುಕೊಳ್ಳಲು ಸಾಧ್ಯ’ ಎಂದು ಕೇಳಿದರು.

ಇದಕ್ಕೂ ಮುನ್ನ ಶಿರಸಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶೆಟ್ಟರ್, ‘ನಾನು ದೊಡ್ಡ ಹುದ್ದೆಯ ಆಕಾಂಕ್ಷಿಯಲ್ಲ. ಶಾಸಕನಾಗಿ ಕೆಲಸ ಮಾಡುವ ಅವಕಾಶ ಕೊಟ್ಟರೆ ಸಾಕಿತ್ತು. ಮೂಲ ಬಿಜೆಪಿಗರನ್ನು ಪಕ್ಷದಿಂದ ಹೊರಹಾಕಲಾಗುತ್ತಿದೆ. ಇದು ಮಾನಸಿಕವಾಗಿ ಬೇಸರ ತರಿಸಿದೆ. ನಮ್ಮ ಮನೆಯಿಂದಲೇ ನಾವು ಹೊರ ನಡೆಯುವಂತಾಗಿದೆ’ ಎಂದರು.

ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಶಿರಸಿಯಿಂದ ಹುಬ್ಬಳ್ಳಿಗೆ ವಾಪಸಾದ ಶೆಟ್ಟರ್ ಅವರಿಗೆ, ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯೂ ಆಗಿರುವ ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಅಧ್ಯಕ್ಷ ಗಿರೀಶ ಗದಿಗೆಪ್ಪಗೌಡರ ರುದ್ರಾಕ್ಷಿ ಹಾರ ಹಾಕಿ ಕಾಲಿಗೆರಗಿ ನಮಸ್ಕರಿಸಿದರು.

ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ: ಹುಬ್ಬಳ್ಳಿಯಿಂದ ಹೆಲಿಕಾಪ್ಟರ್‌ನಲ್ಲಿ ಹೊರಡಬೇಕಿದ್ದ ಶೆಟ್ಟರ್, ಕಡೆಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಿದರು. ಅವರೊಂದಿಗೆ ಹು–ಧಾ ಸೆಂಟ್ರಲ್ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ ರಜತ ಉಳ್ಳಾಗಡ್ಡಿಮಠ, ಶೆಟ್ಟರ್ ಪುತ್ರ ಸಂಕಲ್ಪ ಶೆಟ್ಟರ್, ಧಾರವಾಡ ಗ್ರಾಮೀಣ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ತವನಪ್ಪ ಅಷ್ಟಗಿ, ಕೆಪಿಸಿಸಿ ಸದಸ್ಯರಾದ ಯು.ಬಿ. ಶೆಟ್ಟಿ ಹಾಗೂ ಶಹಜಮಾನ್ ಮುಜಾಹಿದ್ ಸಹ ಬೆಂಗಳೂರಿಗೆ ಪ್ರಯಾಣಿಸಿದರು.

> **ಬಿಜೆಪಿಯು ರಾಷ್ಟ್ರ ನಿಷ್ಠ ಪಕ್ಷವೇ ಹೊರತು, ವ್ಯಕ್ತಿನಿಷ್ಠ ಪಕ್ಷವಲ್ಲ. ಹೀಗಾಗಿ ಜಗದೀಶ ಶೆಟ್ಟರ್ ಪಕ್ಷ ತೊರೆದರೆ ಯಾವುದೇ ಪರಿಣಾಮವಿಲ್ಲ**
> **ಅರವಿಂದ ಬೆಲ್ಲದ** ಬಿಜೆಪಿ ಶಾಸಕ

> **ಯಾರಿಗೇ ಅನ್ಯಾಯವಾದರೂ ಪಕ್ಷದಿಂದ ಹೊರ ಹೋಗುತ್ತಾರೆ. ಶೆಟ್ಟರ್‌ಗೆ ಟಿಕೆಟ್ ಸಿಗದಿರುವುದು ಬೇಸರ ತರಿಸಿದೆ**
> **ಪ್ರಭಾಕರ ಕೋರೆ** ರಾಜ್ಯಸಭಾ ಮಾಜಿ ಸದಸ್ಯ

ಕಾಗೇರಿ– ಶೆಟ್ಟರ್ ಒಂದು ಗಂಟೆ ಚರ್ಚೆ

ರಾಜೀನಾಮೆ ಸಲ್ಲಿಸಲು ಶಿರಸಿಗೆ ತಮ್ಮ ಕಡೆಯವರ ಜತೆ ಬಂದ ಶೆಟ್ಟರ್ ಅವರೊಂದಿಗೆ ಕಾಗೇರಿ 1 ಗಂಟೆ ಚರ್ಚೆ ನಡೆಸಿದರು. ಶೆಟ್ಟರ್ ಅವರನ್ನು ಪಕ್ಷದಲ್ಲಿ ಉಳಿಸಿಕೊಳ್ಳುವ ಕೊನೆ ಪ್ರಯತ್ನ ಎಂಬಂತೆ ಹಿರಿಯ ನಾಯಕರೊಂದಿಗೆ ಕಾಗೇರಿ ಅವರು ದೂರವಾಣಿಯಲ್ಲಿ ಮಾತನಾಡಿದರು ಎನ್ನಲಾಗಿದೆ.

ಹೊಸ ನಾಯಕತ್ವ ಬೆಳೆಸಲು ಟಿಕೆಟ್ ನಿರಾಕರಣೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಹೊಸ ಪೀಳಿಗೆಗೆ ಅವಕಾಶ ನೀಡಬೇಕು, ಪಕ್ಷದಲ್ಲಿ ಹೊಸ ನಾಯಕತ್ವ ಬೆಳೆಸಬೇಕು ಎಂಬುದು ಪಕ್ಷದ ತೀರ್ಮಾನ. ಅದೇ ಸರಣಿಯಲ್ಲಿ ಶೆಟ್ಟರ್ ಅವರಿಗೆ ಪಕ್ಷ ಟಿಕೆಟ್ ನೀಡಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಮೊದಲನೇ ಹಂತದ ನಾಯಕತ್ವ ಬೆಳೆದಿದೆ. ಎರಡನೇ ಹಂತದಲ್ಲಿ ಸಿ.ಸಿ.ಪಾಟೀಲ, ವಿ.ಸೋಮಣ್ಣ, ಮುರುಗೇಶ ನಿರಾಣಿ, ಬಸನಗೌಡ ಪಾಟೀಲ ಯತ್ನಾಳ, ಶಶಿಕಲಾ ಜೊಲ್ಲೆ, ದತ್ತಾತ್ರೇಯ ಪಾಟೀಲ ರೇವೂರ ಅವರಂಥ ನಾಯಕರಿದ್ದಾರೆ’ ಎಂದರು.

‘ಬಿಜೆಪಿಯಲ್ಲಿ ನಮ್ಮ ಸಮುದಾಯದ ಯಡಿಯೂರಪ್ಪ ಅವರ ನಾಯಕತ್ವ ಇದೆ. ಮುಂದೆ ಹಲವರಿಗೆ ಅವಕಾಶಗಳು ಇದ್ದವು. ಶೆಟ್ಟರ್ ನೇತೃತ್ವದಲ್ಲಿ ಅದನ್ನು ಮುಂದುವರಿಸಿಕೊಂಡು ಹೋಗಿದ್ದರೆ ಚೆನ್ನಾಗಿತ್ತು. ಅವರು ಆ ನಿಟ್ಟಿನಲ್ಲಿ ತೀರ್ಮಾನ ಮಾಡಲಿಲ್ಲ. ಅದರಿಂದ ಪಕ್ಷ ಸಂಘಟನೆ, ಚುನಾವಣಾ ರಣನೀತಿಯನ್ನು ಮುಂದುವರಿಸುತ್ತೇವೆ. ಪಕ್ಷವನ್ನು ಗೆಲ್ಲಿಸುತ್ತೇವೆ’ ಎಂದರು.


‘ರಾಜ್ಯ, ಜಿಲ್ಲಾ ಕೋರ್ ಕಮಿಟಿಯಲ್ಲಿ ಶೆಟ್ಟರ್ ಅವರ ಹೆಸರಿತ್ತು, ಆ ನಂತರ ಪಕ್ಷ ಈ ನಿರ್ಧಾರ ತೆಗೆದುಕೊಂಡಿದೆ. ಹೀಗಿದ್ದಾಗ ಮುಂಚಿತವಾಗಿ ಅವರಿಗೆ ಹೇಗೆ ಹೇಳಲು ಸಾಧ್ಯ’ ಎಂದರು.

‘ನಮಗೆ ಪಕ್ಷದ ಆದರ್ಶಗಳನ್ನು ಹೇಳಿಕೊಟ್ಟವರು ಶೆಟ್ಟರ್. ಅವರು ರಾಜೀನಾಮೆ ನೀಡಿದ್ದು ನೋವು ತಂದಿದೆ. ಹಲವು ಕಡೆ ಅವರ ಪ್ರಭಾವ ಇರುವುದನ್ನು ಅಲ್ಲಗಳೆಯುವುದಿಲ್ಲ. ಆದರೆ, ಪಕ್ಷ ಸಶಕ್ತವಾಗಿದೆ’ ಎಂದು ಹೇಳಿದರು.

ಗೋಪ್ಯ ಮಾತುಕತೆ

ಇಲ್ಲಿನ ಆದರ್ಶ ನಗರದಲ್ಲಿರುವ ಸಿ.ಎಂ ನಿವಾಸದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವ ಗೋವಿಂದ ಕಾರಜೋಳ, ಶಾಸಕ ರಮೇಶ ಜಾರಕಿಹೊಳಿ ಅವರು ಭಾನುವಾರ ಒಂದು ಗಂಟೆಗೂ ಹೆಚ್ಚು ಕಾಲ ಗೋಪ್ಯ ಮಾತುಕತೆ ನಡೆಸಿದರು.

ಜಗದೀಶ ಶೆಟ್ಟರ್ ಅವರ ರಾಜೀನಾಮೆಯಿಂದ ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷದ ಮೇಲಾಗುವ ಪರಿಣಾಮಗಳು, ಹು–ಧಾ ಸೆಂಟ್ರಲ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಆಯ್ಕೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.



ಶಿರಸಿಯಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಶಾಸಕ ಜಗದೀಶ ಶೆಟ್ಟರ್ ಅವರು ಭಾನುವಾರ ರಾಜೀನಾಮೆ ಪತ್ರ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಸಣ್ಣತನ ಪ್ರದರ್ಶಿಸಿದ ಶೆಟ್ಟರ್: ಖೂಬಾ



ಭಗವಂತ ಖೂಬಾ

ಬೀದರ್: ‘ಜಗದೀಶ ಶೆಟ್ಟರ್ ಅವರು ಹೊಸಬರಿಗೆ ಅವಕಾಶ ಕಲ್ಪಿಸದೇ ಪಕ್ಷದಿಂದ ಹೊರಗೆ ಹೋಗಿ ಕಾರ್ಯಕರ್ತರಿಗೆ ದ್ರೋಹ ಮಾಡಿದ್ದಾರೆ. ನಾಲ್ಕು ದಶಕಗಳ ಕಾಲ ಅಧಿಕಾರ ಅನುಭವಿಸಿ ಕೇವಲ ನಾನೇ ಶಾಸಕನಾಗಿ ಇರಬೇಕು ಎನ್ನುವ ಸಣ್ಣತನ ಪ್ರದರ್ಶಿಸಿದ್ದಾರೆ’ ಎಂದು ಕೇಂದ್ರ ಸಚಿವ ಭಗವಂತ ಖೂಬಾ ಟೀಕಿಸಿದರು.

ಭಾನುವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶೆಟ್ಟರ್ ಸ್ವಸಾಮರ್ಥ್ಯದಿಂದ ಬೆಳೆದಿಲ್ಲ. ಪಕ್ಷ ಅವರನ್ನು ಎತ್ತರಕ್ಕೆ ಬೆಳೆಸಿದೆ. ದೇಶ ಸೇವೆಗೆ ಬಂದು ಯುವಕರಿಗೆ ಅವಕಾಶ ಮಾಡಿಕೊಡಲು ಹಿಂದೇಟು ಹಾಕಿರುವುದು ಖಂಡನೀಯ’ ಎಂದು ಹೇಳಿದರು.

‘ಕಾಂಗ್ರೆಸ್ ಹಿಂದೊಮ್ಮೆ ವೀರೇಂದ್ರ ಪಾಟೀಲ ಅವರೊಂದಿಗೆ ಕೆಟ್ಟದಾಗಿ ನಡೆದುಕೊಂಡಿತ್ತು. ಜಗದೀಶ ಶೆಟ್ಟರ್ ಹಾಗೂ ಲಕ್ಷ್ಮಣ ಸವದಿ ಅದನ್ನು ಮರೆತಿದ್ದಾರೆ ಎಂದೆನಿಸುತ್ತದೆ. ಶೆಟ್ಟರ್, ಸವದಿ ಇಲ್ಲದಿದ್ದರೂ ಕಾರ್ಯಕರ್ತರು ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಲಿಂಗಾಯತರನ್ನು ಕಡೆಗಣಿಸಿದ್ದಾರೆ ಎನ್ನುವ ಆರೋಪದಲ್ಲಿ ಹುರಳಿಲ್ಲ. ಬಿಜೆಪಿ ಪಕ್ಷವು ನರೇಂದ್ರ ಮೋದಿ ಮಾರ್ಗದರ್ಶನದಲ್ಲಿ ಅಧಿಕಾರಕ್ಕೆ ಬರಲಿದೆ. ಶೆಟ್ಟರ್ ಹಾಗೂ ಸವದಿಗೆ ಕಾರ್ಯಕರ್ತರ ಶಾಪ ತಟ್ಟಲಿದೆ’ ಎಂದು ಹೇಳಿದರು.

ಶೆಟ್ಟರ್‌ಗೆ ಸಾಮರ್ಥ್ಯವಿಲ್ಲದಿದ್ದರೂ ಸಿ.ಎಂ ಮಾಡಲಾಗಿತ್ತು; ಯತ್ನಾಳ್



> **ಬಿಜೆಪಿ ಬಿಟ್ಟು ಹೋದವರಿಗೆ ಈ ಬಾರಿಯ ಚುನಾವಣೆಯಲ್ಲಿ ಠೇವಣಿ ಸಹ ಉಳಿಯುವುದಿಲ್ಲ, ಕಾಂಗ್ರೆಸ್‌ಗೆ ಹೋದವರ ಪರಿಸ್ಥಿತಿ ಏನಾಗಲಿದೆ ಕಾದು ನೋಡಿ**
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

ವಿಜಯಪುರ: ‘ಶೆಟ್ಟರ್‌ಗೆ ಸಾಮರ್ಥ್ಯ ಇಲ್ಲದಿದ್ದರೂ ಲಿಂಗಾಯತ ಕೋಟಾದಡಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ಸ್ಪೀಕರ್, ಶಾಸಕನನ್ನಾಗಿ ಮಾಡಲಾಗಿದೆ. ಹೀಗಿರುವಾಗ ಅವರಿಗೆ ಅನ್ಯಾಯ ಎಲ್ಲಿ ಆಗಿದೆ’ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಟೀಕಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಬಿಜೆಪಿಯಲ್ಲಿ ಲಿಂಗಾಯತ ನಾಯಕರನ್ನು ವ್ಯವಸ್ಥಿತವಾಗಿ ತುಳಿಯಲಾಗುತ್ತಿದೆ’ ಎಂಬ ಜಗದೀಶ ಶೆಟ್ಟರ್ ಹೇಳಿಕೆಯಲ್ಲಿ ಹುರುಳಿಲ್ಲ. ಲಿಂಗಾಯತರಿಗೆ ಬೊಮ್ಮಾಯಿ ಸರ್ಕಾರ ಶೇ 2 ರಷ್ಟು ಮೀಸಲಾತಿ ಹೆಚ್ಚಿಸಿದೆ. ಯಡಿಯೂರಪ್ಪ ಮತ್ತು ಜಗದೀಶ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡಲಾಗಿದೆ. ನಾನು ಸೇರಿದಂತೆ ಬಾಬಾಗೌಡ, ಭಗವಂತ ಖೂಬಾ, ಸುರೇಶ ಅಂಗಡಿ ಮತ್ತಿತರರನ್ನು ಕೇಂದ್ರ ಸಚಿವರನ್ನಾಗಿ ಮಾಡಲಾಗಿದೆ ಎಂದರು.

‘ಸ್ವಾರ್ಥಕ್ಕಾಗಿ ಶೆಟ್ಟರ್ ಬಿಜೆಪಿ ವಿರುದ್ಧ ಆರೋಪ ಮಾಡುತ್ತಿದ್ದಾರೆ. ದೇಶ, ಪ್ರಾಮಾಣಿಕತೆ ಬಗ್ಗೆ ಅವರಿಗೆ ಒಲವಿಲ್ಲ. ಬಿಜೆಪಿ ಬಿಟ್ಟು ಎಸ್‌ಡಿಪಿಐ ಜೊತೆ ಮೈತ್ರಿ ಮಾಡಿಕೊಂಡಿರುವ ಕಾಂಗ್ರೆಸ್‌ಗೆ ಹೋಗಿರುವ ಜಗದೀಶ ಶೆಟ್ಟರ್‌ಗೆ ಮಾನ, ಮರ್ಯಾದೆ ಇದೆಯೇ’ ಎಂದು ಕಿಡಿಕಾರಿದರು.

‘ಕಾಂಗ್ರೆಸ್ ಸೇರ್ಪಡೆಯಾಗುವ ನಿರ್ಧಾರವನ್ನು ತಕ್ಷಣ ಬಿಟ್ಟು ಬಿಜೆಪಿಗೆ ಶರಣಾಗಿ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರ ನಿರ್ಧಾರಕ್ಕೆ ಬದ್ಧರಾಗಿ. ಬಿಜೆಪಿ ವಿರುದ್ಧ ಹಗುರವಾಗಿ ಮಾತನಾಡಿದರೆ ಸೂಕ್ತ ಸಂದರ್ಭದಲ್ಲಿ ಉತ್ತರ ನೀಡುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

ಸಂಕ್ಷಿಪ್ತ ಸುದ್ದಿ

ಟಿಕೆಟ್ ಖಚಿತಪಡಿಸಿಕೊಂಡೇ ಶೆಟ್ಟರ್ ಕಾಂಗ್ರೆಸ್‌ಗೆ: ಶಾಮನೂರು

ದಾವಣಗೆರೆ: ಬಿಜೆಪಿಗೆ ರಾಜೀನಾಮೆ ನೀಡಿರುವ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಟಿಕೆಟ್ ಖಚಿತಪಡಿಸಿಕೊಂಡೇ ಕಾಂಗ್ರೆಸ್ ಸೇರಲಿದ್ದಾರೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

‘ಶೆಟ್ಟರ್ ನಮ್ಮ ಬೀಗರು. ನಾನು ಅವರೊಂದಿಗೆ ಇದುವರೆಗೂ ಮಾತನಾಡಿಲ್ಲ. ಶೆಟ್ಟರ್ ಕಾಂಗ್ರೆಸ್ ಸೇರಿದರೆ ಟಿಕೆಟ್ ನೀಡದೇ ಇರಲು ಆಗುವುದಿಲ್ಲ. ಪಕ್ಷದ ವರಿಷ್ಠರು ಈಗಾಗಲೇ ಮಾತನಾಡಿದ್ದಾರೆ’ ಎಂದು ಭಾನುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಬಿಜೆಪಿ ಇಂತಹ ಕೆಲಸ ಮಾಡಿ ಎಲ್ಲವನ್ನೂ ಕಳೆದುಕೊಳ್ಳುತ್ತದೆ. ಈ ಬಾರಿ 60 ಕ್ಷೇತ್ರಗಳನ್ನೂ ಗೆಲ್ಲುವುದಿಲ್ಲ’ ಎಂದರು.

‘ಶೆಟ್ಟರ್‌ರಂಥ ದೊಡ್ಡ ನಾಯಕರ ಅಗತ್ಯ ನಮಗಿಲ್ಲ’

ಉಜಿರೆ: ‘ಜೆಡಿಎಸ್ ಸಣ್ಣ ಪಕ್ಷ, ನಮ್ಮ ಪಕ್ಷಕ್ಕೆ ಜಗದೀಶ ಶೆಟ್ಟರ್ ಅವರಂತಹ ದೊಡ್ಡ ನಾಯಕರ ಅವಶ್ಯಕತೆಯಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದರು. ‘ಶೆಟ್ಟರ್ ಅವರ ರಾಜೀನಾಮೆ ಬಿಜೆಪಿಯ ಆಂತರಿಕ ವಿಚಾರ. ಅವರೊಬ್ಬ ಅನುಭವಿ ರಾಜಕಾರಣಿ. ಜನಸಂಘ ಇರುವಾಗಿನಿಂದಲೇ ಬಿಜೆಪಿಗಾಗಿ ಕೆಲಸ ಮಾಡಿದವರು. ಅವರಂಥವರೇ ಇಂಥ ನಿರ್ಧಾರ ಕೈಗೊಂಡಿದ್ದಾರೆ’ ಎಂದರು.

ಬಿ.ವೈ. ವಿಜಯೇಂದ್ರಗೆ ಪ್ರತಿಭಟನೆಯ ಬಿಸಿ

ಶಿಕಾರಿಪುರ: ತಾಲ್ಲೂಕಿನ ತರಲಘಟ್ಟ ತಾಂಡಾಗೆ ಭಾನುವಾರ ಚುನಾವಣಾ ಪ್ರಚಾರಕ್ಕೆ ತೆರಳಿದ್ದ ಬಿಜೆಪಿ ಅಭ್ಯರ್ಥಿ ಬಿ.ವೈ. ವಿಜಯೇಂದ್ರ ಅವರಿಗೆ ಪ್ರತಿಭಟನೆಯ ಸ್ವಾಗತ ಎದುರಾಯಿತು.

ಪ್ರಚಾರಕ್ಕೆಂದು ಗ್ರಾಮಕ್ಕೆ ಕಾರ್ಯಕರ್ತರು ಮತ್ತು ಬೆಂಬಲಿಗರೊಂದಿಗೆ ಬಂದ ವಿಜಯೇಂದ್ರ ಅವರನ್ನು ತಡೆದ ಗ್ರಾಮಸ್ಥರು, ಒಳಮೀಸಲಾತಿಯ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ತಾಳಿರುವ ನಿಲುವಿಗೆ ವಿರೋಧ ವ್ಯಕ್ತಪಡಿಸಿ, ಅವರ ಎದುರೇ ಧಿಕ್ಕಾರ ಕೂಗಿದರು.

ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರತಿರೋಧ ವ್ಯಕ್ತಪಡಿಸಿದಾಗ, ಅವರನ್ನು ಸಮಾಧಾನಪಡಿಸಲು ಮುಂದಾದ ತಾಲ್ಲೂಕು ಬಂಜಾರ ಸಮಾಜದ ಮುಖಂಡರನ್ನೂ ತರಾಟೆಗೆ ತೆಗೆದುಕೊಂಡರು. ಮುಜುಗರಕ್ಕೆ ಒಳಗಾದ ವಿಜಯೇಂದ್ರ ಕಾರು ಹತ್ತಿ ಮರಳಿದರು.

ನೀತಿ ಸಂಹಿತೆ: ಕಾಶಿಯಾತ್ರೆ ರದ್ದು

ಬೆಂಗಳೂರು: ‘ಭಾರತ ಗೌರವ ಕಾಶಿ ದರ್ಶನ’ ಯೋಜನೆಯಡಿ ಜಾರಿಯಲ್ಲಿದ್ದ ವಾರಾಣಸಿ ಮತ್ತು ಅಯೋಧ್ಯೆ ತೀರ್ಥಯಾತ್ರೆ ಕಾರ್ಯಕ್ರಮವನ್ನು ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಕಾರಣಕ್ಕೆ ರದ್ದುಗೊಳಿಸಲಾಗಿದೆ.

ಏಪ್ರಿಲ್ 14 ಮತ್ತು 28ರಂದು ಎರಡು ಬ್ಯಾಚ್ ಯಾತ್ರೆ ಪ್ರಾರಂಭವಾಗಬೇಕಿತ್ತು. ಚುನಾವಣಾ ಆಯೋಗದ ನಿರ್ದೇಶದಂತೆ ರದ್ದುಗೊಳಿಸಲಾಗಿದೆ.

ಹೆಲಿಪ್ಯಾಡ್‌ನಲ್ಲೇ ‘ಬಿ ಫಾರಂ’ ನೀಡಿದ ಕುಮಾರಸ್ವಾಮಿ

ಮೈಸೂರು: ಇಲ್ಲಿನ ಚಾಮರಾಜ ಕ್ಷೇತ್ರದ ಜೆಡಿಎಸ್ ಟಿಕೆಟ್ ಎಚ್.ಕೆ.ರಮೇಶ್ ಅವರಿಗೆ ದೊರೆತಿದೆ.

‘ಪಂಚರತ್ನ’ ಯಾತ್ರೆಯಲ್ಲಿ ಪಾಲ್ಗೊಳ್ಳಲು ಎಚ್.ಡಿ.ಕೋಟೆಯ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಭಾನುವಾರ ಬಂದಿಳಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ‘ಬಿ ಫಾರಂ’ ಅನ್ನು ರಮೇಶ್ ಅವರಿಗೆ ನೀಡಿದರು. ಇದರೊಂದಿಗೆ, ಇಲ್ಲಿ ಶಾಸಕ ಎಚ್.ಡಿ.ರೇವಣ್ಣ ಅವರ ಪತ್ನಿ ಭವಾನಿ ರೇವಣ್ಣ ಸ್ಪರ್ಧಿಸುತ್ತಾರೆ ಎಂಬ ಊಹಾಪೋಹಕ್ಕೆ ತೆರೆ ಎಳೆದರು.

ಎಸ್.ಆರ್. ಪಾಟೀಲ್‌ಗೆ ಹೈಕಮಾಂಡ್ ಬುಲಾವ್

ಬಾಗಲಕೋಟೆ: ಕಾಂಗ್ರೆಸ್ ಮುಖಂಡ ಎಸ್.ಆರ್. ಪಾಟೀಲ ಅವರನ್ನು ಬೆಂಗಳೂರಿಗೆ ಬರುವಂತೆ ಹೈಕಮಾಂಡ್ ಸೂಚಿಸಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ಬಂದು ಭೇಟಿಯಾಗುವಂತೆ ಕರೆ ಮಾಡಿ ಆಹ್ವಾನಿಸಿದ್ದಾರೆ.

ದೇವರ ಹಿಪ್ಪರಗಿ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ದೊರೆಯದ ಹಿನ್ನೆಲೆಯಲ್ಲಿ ಅಸಮಾಧಾನಗೊಂಡಿದ್ದರು. ಪಕ್ಷ ಬದಲಾವಣೆ ಮಾಡಬಹುದು ಎಂಬ ಚರ್ಚೆಯ ಹಿನ್ನೆಲೆಯಲ್ಲಿ ಮಾತುಕತೆಗೆ ಕರೆಯಲಾಗಿದೆ ಎನ್ನಲಾಗಿದೆ.

ಚಾಮರಾಜನಗರ: ನಾಗಶ್ರೀ ಬಂಡಾಯ ಶಮನ



ನಾಗಶ್ರೀ

ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಪಕ್ಷದ ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡಿದ್ದ ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್ ಅವರ ಮನವೊಲಿಸಲು ವರಿಷ್ಠರು ಯಶಸ್ವಿಯಾಗಿದ್ದಾರೆ. ಪಕ್ಷದ ಅಭ್ಯರ್ಥಿ ಸಚಿವ ಸಿ.ಸೋಮಣ್ಣ ಅವರಿಗೆ ನಾಗಶ್ರೀ ಬೆಂಬಲ ಘೋಷಿಸಿದ್ದಾರೆ.

ಬಂಡಾಯ ಅಥವಾ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವಂತೆ ಬೆಂಬಲಿಗರು, ಕಾರ್ಯಕರ್ತರು ನಾಗಶ್ರೀ ಅವರ ಮೇಲೆ ಒತ್ತಡ ಹಾಕಿದ್ದರು. ನಿರ್ಧಾರ ಕೈಗೊಳ್ಳಲು ಕಾಲಾವಕಾಶ ಬೇಕು ಎಂದೂ ಅವರು ಹೇಳಿದ್ದರು.

ಬಿಜೆಪಿಗೆ ಸಂಕಷ್ಟ ತಂದ ಶೆಟ್ಟರ್ ಪಟ್ಟು

ಒಂದನೇ ಪುಟದಿಂದ...

ಸಭೆಯಲ್ಲಿದ್ದಾಗಲೇ ದೂರವಾಣಿ ಮೂಲಕ ಅವರನ್ನು ಸಂಪರ್ಕಿಸಿರುವ ಬಿಜೆಪಿ ರಾಷ್ಟ್ರೀಯ ನಾಯಕರು, ಮನವೊಲಿಕೆಗೆ ಯತ್ನಿಸಿದರು. ಆದರೆ, ಸಂಗಣ್ಣ ಬೇಡಿಕೆಯಿಂದ ಹಿಂದೆ ಸರಿದಿಲ್ಲ.

ಅವರು ಸೋಮವಾರ ಬೆಳಿಗ್ಗೆ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆ ಇದೆ. ಸೋಮವಾರ ಬೆಳಿಗ್ಗೆ ಅವರು ದೆಹಲಿಗೆ ತೆರಳಲಿದ್ದು, ಲೋಕಸಭೆ ಅಧ್ಯಕ್ಷರ ಭೇಟಿಗೆ ಸಮಯ ನಿಗದಿಯೂ ಆಗಿದೆ. ಬಳಿಕ ಅವರು ಜೆಡಿಎಸ್ ಪಕ್ಷ ಸೇರಿ, ಚುನಾವಣಾ ಕಣಕ್ಕಿಳಿಯುವ ನಿರ್ಧಾರ ಮಾಡಿದ್ದಾರೆ. ಜೆಡಿಎಸ್ ನಾಯಕರ ಜತೆಗೂ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚನ್ನಗಿರಿ ಕ್ಷೇತ್ರದಲ್ಲಿ ಲಂಚ ಪ್ರಕರಣದಲ್ಲಿ ಬಂಧಿತರಾಗಿದ್ದ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರ ಕುಟುಂಬದ ಸದಸ್ಯರಿಗೆ ಟಿಕೆಟ್ ಕೈತಪ್ಪುವುದು ಬಹುತೇಕ ಖಚಿತವಾಗಿದೆ. ಪಕ್ಷೇತರನಾಗಿ ಕಣಕ್ಕಿಳಿಯುವುದಾಗಿ ಅವರ ಮಗ ಮಲ್ಲಿಕಾರ್ಜುನ ಘೋಷಿಸಿದ್ದಾರೆ.

ಬೀದರ್ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಸೂರ್ಯಕಾಂತ ನಾಗಮಾರಪಳ್ಳಿ ಅವರು ಭಾನುವಾರ ಜೆಡಿಎಸ್ ಸೇರಿದರು.

ಇಕ್ಕಟ್ಟಿಗೆ ಸಿಲುಕಿದ ‘ಕೈ’ ಪಡೆ

ಒಂದನೇ ಪುಟದಿಂದ...

ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಡಾ. ಶ್ರೀನಿವಾಸ್ ಕರಿಯಣ್ಣ ಅವರಿಗೆ ಟಿಕೆಟ್ ನೀಡಿರುವುದನ್ನು ವಿರೋಧಿಸಿರುವ ಉದ್ಯಮಿ ವಿ.ನಾರಾಯಣ ಸ್ವಾಮಿ, ಪಕ್ಷೇತರನಾಗಿ ಕಣಕ್ಕಿಳಿಯುವುದಾಗಿ ಘೋಷಿಸಿದ್ದಾರೆ. ಶಿಕಾರಿಪುರದಲ್ಲಿ ಗೋಣಿ ಮಾಲತೇಶ್ ಕಣಕ್ಕಿಳಿಸುವುದರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ವಿಧಾನ ಪರಿಷತ್ ಮಾಜಿ ಸದಸ್ಯ ಶಾಂತವೀರಪ್ಪಗೌಡ ಅವರ ಸಹೋದರನ ಮಗ ನಾಗರಾಜ ಗೌಡ, ಪಕ್ಷೇತರನಾಗಿ ಸ್ಪರ್ಧಿಸುವುದಾಗಿ ಪ್ರಕಟಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ತೇರದಾಳ ಕ್ಷೇತ್ರದಲ್ಲಿ ಮಾಜಿ ಸಚಿವೆ ಉಮಾಶ್ರೀ ಅವರಿಗೆ ಟಿಕೆಟ್ ನಿರಾಕರಿಸಿರುವುದರ ವಿರುದ್ಧ ಅವರ ಬೆಂಬಲಿಗರು ಸಿಟ್ಟಿಗೆದ್ದಿದ್ದಾರೆ. ಪದಾಧಿಕಾರಿಗಳ ಹುದ್ದೆಗೆ ಸಾಮೂಹಿಕ ರಾಜೀನಾಮೆ ನೀಡುವ ಬೆದರಿಕೆ ಒಡ್ಡಿದ್ದಾರೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ತೇಜಸ್ವಿ ಪಟೇಲ್, ಭಾನುವಾರ ಜೆಡಿಎಸ್ ಸೇರಿದರು. ಜೆಡಿಎಸ್‌ನಿಂದಲೇ ಕಣಕ್ಕಿಳಿಯುವುದಾಗಿ ಪ್ರಕಟಿಸಿದರು.

‘ಆ ಇಬ್ಬರ ಕ್ಷೇತ್ರದಲ್ಲೂ ಬಿಜೆಪಿ ಗೆಲ್ಲಿಸುತ್ತೇನೆ’

ಯಾವ ಸ್ಥಾನ ಸಿಗದಿದ್ದರೂ ಪಕ್ಷಕ್ಕೆ ಶ್ರಮಿಸಬೇಕಿದೆ: ಶೆಟ್ಟರ್– ಸವದಿ ವಿರುದ್ಧ ಬಿಎಸ್‌ವೈ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಈ ಇಬ್ಬರ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ ಜನರಿಗೆ ಸತ್ಯ ಸಂಗತಿ ಮನವರಿಕೆ ಮಾಡುತ್ತೇನೆ. ಪಕ್ಷವನ್ನು ಗೆಲ್ಲಿಸುತ್ತೇನೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಈ ಇಬ್ಬರ ವಿರುದ್ಧವೂ ಹರಿಹಾಯ್ದರು. ಕೇಂದ್ರದಲ್ಲಿ ಸಚಿವ ಸ್ಥಾನ ಅಥವಾ ಉನ್ನತ ಹುದ್ದೆ ನೀಡುತ್ತೇವೆ ಎಂದು ವರಿಷ್ಠರು ಹೇಳಿದ್ದರೂ ಶೆಟ್ಟರ್ ಕೇಳಿಲ್ಲ’ ಎಂದು ದೂರಿದರು.

‘ಶೆಟ್ಟರ್ ಅವರಿಗೆ ಪಕ್ಷ ಎಲ್ಲ ಸ್ಥಾನ ನೀಡಿತ್ತು. ಬಿ.ಬಿ.ಶಿವಪ್ಪ ಅವರನ್ನೂ ಎದುರು ಹಾಕಿಕೊಂಡು ವಿರೋಧಪಕ್ಷದ ನಾಯಕರಾಗಿ ಮಾಡಲಾಯಿತು. ನಾನು, ಅನಂತಕುಮಾರ್ ಅವರು ಶೆಟ್ಟರ್ ಪರವಾಗಿ ನಿಂತು ಅವರನ್ನು ಮುಖ್ಯಮಂತ್ರಿ ಮಾಡಿದ್ದೆವು’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶಕ್ತಿ ತುಂಬುವುದು ನಮ್ಮ ಜವಾಬ್ದಾರಿ. ವಿಶ್ವದಲ್ಲಿ ಭಾರತಕ್ಕೆ ಗೌರವ ಸ್ಥಾನ ನೀಡಿದ್ದಾರೆ. ಈ ಸಂದರ್ಭದಲ್ಲಿ ಶೆಟ್ಟರ್ ನಮ್ಮ ವಿಚಾರಧಾರೆಗೆ ತದ್ವಿರುದ್ಧವಾಗಿ ನಿರ್ಧಾರ ತೆಗೆದುಕೊಂಡಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಯಾವುದೇ ಸ್ಥಾನ ಸಿಗದಿದ್ದರೂ ದೇಶಕ್ಕಾಗಿ, ಪಕ್ಷಕ್ಕಾಗಿ ಶ್ರಮಿಸಬೇಕಿದೆ. ವ್ಯಕ್ತಿ ಎಷ್ಟೇ ದೊಡ್ಡವನಾದರೂ ಪಕ್ಷದ ಬೆಂಬಲವಿಲ್ಲದೇ ಎತ್ತರಕ್ಕೇರಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಪದವಿ ಅಲಂಕರಿಸಲು ಸಾಧ್ಯವಿಲ್ಲ’ ಎಂದರು.

‘ಲಕ್ಷ್ಮಣ ಸವದಿ ಅವರನ್ನು ಶಾಸಕ, ಸಚಿವರನ್ನಾಗಿ ಮಾಡಲಾಗಿತ್ತು. ಚುನಾವಣೆಯಲ್ಲಿ ಸೋತಿದ್ದರೂ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿ ಉಪಮುಖ್ಯಮಂತ್ರಿ ಮಾಡಲಾಗಿತ್ತು. ಪಕ್ಷದಲ್ಲಿ ಇದ್ದರೆ ಉತ್ತಮ ಅವಕಾಶಗಳು ಸಿಗುತ್ತಿತ್ತು. ಸವದಿಗೆ ಪಕ್ಷದಿಂದ ಅನ್ಯಾಯ ಆಗಿಲ್ಲ. ಕಾಂಗ್ರೆಸ್ ಸೇರಿ ನಂಬಿಕೆ ಮತ್ತು ವಿಶ್ವಾಸಕ್ಕೆ ದ್ರೋಹ ಮಾಡಿದ್ದಾರೆ’ ಎಂದು ಯಡಿಯೂರಪ್ಪ ಅವರು ಹರಿಹಾಯ್ದರು.

ರಾಜ್ಯ ಚುನಾವಣಾ ಉಸ್ತುವಾರಿ ಹಾಗೂ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಇದ್ದರು.

‘ಕೆಜೆಪಿ ಕಟ್ಟಿದ್ದು ಅಕ್ಷಮ್ಯ’

ಬೆಂಗಳೂರು: ‘ಬಿಜೆಪಿ ಬಿಟ್ಟು ಕೆಜೆಪಿ ಕಟ್ಟಿದ್ದು ನನ್ನ ಬದುಕಿನಲ್ಲಿ ಮಾಡಿದ ಅಕ್ಷಮ್ಯ ಅಪರಾಧ. ಈ ಕುರಿತು ನಾನು ಹಿಂದೆ ಜನರಲ್ಲಿ ಕ್ಷಮೆ ಕೇಳಿದ್ದೇನೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

‘ಯಡಿಯೂರಪ್ಪ ಬಿಜೆಪಿ ಬಿಟ್ಟು ಕೆಜೆಪಿ ಕಟ್ಟಲಿಲ್ಲವೇ’ ಎಂದು ಜಗದೀಶ ಶೆಟ್ಟರ್ ಅವರು ಪ್ರಶ್ನಿಸಿರುವ ಬೆನ್ನಲ್ಲೇ ಬಿಎಸ್‌ವೈ ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ. ‘ಬಿಜೆಪಿ ಬಿಟ್ಟಿರುವ ಶೆಟ್ಟರ್ ಅವರನ್ನು ಜನ ಕ್ಷಮಿಸುವುದಿಲ್ಲ. ಅವರ ಜತೆ ಎರಡು ಮೂರು ಬಾರಿ ಮಾತನಾಡಿದ್ದೆ. ಯಾರೇ ಪಕ್ಷ ಬಿಟ್ಟರೂ ನಮಗೆ ಸಮಸ್ಯೆ ಆಗುವುದಿಲ್ಲ. ರಾಜ್ಯಾದ್ಯಂತ ಪ್ರವಾಸ ಮಾಡಿ ಇವರ ಬಣ್ಣ ಬಯಲು ಮಾಡುತ್ತೇನೆ’ ಎಂದು ಕಿಡಿ ಕಾರಿದರು.

‘ನಾನು ಸ್ವಇಚ್ಛೆಯಿಂದ ಚುನಾವಣಾ ರಾಜಕೀಯ ನಿವೃತ್ತಿ ಘೋಷಿಸಿದ್ದೇನೆ. ಈಶ್ವರಪ್ಪ, ಅಂಗಾರ, ರಘುಪತಿ ಭಟ್ ಪಕ್ಷದ ತೀರ್ಮಾನ ಗೌರವಿಸಿದ್ದಾರೆ. ಶೆಟ್ಟರ್, ತಮ್ಮ ತಪ್ಪಿನ ಅರಿವಾಗಿ ಪಕ್ಷಕ್ಕೆ ಬರುವುದಾದರೆ, ವಾಪಸು ಸೇರಿಸಿಕೊಳ್ಳಲಾಗುವುದು’ ಎಂದೂ ಹೇಳಿದರು.

ನನ್ನ, ಶೆಟ್ಟರ್ ಬಗ್ಗೆ ಮಾತನಾಡುವ ನೈತಿಕತೆ ಯಡಿಯೂರಪ್ಪಗೆ ಇಲ್ಲ: ಲಕ್ಷ್ಮಣ ಸವದಿ

ಅಥಣಿ (ಬೆಳಗಾವಿ ಜಿಲ್ಲೆ): ‘ಲಕ್ಷ್ಮಣ ಸವದಿ ಹಾಗೂ ಜಗದೀಶ ಶೆಟ್ಟರ್ ಬಗ್ಗೆ ಮಾತನಾಡುವ ನೈತಿಕತೆ ಯಡಿಯೂರಪ್ಪ ಅವರಿಗೆ ಇಲ್ಲ. ಬಿಜೆಪಿ ಮುಳುಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ’ ಎಂದು ಅಥಣಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಸವದಿ ತಿರುಗೇಟು ನೀಡಿದರು.

ಪಟ್ಟಣದಲ್ಲಿ ಭಾನುವಾರ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿಯೂ ಪಕ್ಷವನ್ನು ಬಿಟ್ಟು ಹೋದವರು. ನಮ್ಮ ಬಗ್ಗೆ ಟೀಕಿಸುವ ಮುನ್ನ ತಮ್ಮ ಹಿಂದಿನ ವಿಚಾರಗಳನ್ನು ಸ್ವಲ್ಪ ವಿಚಾರ ಮಾಡಿ ಮಾತನಾಡಬೇಕು, ಅಷ್ಟಕ್ಕೂ ಅವರ ಬಗ್ಗೆ ಹೆಚ್ಚು ಮಾತನಾಡಿ ಪ್ರಯೋಜನವಿಲ್ಲ’ ಎಂದು ಟೀಕಿಸಿದರು.

‘ನನ್ನ ನೇತೃತ್ವದಲ್ಲಿ 15 ರಿಂದ 20 ಸ್ಥಾನ ಗೆಲ್ಲಿಸಬೇಕು ಎಂದು ಕಾಂಗ್ರೆಸ್ ನಾಯಕರು ನನಗೆ ಜವಾಬ್ದಾರಿ ನೀಡಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪೂರಕ ವಾತಾವರಣವಿದೆ. 125ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಟಿಕೆಟ್ ವಂಚಿತ ಗಜಾನನ ಮಂಗಸೂಳಿ ಮಾತನಾಡಿ, ‘ಲಕ್ಷ್ಮಣ ಸವದಿ ಮೂಲ ಕಾಂಗ್ರೆಸ್ಸಿಗರನ್ನು ಬಿಟ್ಟು ಮತ್ತೊಂದು ಬಣ ಮಾಡಬಹುದೆಂಬ ಅಳುಕಿತ್ತು. ಆದರೆ, ಎಲ್ಲರೂ ಜತೆಯಾಗಿ ಹೋಗೋಣ ಎಂದು ಅವರು ಹೇಳಿದ್ದಾರೆ. ಹೀಗಾಗಿ, ಬಂಡಾಯದ ಮಾತೇ ಇಲ್ಲ’ ಎಂದರು.



ಕೋಲಾರದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ‘ಜೈ ಭಾರತ್’ ಸಮಾವೇಶದಲ್ಲಿ ಭಾಗವಹಿಸಿದ್ದ ಜನ – ಪ್ರಜಾವಾಣಿ ಚಿತ್ರ

ಜಾತಿಗಣತಿ ವರದಿ ಪ್ರಕಟಿಸಿ: ರಾಹುಲ್ ಸವಾಲು

ಒಂದನೇ ಪುಟದಿಂದ...

‘ನಾನು ಪ್ರಶ್ನೆ ಮಾಡಿದಾಗಲೆಲ್ಲಾ ಒಬಿಸಿ ವಿಚಾರ ಮುಂದಿಟ್ಟುಕೊಂಡು ತಮ್ಮನ್ನು ಅವಮಾನಿಸಲಾಗುತ್ತಿದೆ ಎಂದೆಲ್ಲಾ ಆಪಾದನೆ ಮಾಡುತ್ತಾರೆ. ಹೀಗಾಗಿ, ಸಮಾವೇಶದಲ್ಲಿ ನಾನು ಓಬಿಸಿ ವಿಚಾರದ ಬಗ್ಗೆಯೇ ಮಾತನಾಡುತ್ತಿದ್ದೇನೆ. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಒಬಿಸಿ, ದಲಿತ ಸಮುದಾಯದ ಅಧಿಕಾರಿಗಳ ಪ್ರಮಾಣ ಶೇ 7ರಷ್ಟು ಮಾತ್ರ. ಹಿಂದುಳಿದವರು, ಆದಿವಾಸಿ, ದಲಿತರು ಎಷ್ಟು ಮಂದಿ ಇದ್ದಾರೆ. ಅವರಿಗೆ ಎಷ್ಟು ಮೀಸಲಾತಿ ನೀಡಿದ್ದೀರಿ’ ಎಂದು ಪ್ರಶ್ನಿಸಿದರು.

‘ಎಲ್ಲ ಕಳ್ಳರಿಗೂ ಮೋದಿ ಉಪನಾಮ ಏಕಿದೆ’ ಎಂದು 2019ರ ಲೋಕಸಭೆ ಚುನಾವಣೆ ವೇಳೆ ಇಲ್ಲಿಯೇ ಪ್ರಶ್ನಿಸಿದ್ದರು. ಹಿಂದುಳಿದ ವರ್ಗದವರಿಗೆ ಅವಮಾನ ಮಾಡಲಾಗಿದೆ ಎಂದು ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಾಗಿತ್ತು. ಈ ಪ್ರಕರಣದಲ್ಲಿ ಎರಡು ವರ್ಷ ಜೈಲು ಶಿಕ್ಷೆ, ಆದ ನಂತರ ಸಂಸತ್ ಸ್ಥಾನದಿಂದ ಅನರ್ಹಗೊಳಿಸಲಾಗಿದೆ.

ಸರ್ಕಾರದ ವಿರುದ್ಧ ವಾಗ್ದಾಳಿ: ರಾಜ್ಯ ಬಿಜೆಪಿ ಸರ್ಕಾರದ ಮೇಲಿನ ಶೇ 40ರಷ್ಟು ಕಮಿಷನ್ ಆರೋಪ ಪ್ರಸ್ತಾಪಿಸಿ, ಕರ್ನಾಟಕ ಸರ್ಕಾರದ ವಿರುದ್ಧ ರಾಹುಲ್ ವಾಗ್ದಾಳಿ ನಡೆಸಿದರು.

ನರೇಂದ್ರ ಮೋದಿ ಹಾಗೂ ಉದ್ಯಮಿ ಗೌತಮ್ ಅದಾನಿ ವಿರುದ್ಧ, ಜೈಲು ಶಿಕ್ಷೆ ಹಾಗೂ ಸಂಸತ್ ಸದಸ್ಯತ್ವ ಅನರ್ಹತೆಗೆ ಕಾರಣವಾದ ನೆಲದಲ್ಲಿ ಮತ್ತೆ ವಾಗ್ದಾಳಿ ನಡೆಸಿದರು. 30 ನಿಮಿಷದ ಭಾಷಣದುದ್ದಕ್ಕೂ ಮೋದಿ ಅವರನ್ನು ಪದೇಪದೇ ಪ್ರಶ್ನಿಸುತ್ತಲೇ ಸಾಗಿದರು.

‘ನೀವು ಜೈಲಿಗೆ ಹಾಕಿ, ಸಂಸತ್ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಿ, ಸಂಸತ್‌ನಲ್ಲಿ ಪ್ರಶ್ನೆ ಕೇಳುವಾಗ ಮೈಕ್ ಬಂದ್ ಮಾಡಿ ಅವಮಾನಿಸಿ, ಮನೆ ಖಾಲಿ ಮಾಡಿಸಿ. ಏನೇ ಮಾಡಿದರೂ ನನ್ನ ಹೋರಾಟ ನಿಲ್ಲುವುದಿಲ್ಲ’ ಎಂದು ಅವರು ಹೇಳಿದರು.

ಪ್ರಶ್ನೆ ಕೇಳಿದರೆ ಮೈಕ್ ಸ್ತಬ್ಧ: ‘ಅದಾನಿ ಹೆಸರಿನಲ್ಲಿ ಬೇನಾಮಿ, ನಕಲಿ ಕಂಪನಿಗಳು ಎಷ್ಟಿವೆ? ಅವರ ಹೆಸರಿನಲ್ಲಿರುವ ₹20 ಸಾವಿರ ಕೋಟಿ ಯಾರದ್ದು ಎಂದು ಕೇಳಿದ್ದಕ್ಕೆ ಲೋಕಸಭೆಯಲ್ಲಿ ನನಗೆ ಮಾತನಾಡಲು ಅವಕಾಶ ನೀಡದೆ ಮೈಕ್ ಸ್ತಬ್ಧಗೊಳಿಸಿದರು. ಸ್ಪೀಕರ್‌ಗೆ ದೂರು ನೀಡಿದರೆ ಅವರು ನಗುತ್ತಾ ಚಹಾ ಕುಡಿಯಲು ಆಹ್ವಾನಿಸಿದರು. ಇತಿಹಾಸದಲ್ಲಿ ಮೊದಲ ಬಾರಿ ಆಡಳಿತ ಪಕ್ಷದವರೇ ಸಂಸತ್ ಕಲಾಪ ನಡೆಸಲು ಬಿಡಲಿಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ಅದಾನಿ ಕಂಪನಿಗಳಲ್ಲಿ ಚೀನಾದ ನಿರ್ದೇಶಕರನ್ನು ನೇಮಿಸಲಾಗಿದೆ. ಏಕೆ ಎಂದು ನಾನು ಪ್ರಶ್ನಿಸಿದರೆ ಅದಕ್ಕೂ ಅವರ ಬಳಿ ಉತ್ತರವಿಲ್ಲ. ಇಸ್ರೇಲ್, ಶ್ರೀಲಂಕಾ, ಬಾಂಗ್ಲಾದೇಶದಲ್ಲಿ ಪ್ರಧಾನಿ ಭೇಟಿ ನೀಡಿದಾಗಲೆಲ್ಲಾ ಅದಾನಿ ಅವರಿಗೆ ಯೋಜನೆಗಳಲ್ಲಿ ಗುತ್ತಿಗೆ ಸಿಗುತ್ತದೆ’ ಎಂದರು.

ಸಮಾವೇಶದಲ್ಲಿ 70 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಜನರು ಸೇರಿದ್ದರು. ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ರಾಹುಲ್ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದರು.

ಸಿದ್ದರಾಮಯ್ಯ ಪರ ಘೋಷಣೆ: ‘ಸಿದ್ದರಾಮಯ್ಯ ಅವರಿಗೆ ಕೋಲಾರ ಕ್ಷೇತ್ರದ ಟಿಕೆಟ್ ನೀಡಬೇಕು, ಕೋಲಾರಕ್ಕೆ ಸಿದ್ದರಾಮಯ್ಯ ಬೇಕೇ ಬೇಕು’ ಎಂದು ಅವರ ಬೆಂಬಲಿಗರು ಹಾಗೂ ಕಾರ್ಯಕರ್ತರು ಸಮಾವೇಶದಲ್ಲಿ ಘೋಷಣೆ ಕೂಗಿದರು. ಎಡಗೈಗೆ ಬ್ಯಾಂಡೇಜ್ ಕಟ್ಟಿಕೊಂಡು ಬಂದಿದ್ದ ಸಿದ್ದರಾಮಯ್ಯ, ‘ಏ ಸುಮ್ಮನಿರಿ’ ಎಂದು ಗದರಿಸಿದರು.

‘ಕೈ’ ನಾಲ್ವರು ಶಾಸಕರಿಗೆ ಟಿಕೆಟ್ ಇಲ್ಲ?

ಬೆಂಗಳೂರು: ಮೂರನೇ ಪಟ್ಟಿಯಲ್ಲೂ ಟಿಕೆಟ್ ಸಿಗದ ನಾಲ್ವರು ಕಾಂಗ್ರೆಸ್ ಶಾಸಕರು ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಚಿಂತೆಗೀಡಾಗಿದ್ದಾರೆ. ಈ ನಾಲ್ವರಿಗೂ ಟಿಕೆಟ್ ಸಿಗುವುದು ಅನುಮಾನ ಎಂದೂ ಹೇಳಲಾಗುತ್ತಿದೆ.

ಹರಿಹರ ಶಾಸಕ ಎಸ್. ರಾಮಪ್ಪ, ಪುಲಕೇಶಿನಗರ ಶಾಸಕ ಅಖಂಡ ಶ್ರೀನಿವಾಸಮೂರ್ತಿ, ಶಿಡ್ಲಘಟ್ಟ ಶಾಸಕ ವಿ. ಮುನಿಯಪ್ಪ ಮತ್ತು ಲಿಂಗಸುಗೂರು ಶಾಸಕ ಡಿ.ಎಸ್. ಹೂಲಗೇರಿ ಟಿಕೆಟ್ ಸಿಗದೇ ಇಕ್ಕಟ್ಟಿಗೆ ಸಿಲುಕಿದ್ದಾರೆ.

ಭಾನುವಾರ ಶಿರಸಿಗೆ ತೆರಳಿದ ಅಖಂಡ ಶ್ರೀನಿವಾಸಮೂರ್ತಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿ, ‘ನಾನು ಮನೆ ಸುಟ್ಟುಕೊಂಡರೂ ಪಕ್ಷಕ್ಕಾಗಿ ಶ್ರಮಿಸಿದ್ದೇನೆ. ಆದರೆ ಪಕ್ಷದಿಂದ ನೋವಿನ ಹೊರತು ಮತ್ತೇನೂ ಕೊಡುತ್ತಿಲ್ಲ’ ಎಂದರು.

‘ಸಾಕಷ್ಟು ನೋವು ತಿಂದಿದ್ದೇನೆ. ನನಗೆ ಟಿಕೆಟ್ ತಪ್ಪಲು ಕಾಂಗ್ರೆಸ್ ಹಿರಿಯ ನಾಯಕರ ಕೈವಾಡ ಅಡಗಿದೆ. ಕ್ಷೇತ್ರದ ಜನತೆ ಹೇಳಿದಂತೆ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ’ ಎಂದೂ ಹೇಳಿದರು.

‘ಅಖಂಡ ಶ್ರೀನಿವಾಸಮೂರ್ತಿ ಅವರು ಜೆಡಿಎಸ್ ಅಥವಾ ಬಿಜೆಪಿಯಿಂದ ಕಣಕ್ಕಿಳಿಯುವ ಚಿಂತನೆಯಲ್ಲಿದ್ದಾರೆ’ ಎಂದು ಅವರ ಮೂಲಗಳು ತಿಳಿಸಿವೆ.

‘ನನಗೆ ಟಿಕೆಟ್ ಕೊಡುವುದಾಗಿ ಹೈಕಮಾಂಡ್ ಹೇಳಿದೆ. ಟಿಕೆಟ್ ಬಗ್ಗೆ ಅನುಮಾನ ಇಲ್ಲ’ ಎಂದು ಎಸ್.ರಾಮಪ್ಪ ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ, ಅವರ ಹೆಸರು ಇಲ್ಲದಿರುವುದು ಅವರಿಗೆ ತೀವ್ರ ಆತಂಕ ಉಂಟು ಮಾಡಿದೆ.

ಲಿಂಗಸುಗೂರು ಮೀಸಲು (ಪರಿಶಿಷ್ಟ ಜಾತಿ) ಕ್ಷೇತ್ರದ ಶಾಸಕ ಹೂಲಗೇರಿ ಅವರಿಗೆ ಈ ಬಾರಿ ಟಿಕೆಟ್ ಇಲ್ಲ. ಹೈಕಮಾಂಡ್ ಪರ್ಯಾಯ ಅಭ್ಯರ್ಥಿ ಗುರುತಿಸಿದೆ ಎಂಬ ಮಾತು ಕೇಳಿಬರುತ್ತಿದೆ. ಟಿಕೆಟ್ ಘೋಷಣೆ ಆಗದಿರುವುದು ಹೂಲಗೇರಿ ಅವರಿಗೆ ನಿರಾಸೆ ಮೂಡಿದೆ.

ಈ ಬಾರಿ ಪಕ್ಷ ಅಧಿಕಾರಕ್ಕೆ- ರಾಹುಲ್

ಬೆಂಗಳೂರು: ‘ರಾಜ್ಯದಲ್ಲಿ ಕಾಂಗ್ರೆಸ್ ಪರ ಇರುವ ಅಲೆ ನೋಡಿದರೆ, ಈ ಬಾರಿ ಪಕ್ಷ ಅಧಿಕಾರಕ್ಕೆ ಬರುವುದು ಖಚಿತ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವಿಶ್ವಾಸ ವ್ಯಕ್ತಪಡಿಸಿದರು.

ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿ ಹಿಂಭಾಗದಲ್ಲಿ ನಿರ್ಮಿಸಿದ ಕೆಪಿಸಿಸಿ ನೂತನ ಕಟ್ಟಡ ‘ಇಂದಿರಾ ಗಾಂಧಿ ಭವನ’ ಮತ್ತು ‘ಭಾರತ್ ಜೋಡೊ ಸಭಾಂಗಣ’ವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಪಕ್ಷವನ್ನು ಅಧಿಕಾರಕ್ಕೆ ತರಲು ನಾನು ಎಲ್ಲ ರೀತಿಯ ಸಹಕಾರ ನೀಡುತ್ತೇನೆ. ಪ್ರಚಾರಕ್ಕೆ ಯಾವಾಗ ಕರೆದರೂ ನಾನು ಬರುತ್ತೇನೆ. ನಾವು 150 ಸ್ಥಾನಗಳನ್ನು ಗಳಿಸಬೇಕಿದೆ’ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ‘ಈ ನೂತನ ಕಟ್ಟಡದ ಸಭಾಂಗಣವನ್ನು ಭಾರತ್ ಜೋಡೊ ಯಾತ್ರೆಗೆ ಅರ್ಪಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಐದು ಎಕರೆ ಜಾಗದಲ್ಲಿ ಭಾರತ್ ಜೋಡೊ ತರಬೇತಿ ಕೇಂದ್ರ ಮಾಡುತ್ತೇವೆ. ಕಾರ್ಯಕರ್ತರಿಗೆ ಈ ಕೇಂದ್ರದಲ್ಲಿಯೇ ತರಬೇತಿ ನೀಡಲಾಗುವುದು’ ಎಂದರು.

ಉತ್ತರ ಪ್ರದೇಶದಾದ್ಯಂತ ಕಟ್ಟೆಚ್ಚರ • ಪ್ರಯಾಗ್‌ರಾಜ್ ಜಿಲ್ಲೆಯಲ್ಲಿ ಇಂಟರ್‌ನೆಟ್ ಸೇವೆ ಸ್ಥಗಿತ

ಡಾನ್ ಆಗಲು ಹವಣಿಸಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ


ಅರುಣ್ ಮೌರ್ಯ


ಸನ್ನಿ


ಲವ್ಲೇಶ್ ತಿವಾರಿ

ಲಖನೌ: ಪ್ರಯಾಗ್‌ರಾಜ್‌ನಲ್ಲಿ ಪಾತಕಿ ಅತೀಕ್ ಅಹ್ಮದ್ ಮತ್ತು ಅಶ್ರಫ್ ಅಹ್ಮದ್ ಅವರನ್ನು ಕೊಂದು ಭೂಗತ ಜಗತ್ತಿನಲ್ಲಿ ಬಹು ಬೇಗ ಪ್ರಖ್ಯಾತಿಗಳಿಸಲು ಆರೋಪಿಗಳು ಸಂಚು ರೂಪಿಸಿದ್ದ ಸಂಗತಿ ಪೊಲೀಸರ ವಿಚಾರಣೆ ವೇಳೆ ಬಯಲಾಗಿದೆ.

'ಎಷ್ಟು ದಿನ ಗಳವರೆಗೆ ನಾವು ಸಣ್ಣಪುಟ್ಟ ಕೃತ್ಯಗಳನ್ನೇ ಎಸಗಬೇಕು. ದೊಡ್ಡಮಟ್ಟದ ಕೃತ್ಯ ಎಸಗಿ ಭೂಗತ ಜಗತ್ತಿನ ದೊರೆಗಳಾಗಬೇಕೆಂದು ನಿರ್ಧರಿಸಿದ್ದೆವು' ಎಂದು ಆರೋಪಿಗಳು ಹೇಳಿದ್ದಾರೆ.

ಬಾಂಡಾ ಪ್ರದೇಶದ ಲವ್ಲೇಶ್ ತಿವಾರಿ ಕುಟುಂಬದವರು ಸಭ್ಯಸ್ಥರು. ಮಾದಕ ವ್ಯಸನಿಯಾದ ಆತನ ವರ್ತನೆಯನ್ನು ಅವರು ಸಹಿಸುತ್ತಿರಲಿಲ್ಲ. ಇದರಿಂದ ಕುಟುಂಬದಿಂದ ಆತ ದೂರ ಉಳಿದಿದ್ದ. ಆತನ ಇಬ್ಬರು ಸಹೋದರರು ಪೌರೋಹಿತ್ಯ ವೃತ್ತಿ ಮಾಡುತ್ತಿದ್ದು ಮತ್ತೊಬ್ಬ ಸಹೋದರ ಓದುತ್ತಿದ್ದಾನೆ. ಅಪರಾಧ ಎಸಗಿ ಹಲವು ಬಾರಿ ಜೈಲಿಗೆ ಹೋಗಿ ಬಂದಿರುವ ಹಿನ್ನೆಲೆ ತಿವಾರಿಗೆ ಇದೆ ಎಂದು ನೆರೆಹೊರೆಯವರು ತಿಳಿಸಿದ್ದಾರೆ.

ಹಮೀರ್‌ಪುರದ ಸನ್ನಿ ತನ್ನ ಪ್ರದೇಶದಲ್ಲಿ ನಡೆದ ಗಲಾಟೆ ಪ್ರಕರಣದಲ್ಲಿ ಜೈಲು ಸೇರಿದ್ದ. ಹಮೀರ್‌ಪುರದ ಜೈಲಿನಲ್ಲಿ ಗ್ಯಾಂಗ್‌ಸ್ಟರ್ ಸುಂದರ್ ಭಾಟಿಯನ್ನು ಭೇಟಿಯಾಗಿದ್ದ. ಆತನಿಂದಲೇ ಪಿಸ್ತೂಲ್ ಪಡೆದಿದ್ದಾನೆ. ಆತನ ಮೇಲೆ 15 ಕ್ರಿಮಿನಲ್ ಪ್ರಕರಣಗಳಿದ್ದು, ಆತ ವೃತ್ತಿಪರ ಕ್ರಿಮಿನಲ್ ಆಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯದಲ್ಲಿ ಅರುಣ್ ಮೌರ್ಯ ಹೆಸರು ಕೇಳಿಬಂದಿರುವ ಬಗ್ಗೆ ಕಾಸ್‌ಗಾಂಜಿ ಪ್ರದೇಶದ ಜನರು ದಿಗ್ಭ್ರಮೆಗೊಂಡಿದ್ದಾರೆ. ಆತನ ತಂದೆ, ತಾಯಿ ಮೃತಪಟ್ಟಿದ್ದಾರೆ. ಆತನ ಇಬ್ಬರು ಸಹೋದರರು ದೆಹಲಿಯಲ್ಲಿದ್ದು, ಹಳೆಯ ಸರಕು ಸಾಮಗ್ರಿ ಮಾರಾಟದ ವ್ಯವಹಾರದಲ್ಲಿ ತೊಡಗಿದ್ದಾರೆ. ದಶಕದ ಹಿಂದೆಯೇ ಆತನ ಊರು ತೊರೆದಿದ್ದಾನೆ.

ಅಂತ್ಯಕ್ರಿಯೆ: ಮರಣೋತ್ತರ ಪರೀಕ್ಷೆಯ ಬಳಿಕ ಅತೀಕ್ ಮತ್ತು ಅಶ್ರಫ್ ಅವರ ಮೃತದೇಹಗಳನ್ನು ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಯಿತು. ಅವರ ಹುಟ್ಟೂರಿನಲ್ಲಿ ಅಂತ್ಯಕ್ರಿಯೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಮಧ್ಯೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಪ್ರಯಾಗರಾಜ್ ಜಿಲ್ಲೆಯಲ್ಲಿ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ.

> **ಉತ್ತರ ಪ್ರದೇಶದಲ್ಲಿ ಕ್ರಿಮಿನಲ್ ಚಟುವಟಿಕೆಗಳು ಉತ್ತುಂಗಕ್ಕೇರಿವೆ. ಕ್ರಿಮಿನಲ್‌ಗಳ ಅಟ್ಟಹಾಸಕ್ಕೆ ಕಡಿವಾಣ ಹಾಕಲು ಯೋಗಿ ಸರ್ಕಾರ ವಿಫಲವಾಗಿದೆ**
> **ಅಖಿಲೇಶ್ ಯಾದವ್**
> ಮುಖ್ಯಸ್ಥ, ಸಮಾಜವಾದಿ ಪಕ್ಷ.

> **ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ತನಿಖೆ ನಡೆಯಬೇಕಿದೆ. ಉತ್ತರ ಪ್ರದೇಶವು 'ಎನ್‌ಕೌಂಟರ್‌ಗಳ ರಾಜ್ಯ' ಎಂಬ ಅಪಖ್ಯಾತಿಗೆ ಗುರಿಯಾಗಿದೆ –**
> **ಮಾಯಾವತಿ**
> ಅಧ್ಯಕ್ಷೆ, ಬಹುಜನ ಸಮಾಜ ಪಕ್ಷ

ಯುಪಿಎ ಉಳಿವಿಗೆ ನೆರವಾಗಿದ್ದ ಅತೀಕ್

2008ರಲ್ಲಿ ಅಮೆರಿಕದೊಂದಿಗಿನ ಭಾರತದ ನಾಗರಿಕ ಪರಮಾಣು ಒಪ್ಪಂದದ ವೇಳೆ ಸಂಸತ್‌ನಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಡಾ.ಮನಮೋಹನ ಸಿಂಗ್ ನೇತೃತ್ವದ ಯುಪಿಎ ಸರ್ಕಾರವನ್ನು ಉಳಿಸುವಲ್ಲಿ ಸಂಸದನಾಗಿದ್ದ ಅತೀಕ್ ಅಹ್ಮದ್ ಪ್ರಮುಖ ಪಾತ್ರವಹಿಸಿದ್ದ ಎನ್ನಲಾಗಿದೆ.

ಲೇಖಕ ರಾಜೇಶ್ ಸಿಂಗ್ ಬರೆದಿರುವ 'ಬಾಹುಬಲೀಸ್ ಆಫ್ ಇಂಡಿಯನ್ ಪಾಲಿಟಿಕ್ಸ್: ಫ್ರಮ್ ಬುಲೆಟ್ ಟು ಬ್ಯಾಲೆಟ್' ಪುಸ್ತಕದಲ್ಲಿ ಈ ಬಗ್ಗೆ ಪ್ರಸ್ತಾಪಿಸಲಾಗಿದೆ. ಆ ವೇಳೆ ಅತೀಕ್ ಉತ್ತರ ಪ್ರದೇಶದ ಫುಲ್ಪುರ ಕ್ಷೇತ್ರದಿಂದ ಸಮಾಜವಾದಿ ಪಕ್ಷವನ್ನು ಪ್ರತಿನಿಧಿಸುತ್ತಿದ್ದ.

ಆ ವೇಳೆ ಸರ್ಕಾರದ ನಡೆ ಖಂಡಿಸಿ ಎಡಪಕ್ಷಗಳು ಬಾಹ್ಯ ಬೆಂಬಲವನ್ನು ಹಿಂಪಡೆದವು. 228 ಸದಸ್ಯರನ್ನು ಹೊಂದಿದ್ದ ಯುಪಿಎ ಸರ್ಕಾರಕ್ಕೆ, 44 ಸಂಸದರ ಬೆಂಬಲ ಬೇಕಿತ್ತು. ಆ ವೇಳೆ ಸಮಾಜವಾದಿ ಪಕ್ಷ, ಆರ್‌ಎಲ್‌ಡಿ, ಜೆಡಿಎಸ್ ಪಕ್ಷಗಳು ಯುಪಿಎಗೆ ಬೆಂಬಲ ಘೋಷಿಸಿದವು. ಹಾಗಾಗಿ, ಅವಿಶ್ವಾಸ ನಿರ್ಣಯ ಮಂಡನೆ ಸಭೆಯಲ್ಲಿ ಅತೀಕ್, ಯುಪಿಎ ಪರ ಮತ ಚಲಾಯಿಸಿದ್ದ ಎಂದು ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದೆ.

ಟರ್ಕಿ ನಿರ್ಮಿತ ಪಿಸ್ತೂಲ್ ಬಳಕೆ

ಲಖನೌ: ಮೂವರು ಆರೋಪಿಗಳು ವಿದ್ಯುನ್ಮಾನ ಮಾಧ್ಯಮ ಪತ್ರಕರ್ತರ ಸೋಗಿನಲ್ಲಿ ಸ್ಥಳಕ್ಕೆ ಬಂದಿದ್ದರು. ಅವರ ಬಳಿ ವಿಡಿಯೊ ಕ್ಯಾಮೆರಾಗಳು, ಮೈಕ್ ಹಾಗೂ ಪತ್ರಕರ್ತರ ನಕಲಿ ಗುರುತಿನ ಚೀಟಿಗಳು ಇದ್ದವು ಎಂದು ಉತ್ತರ ಪ್ರದೇಶದ ಪೊಲೀಸರು ತಿಳಿಸಿದ್ದಾರೆ.

'ಟರ್ಕಿಯಲ್ಲಿ ನಿರ್ಮಿತ ಪಿಸ್ತೂಲ್‌ಗಳಿಂದ ಆರೋಪಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಮೂರು ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ನೀಡಲಾಗಿದೆ' ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ವಿಶೇಷ ಡಿ.ಜಿ. ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

ಷಗಾಂಜಿ ಪ್ರದೇಶದಲ್ಲಿರುವ ಮೋತಿಲಾಲ್ ನೆಹರೂ ಆಸ್ಪತ್ರೆಗೆ ಅತೀಕ್ ಮತ್ತು ಅಶ್ರಫ್ ಅವರನ್ನು ವೈದ್ಯಕೀಯ ಪರೀಕ್ಷೆಗೆ ಕರೆದೊಯ್ಯಲಾಗುತ್ತಿತ್ತು. ಈ ವೇಳೆ ಮಾಧ್ಯಮದವರೊಂದಿಗೆ ಅವರು ಮಾತನಾಡುತ್ತಿದ್ದರು. ಪತ್ರಕರ್ತರ ಗುಂಪಿನಲ್ಲಿದ್ದ ಆರೋಪಿಗಳು ತಲೆ ಹಾಗೂ ದೇಹದ ಇತರೇ ಭಾಗಗಳಿಗೆ ಗುಂಡಿನ ದಾಳಿ ನಡೆಸಿದ್ದಾರೆ. ತೀವ್ರವಾಗಿ ಗಾಯಗೊಂಡು ಕುಸಿದು ಬಿದ್ದ ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸುವ ವೇಳೆಯೇ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಘಟನೆ ಬಗ್ಗೆ ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ವರದಿ ಸಲ್ಲಿಸಲಾಗಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರವಿಂದ ಕುಮಾರ್ ತ್ರಿಪಾಠಿ, ನಿವೃತ್ತ ಡಿಜಿಪಿ ಸುಬೇಶ್ ಕುಮಾರ್ ಸಿಂಗ್ ಹಾಗೂ ಜಿಲ್ಲಾ ನಿವೃತ್ತ ನ್ಯಾಯಾಧೀಶ ಬ್ರೀಜೇಶ್ ಕುಮಾರ್ ಸಿಂಗ್ ಸೋನಿ ನೇತೃತ್ವದಡಿ ನ್ಯಾಯಾಂಗ ತನಿಖೆಗೆ ಸರ್ಕಾರ ಆದೇಶಿಸಿದೆ. ಎರಡು ತಿಂಗಳೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ ಎಂದು ತಿಳಿಸಿದರು.

'ಉತ್ತರ ಪ್ರದೇಶ ಜಂಗಲ್ ರಾಜ್'

ಒಂದನೇ ಪುಟದಿಂದ...

ನಿಷೇಧಾಜ್ಞೆ ಜಾರಿ: ಅತೀಕ್ ಮತ್ತು ಅಶ್ರಫ್ ಅವರನ್ನು ಹತ್ಯೆ ಮಾಡಿದ ಲವ್ಲೇಶ್ ತಿವಾರಿ (22), ಮೋಹಿತ್ ಅಲಿಯಾಸ್ ಸನ್ನಿ ಸಿಂಗ್ (23), ಅರುಣ್ ಮೌರ್ಯ(18) ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ಪೊಲೀಸರು ನಡೆಸಿದ ಪ್ರತಿದಾಳಿಯಲ್ಲಿ ಲವ್ಲೇಶ್ ತಿವಾರಿ ಗಾಯಗೊಂಡಿದ್ದಾನೆ. ಕಾನ್‌ಸ್ಟೆಬಲ್ ಮಾನ್‌ಸಿಂಗ್ ಎಂಬವರ ತೋಳಿಗೆ ಗುಂಡು ಹೊಕ್ಕಿದೆ. ಪತ್ರಕರ್ತರೊಬ್ಬರು ಗಾಯಗೊಂಡಿದ್ದಾರೆ.

ಆರೋಪಿಗಳ ಮೇಲೆ ಕೊಲೆ ಹಾಗೂ ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. 'ಕೃತ್ಯ ಎಸಗುವ ಎರಡು ದಿನ ಮೊದಲೇ ಆರೋಪಿಗಳು ಪ್ರಯಾಗ್‌ರಾಜ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿ ಯೋಜನೆ ರೂಪಿಸಿದ್ದರು' ಎಂದು ಪ್ರಯಾಗ್‌ರಾಜ್ ಪೊಲೀಸ್ ಆಯುಕ್ತ ರಮಿತ್ ಶರ್ಮ ತಿಳಿಸಿದರು.

ಪ್ರಯಾಗ್‌ರಾಜ್‌ನ ಚಾಕಿಯಾ ಪ್ರದೇಶದ ಸುತ್ತಮುತ್ತ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಸಿಆರ್‌ಪಿಸಿ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಸ್ಥಳೀಯ ಪೊಲೀಸರು ಪ್ರಯಾಗ್‌ರಾಜ್ ಜಿಲ್ಲೆಯಲ್ಲಿ ಭದ್ರತೆಯನ್ನು ಬಿಗಿಗೊಳಿಸಿದ್ದಾರೆ.

ಕಸ್ಟಡಿಯಲ್ಲಿರುವಾಗಲೂ ರಕ್ಷಣೆ ಬೇಕು ಎಂದು ಕೋರಿ ಅತೀಕ್ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

> **ನನಗೆ ದಿಗ್ಭ್ರಮೆಯಾಗಿದೆ. ಉತ್ತರ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವುದಕ್ಕೆ ಈ ಘಟನೆಯೇ ಸಾಕ್ಷಿ. ಕ್ರಿಮಿನಲ್‌ಗಳು ಕಾನೂನುಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ**
> **-ಮಮತಾ ಬ್ಯಾನರ್ಜಿ**
> ಮುಖ್ಯಮಂತ್ರಿ, ಪಶ್ಚಿಮ ಬಂಗಾಳ.

> **ಉತ್ತರ ಪ್ರದೇಶದಲ್ಲಿ ಗನ್ ಸಂಸ್ಕೃತಿಯ ಆಡಳಿತ ಇದೆ. ಘಟನೆಯ ಹೊಣೆ ಹೊತ್ತು ಯೋಗಿ ಆದಿತ್ಯನಾಥ ಮುಖ್ಯಮಂತ್ರಿ ಹುದ್ದೆಗೆ ಕೂಡಲೇ ರಾಜೀನಾಮೆ ನೀಡಬೇಕು**
> **ಅಸಾದುದ್ದೀನ್ ಒವೈಸಿ**
> ಅಧ್ಯಕ್ಷ, ಎಐಎಂಐಎಂ

> **ಯೋಗಿ ಆಡಳಿತದಲ್ಲಿ ಜಂಗಲ್ ರಾಜ್ ವ್ಯವಸ್ಥೆ ತಲೆಎತ್ತಿದೆ. ಎನ್‌ಕೌಂಟರ್, ಬುಲ್ಡೋಜರ್ ಸಂಸ್ಕೃತಿ, ಕ್ರಿಮಿನಲ್‌ಗಳನ್ನು ಪೋಷಿಸಿರುವ ಪ್ರವೃತ್ತಿಗೆ ಮಣೆ ಹಾಕಿದೆ**
> **ಸೀತಾರಾಂ ಯಚೂರಿ**
> ಪ್ರಧಾನ ಕಾರ್ಯದರ್ಶಿ,ಸಿಪಿಎಂ.

ಕೆಲವೆಡೆ ಪ್ರತಿಭಟನೆ ಕಾವು

ಸಿಬಿಐ ಕ್ರಮಕ್ಕೆ ಎಎಪಿ ಖಂಡನೆ: ಸಾವಿರಾರು ಮಂದಿ ಬಂಧನ

ನವದೆಹಲಿ/ಚಂಡೀಗಢ/ಜೈಪುರ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ವಿಚಾರಣೆ ನಡೆಸಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಕಚೇರಿಗೆ ಕರೆಸಿಕೊಂಡಿರುವ ಸಿಬಿಐ ಅಧಿಕಾರಿಗಳ ಕ್ರಮವನ್ನು ಖಂಡಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕರು ಹಾಗೂ ಕಾರ್ಯಕರ್ತರು ದೇಶದ ಕೆಲವೆಡೆ ಭಾನುವಾರ ಪ್ರತಿಭಟನೆ ನಡೆಸಿದ್ದಾರೆ.

ಎಎಪಿ ಕಾರ್ಯಕರ್ತರು ದೆಹಲಿಯ ವಿವಿಧೆಡೆ ಬೀದಿಗಿಳಿದಿದ್ದರಿಂದ ಆನಂದ್ ವಿಹಾರ್ ಟರ್ಮಿನಲ್, ಐಟಿಒ ಚೌಕ, ಕ್ರೌನ್ ಪ್ಲಾಜಾ ಚೌಕ, ಬಾರಾ ಹನುಮಾನ್ ಮಂದಿರ, ಕರೋಲ್ ಬಾಗ್ ಚೌಕ, ರಾಜ್‌ಘಾಟ್ ಸೇರಿದಂತೆ ಹಲವೆಡೆ ಸಂಚಾರ ದಟ್ಟಣೆ ಏರ್ಪಟ್ಟಿತ್ತು.

ಆರ್ಚ್ ಬಿಷಪ್ ಮಾರ್ಗದಲ್ಲಿ ಧರಣಿ ಕೈಗೊಂಡಿದ್ದ ಎಎಪಿಯ ಹಲವು ನಾಯಕರನ್ನು ದೆಹಲಿ ಪೊಲೀಸರು ಬಂಧಿಸಿದರು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಕೂಡ ಧರಣಿಯಲ್ಲಿ ಪಾಲ್ಗೊಂಡಿದ್ದರು. ಪೊಲೀಸರು ಪಕ್ಷದ ನಾಯಕರನ್ನು ಬಂಧಿಸಲು ಮುಂದಾದಾಗ ಅವರು ಸ್ಥಳದಲ್ಲಿ ಇರಲಿಲ್ಲ.

'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ನಮ್ಮನ್ನೆಲ್ಲಾ ಬಂಧಿಸಿರುವ ಪೊಲೀಸರು ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಇದು ಯಾವ ಬಗೆಯ ಸರ್ವಾಧಿಕಾರ' ಎಂದು ಎಎಪಿ ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

'ಕೇಜ್ರಿವಾಲ್ ಅವರಿಗೆ ಬೆಂಬಲ ಸೂಚಿಸುವ ಉದ್ದೇಶದಿಂದ ದೆಹಲಿ ಪ್ರವೇಶಿಸಲು ಮುಂದಾಗಿದ್ದ ಪಂಜಾಬ್‌ನ ಸಚಿವರು ಹಾಗೂ ಶಾಸಕರನ್ನು ದೆಹಲಿ ಪೊಲೀಸರು ಸಿಂಘು ಗಡಿ ಬಳಿ ತಡೆದಿದ್ದಾರೆ' ಎಂದು ಎಎಪಿ ಪಂಜಾಬ್ ಘಟಕವು ಆರೋಪಿಸಿದೆ.

ಎಎಪಿ ಕಾರ್ಯಕರ್ತರು ಪಂಜಾಬ್‌ನ ಅಮೃತಸರ, ಕೋಲ್ಕತ್ತ ಹಾಗೂ ನಾಗ್ಪುರದಲ್ಲೂ ಪ್ರತಿಭಟನೆ ನಡೆಸಿದ್ದಾರೆ. ರಾಜಸ್ಥಾನದ ಜೈಪುರದಲ್ಲಿ ಸಿಬಿಐ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದಾರೆ.

'ಪ್ರತಿಭಟನೆಯಲ್ಲಿ ನಿರತರಾಗಿದ್ದ ದೆಹಲಿಯ 32 ಶಾಸಕರು, ಪಾಲಿಕೆಯ 70 ಸದಸ್ಯರು ಹಾಗೂ 1,500 ಮಂದಿ ಕಾರ್ಯಕರ್ತರ ಜೊತೆಗೆ ಪಂಜಾಬ್‌ನ 20 ಮಂದಿ ಶಾಸಕರನ್ನೂ ಪೊಲೀಸರು ಬಂಧಿಸಿದ್ದಾರೆ' ಎಂದು ದೆಹಲಿ ಎಎಪಿ ಘಟಕದ ಸಂಯೋಜಕ ಗೋಪಾಲ್ ರಾಯ್ ದೂರಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳ ಬೆನ್ನಲ್ಲೇ ಎಎಪಿ ದೆಹಲಿ ಘಟಕವು ಭಾನುವಾರ ಸಂಜೆ ತುರ್ತು ಸಭೆ ನಡೆಸಿದೆ. ಗೋಪಾಲ್ ರಾಯ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಪಕ್ಷದ ಮುಂದಿನ ನಡೆ ಹಾಗೂ ಹೋರಾಟದ ರೂಪುರೇಷೆ ಕುರಿತು ಚರ್ಚಿಸಲಾಗಿದೆ.

ಬಿಗಿ ಭದ್ರತೆ: ಅರವಿಂದ ಕೇಜ್ರಿವಾಲ್ ಅವರ ವಿಚಾರಣೆ ಹಿನ್ನೆಲೆಯಲ್ಲಿ ಸಿಬಿಐ ಕಚೇರಿ ಸುತ್ತಲೂ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು.


ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರನ್ನು ಪೊಲೀಸರು ವಶಕ್ಕೆ ಪಡೆದರು —ಪಿಟಿಐ ಚಿತ್ರ

> **ಇ.ಡಿ ಹಾಗೂ ಸಿಬಿಐನಂತಹ ತನಿಖಾ ಸಂಸ್ಥೆಗಳು ಸತ್ಯಾಂಶದ ಆಧಾರದ ಮೇಲೆ ಕೆಲಸ ಮಾಡುತ್ತವೆಯೇ ಹೊರತು ಭಾವನೆಗಳ ನೆಲೆಯಲ್ಲಿ ಅಲ್ಲ**
> **ಸಂಬಿತ್ ಪಾತ್ರಾ**
> ಬಿಜೆಪಿ ರಾಷ್ಟ್ರೀಯ ವಕ್ತಾರ

ಕಮಲ್‌ನಾಥ್‌ಗೆ ಬಿಜೆಪಿ ತಿರುಗೇಟು

'ಉತ್ತರ ಪ್ರದೇಶದಲ್ಲಿ ಯಾವ ಮಾದರಿಯ ರಾಜಕೀಯ ಆಡಳಿತ ಇದೆ ಎಂಬುದನ್ನು ಜನರು ಮನಗಾಣಬೇಕಿದೆ. ಒಂದು ದಿನ ಪೊಲೀಸರು ಎನ್‌ಕೌಂಟರ್ ನಡೆಸಿದರೆ ಮಾರನೇ ದಿನ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸುತ್ತಾರೆ. ಕೇಂದ್ರ ಹಾಗೂ ಉತ್ತರ ಪ್ರದೇಶದಲ್ಲಿ ಇಂತಹ ಆಡಳಿತ ಇರುವ ಬಗ್ಗೆ ಸಮಾಜ ಚಿಂತನೆ ನಡೆಸಬೇಕಿದೆ' ಎಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಕಮಲ್‌ನಾಥ್ ಟೀಕಿಸಿದ್ದಾರೆ.

'ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿಯೇ ಈ ಪ್ರಕರಣದ ತನಿಖೆ ನಡೆಯಬೇಕು' ಎಂದು ಆಗ್ರಹಿಸಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ರಾಜ್ಯ ಬಿಜೆಪಿ ವಕ್ತಾರ ನರೇಂದ್ರ ಸಲುಜಾ, 'ಪಾತಕಿ ಅತೀಕ್ ಮೇಲೆ ಕಮಲ್‌ನಾಥ್‌ಗೆ ವಿಶೇಷ ಪ್ರೀತಿ ಇದೆ' ಎಂದು ವ್ಯಂಗ್ಯವಾಡಿದ್ದಾರೆ.

'ಅತೀಕ್ ಮೇಲೆ ನೂರಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳಿವೆ. ಹಲವು ಅಮಾಯಕರನ್ನು ಕೊಂದು ಅವರ ಕುಟುಂಬಗಳನ್ನು ಬೀದಿಪಾಲು ಮಾಡಿದ್ದಾನೆ. ಸುಪ್ರೀಂ ಕೋರ್ಟ್ ಸುಪರ್ದಿಯಲ್ಲಿ ಪ್ರಕರಣದ ತನಿಖೆಗೆ ಒತ್ತಾಯಿಸುವುದು ನಾಚಿಕೆಗೇಡಿನ ಸಂಗತಿ. ರಾಜಕೀಯದಲ್ಲಿ ಮಾಫಿಯಾ ಇರಬೇಕೆಂಬ ಅವರ ಧೋರಣೆ ಸರಿಯಲ್ಲ' ಎಂದು ಟೀಕಿಸಿದ್ದಾರೆ.

ಕೇಜ್ರಿವಾಲ್‌ಗೆ ಕೋರ್ಟ್ ಸಮನ್ಸ್

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ಪ್ರಮಾಣಪತ್ರದ ವಿಚಾರವಾಗಿ ಗುಜರಾತ್ ವಿಶ್ವವಿದ್ಯಾಲಯದ ಕುರಿತು ವ್ಯಂಗ್ಯವಾದ ಹಾಗೂ ಅವಮಾನಕರ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ ಎನ್ನಲಾದ ಪ್ರಕರಣದಲ್ಲಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರಿಗೆ ಇಲ್ಲಿನ ನ್ಯಾಯಾಲಯವೊಂದು ಸಮನ್ಸ್ ಜಾರಿಗೊಳಿಸಿದೆ.

ಈ ಇಬ್ಬರೂ ಮೇ 23ರಂದು ತಮ್ಮ ಮುಂದೆ ಹಾಜರಾಗುವಂತೆ ಹೆಚ್ಚುವರಿ ಸಿಜೆಎಂ ನ್ಯಾಯಾಧೀಶ ಜಯೇಶ್‌ಭಾಯಿ ಚೋವತಿಯಾ ಅವರು ಶನಿವಾರ ಸಮನ್ಸ್ ನೀಡಿದ್ದಾರೆ. ಗುಜರಾತ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಪಿಯೂಷ್ ಪಟೇಲ್ ಅವರು ದೂರು ನೀಡಿದ್ದರು.

ಗುಂಡು ಹಾರಿಸಿ ವ್ಯಕ್ತಿ ಕೊಲೆ

ಪ್ರಜಾವಾಣಿ ವಾರ್ತೆ

ವಿರಾಜಪೇಟೆ (ಕೊಡಗು ಜಿಲ್ಲೆ): ಮರ ಕಡಿದು ರಾತ್ರಿ ವೇಳೆ ಸಾಗಣೆ ಮಾಡುತ್ತಿದ್ದಾಗ ಬೀದಿದೀಪ ಆರಿಸುತ್ತಿದ್ದ ವಿಷಯಕ್ಕೆ ಉಂಟಾದ ಮನಸ್ತಾಪ ಕೊಲೆಯಲ್ಲಿ ಅಂತ್ಯವಾಗಿದೆ.

ಮರ ಸಾಗಿಸುತ್ತಿದ್ದ ಆರೋಪಿಗಳು ತಾಲ್ಲೂಕಿನ ತೋರ ಗ್ರಾಮದ ಪಡಚಿ ಕಾಡು ಕಾಲೊನಿಯ ಬಿ.ಎಂ.ಮಧು (44) ಎಂಬುವವರ ಮೇಲೆ ಶನಿವಾರ ತಡರಾತ್ರಿ ಗುಂಡು ಹಾರಿಸಿ ಕೊಲೆ ಮಾಡಿದ್ದಾರೆ. ಮಧು ಬೆಂಗಳೂರಿನಲ್ಲಿ ವಾಸವಿದ್ದು, ಇಲ್ಲಿರುವ ತಮ್ಮ ತೋಟಕ್ಕೆ ಆಗಾಗ ಬರುತ್ತಿದ್ದರು. ಕಿರಣ, ಸುಧೀರ್ ಹಾಗೂ ಇತರ ಆರೋಪಿಗಳು ರಾತ್ರಿ ವೇಳೆ ಮರ ಕಡಿದು ಸಾಗಿಸುತ್ತಿದ್ದಾಗ ಮಧು ಮನೆಯ ಸಮೀಪದ ಬೀದಿದೀಪಗಳನ್ನು ಆರಿಸುತ್ತಿದ್ದರು. ಈ ವಿಷಯವಾಗಿ ಫೆಬ್ರುವರಿಯಲ್ಲಿ ಗಲಾಟೆ ಮಾಡಿದ್ದ ಮಧು ಮತ್ತೊಮ್ಮೆ ಈ ರೀತಿ ಮರ ಸಾಗಿಸಿದರೆ, ಬೀದಿದೀಪ ಆರಿಸಿದರೆ ಗುಂಡು ಹಾರಿಸುವುದಾಗಿ ಬೆದರಿಕೆ ಒಡ್ಡಿದ್ದರು. ಈ ವೇಳೆ ಆರೋಪಿಗಳು ತಾವೂ ಗುಂಡು ಹಾರಿಸುವುದಾಗಿ ಬೆದರಿಕೆ ಒಡ್ಡಿದ್ದರು.

ಶನಿವಾರ ತಡರಾತ್ರಿ ಮಧು ರಾತ್ರಿ ತಮ್ಮ ಕಾರಿನ ಬಳಿ ಹೋಗುತ್ತಿದ್ದಾಗ ಆರೋಪಿಗಳು ಅವರ ಮೇಲೆ ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ವಿರಾಜಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಬೇಡ್ಕರ್ ಚಿತ್ರಕ್ಕೆ ಮಸಿ: ಗ್ರಾಮ ಪ್ರಕ್ಷುಬ್ಧ

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ನರಸಾಪುರ ಹೋಬಳಿಯ ದಿನ್ನೆ ಹೊಸಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಚಿತ್ರವಿದ್ದ ಫಲಕಕ್ಕೆ ಕಿಡಿಗೇಡಿಗಳು ಮಸಿ ಬಳಿದು ವಿರೂಪಗೊಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು. ಸದ್ಯ ಫಲಕವನ್ನು ಬಟ್ಟೆಯಲ್ಲಿ ಮುಚ್ಚಲಾಗಿದೆ.

ಭಾನುವಾರ ವೇಮಗಲ್ ಠಾಣೆಗೆ ಧಾವಿಸಿದ ಗ್ರಾಮಸ್ಥರು, ದಲಿತ ಹಾಗೂ ರೈತ ಸಂಘಟನೆಗಳ ಕಾರ್ಯಕರ್ತರು, ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ನಂತರ ದೂರು ಸಲ್ಲಿಸಿದರು.

'ಕಿಡಿಗೇಡಿಗಳು ಯಾರೇ ಆಗಿರಲಿ ಹಳ್ಳಿಗಳಲ್ಲಿ ನೆಲೆಸಿರುವ ಶಾಂತಿ ಸುವ್ಯವಸ್ಥೆ ಹಾಳು ಮಾಡುವವರನ್ನು ಕೂಡಲೇ ಬಂಧಿಸಬೇಕು' ಎಂದು ಒತ್ತಾಯಿಸಿದರು. ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಯುವ ಘಟಕದ ಅಧ್ಯಕ್ಷ ಕಲ್ವಮಂಜಲಿ ರಾಮು ಶಿವಣ್ಣ, ದಲಿತ ಸಂಘರ್ಷ ಸಮಿತಿಯ ಮೇಡಿಯಾಳ ಮುನಿ ಆಂಜಿನಪ್ಪ ಇದ್ದರು.

ಕುಕ್ಕೆ: ₹ 123 ಕೋಟಿ ವಾರ್ಷಿಕ ಆದಾಯ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಾಲಯವು 2022– 23ನೇ ಸಾಲಿನಲ್ಲಿ ₹123.64 ಕೋಟಿ ಆದಾಯ ಗಳಿಸಿದೆ ಎಂದು ಪ್ರಕಟಣೆ ತಿಳಿಸಿದೆ. 2019-20ನೇ ಸಾಲಿನಲ್ಲಿ ₹98.92 ಕೋಟಿ, ₹2020-21ರಲ್ಲಿ ₹68.94 ಕೋಟಿ, 2021-22ರಲ್ಲಿ ₹72.73 ಕೋಟಿ ಆದಾಯ ಗಳಿಸಿತ್ತು. ಕೋವಿಡ್ ಕಾರಣಕ್ಕೆ 2 ವರ್ಷ ಆದಾಯ ಕಡಿಮೆ ಇತ್ತು.

ಸಂಕ್ಷಿಪ್ತ ಸುದ್ದಿ

ಆಂಧ್ರ ಸಿ.ಎಂ. ಜಗನ್ ಚಿಕ್ಕಪ್ಪನ ಬಂಧನ

ನವದೆಹಲಿ (ಪಿಟಿಐ): ಆಂಧ್ರಪ್ರದೇಶ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರ ಚಿಕ್ಕಪ್ಪ ವೈ.ಎಸ್. ಭಾಸ್ಕರ ರೆಡ್ಡಿ ಅವರನ್ನು ಮಾಜಿ ಸಂಸದ ವಿವೇಕಾನಂದ ರೆಡ್ಡಿ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಬಿಹಾರ ಕಳ್ಳಬಟ್ಟಿ: 80 ಮಂದಿ ಬಂಧನ

ಮೋತಿಹಾರಿ/ ಪಟ್ನಾ (ಪಿಟಿಐ): ಬಿಹಾರದಲ್ಲಿ ಕಳ್ಳಬಟ್ಟಿ ಸಾರಾಯಿ ಕುಡಿದು ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮೋತಿಹಾರಿಯ ವಿವಿಧೆಡೆ ಶೋಧಕಾರ್ಯ ನಡೆಸಿ 80 ಮಂದಿಯನ್ನು ಬಂಧಿಸಿ, ಅಪಾರ ಪ್ರಮಾಣದ ಮದ್ಯವನ್ನು ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಮೃತ' ವ್ಯಕ್ತಿ 2 ವರ್ಷದ ನಂತರ ಪ್ರತ್ಯಕ್ಷ!

ಧಾರ್ (ಮಧ್ಯಪ್ರದೇಶ) (ಪಿಟಿಐ): ಎರಡು ವರ್ಷಗಳ ಹಿಂದೆ ಕೋವಿಡ್‌ನಿಂದ 'ಮೃತಪಟ್ಟಿದ್ದರು' ಎನ್ನಲಾದ ವ್ಯಕ್ತಿಯೊಬ್ಬರು ಸಂಬಂಧಿಕರೊಬ್ಬರ ಮನೆಯ ಮುಂದೆ ಪ್ರತ್ಯಕ್ಷವಾದ ವಿದ್ಯಮಾನ ಇಲ್ಲಿ ನಡೆದಿದೆ.

'ಮೃತ' ಕಮಲೇಶ್ ಪಾಟೀದಾರ್ (35) ಅವರಿಗೆ 2021ರಲ್ಲಿ ಕೋವಿಡ್ ದೃಢಪಟ್ಟಿತ್ತು. ಸೋಂಕು ಉಲ್ಬಣಿಸಿ ಅವರು ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆ ಘೋಷಿಸಿತ್ತು. ಕಮಲೇಶ್ ಅವರ ಮೃತದೇಹವನ್ನು ಕುಟುಂಬದವರಿಗೆ ಆಸ್ಪತ್ರೆ ಒಪ್ಪಿಸಿತ್ತು. ನಂತರ ಕುಟುಂಬಸ್ಥರು ಸೇರಿ ಕಮಲೇಶ್ ಅವರ ಅಂತ್ಯಕ್ರಿಯೆ ನೆರವೇರಿಸಿದ್ದರು. ಆದರೆ, ಶನಿವಾರ ಸಂಜೆ ಕಮಲೇಶ್ ಅವರು ಜಿಲ್ಲೆಯ ಕರೋಡ್‌ಕಲಾ ಗ್ರಾಮದಲ್ಲಿರುವ ತಮ್ಮ ಚಿಕ್ಕಮ್ಮನ ಮನೆಗೆ ಬಂದಿದ್ದಾರೆ.

10 ಸಾವಿರ ಪ್ರಕರಣ: 'ದೇಶದಲ್ಲಿ 10 ಸಾವಿರ ಕೊರೊನಾ ಸೋಂಕಿನ ಹೊಸ ಪ್ರಕರಣಗಳು ಶನಿವಾರ ದಾಖಲಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 57,542ಕ್ಕೆ ಏರಿಕೆಯಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಫ.ಗು.ಹಳಕಟ್ಟಿ ಸ್ಮರಣಾರ್ಥ ಪ್ರಶಸ್ತಿ ಸ್ಥಾಪನೆ

ಬೆಂಗಳೂರು: ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ ಸ್ಮರಣಾರ್ಥ ಡಾ.ಪಿ.ಜಿ.ಹಳಕಟ್ಟಿ ಪ್ರತಿಷ್ಠಾನವು ₹ 1 ಲಕ್ಷ ನಗದು ಒಳಗೊಂಡ ರಾಷ್ಟ್ರೀಯ ಪ್ರಶಸ್ತಿ ಸ್ಥಾಪಿಸಿದೆ.

ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರಸ್ಟಿ ಪ್ರಶಸ್ತಿ ಸ್ಥಾಪಿಸಿರುವುದಾಗಿ ಶೀಲಾ ಹರ ಹಳಕಟ್ಟಿ ಘೋಷಿಸಿದರು. ಸಾಹಿತ್ಯ, ಶೈಕ್ಷಣಿಕ ಮತ್ತು ಸಮಾಜಸೇವೆ ಕ್ಷೇತ್ರದಲ್ಲಿ ಸಾಧನೆ ಮಾಡಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ, ಪವಿತ್ರಾ ಹಳಕಟ್ಟಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಇದ್ದರು.

ಮನು ಬಳಿಗಾರ್ ಹಾಗೂ ಪ್ರತಿಷ್ಠಾನದ ಸದಸ್ಯರು ಸಾಧಕರನ್ನು ಆಯ್ಕೆ ಮಾಡಲಿದ್ದಾರೆ. ಫ.ಗು. ಹಳಕಟ್ಟಿ ಅವರ ಜನ್ಮದಿನವಾದ ಜುಲೈ 2ರಂದು ಪ್ರಶಸ್ತಿಗೆ ಆಯ್ಕೆಯಾದವರ ಹೆಸರನ್ನು ಘೋಷಿಸಲಾಗುತ್ತದೆ ಎಂದು ಶೀಲಾ ಹರ ಹಳಕಟ್ಟಿ ತಿಳಿಸಿದರು.

ಮಲೆನಾಡು, ಕರಾವಳಿಯಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ, ಮಲೆನಾಡು ವ್ಯಾಪ್ತಿಯಲ್ಲಿ ಸೋಮವಾರ ಮತ್ತು ಮಂಗಳವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಜಿಲ್ಲೆಯ ದಕ್ಷಿಣ ಕನ್ನಡ ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರಗಿ, ವಿಜಯಪುರ ಜಿಲ್ಲೆಯ ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ನಿರ್ಮಲ ಆಕಾಶ ಇರಲಿದೆ ಎಂದು ಐಎಂಡಿ ತಿಳಿಸಿದೆ.

₹ 8 ಕೋಟಿ ಮೌಲ್ಯದ ಸ್ವತ್ತು ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ನೇಮಿಸಿರುವ ಜಾಗೃತ ದಳಗಳು, ತನಿಖಾ ಠಾಣೆಗಳಲ್ಲಿ ಶನಿವಾರ ಒಂದೇ ದಿನ ನಗದು ಸೇರಿದಂತೆ ₹ 8.60 ಕೋಟಿ ಮೌಲ್ಯದ ಚಿನ್ನಾಭರಣ, ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿಯವರ ಕಚೇರಿ ಪ್ರಕಟಣೆ ತಿಳಿಸಿದೆ.

ತಮಿಳುನಾಡಿನಲ್ಲಿ ಆರೆಸ್ಸೆಸ್ ಪಥಸಂಚಲನ

ಚೆನ್ನೈ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಪಥ ಸಂಚಲನಕ್ಕೆ ಸುಪ್ರೀಂ ಕೋರ್ಟ್‌ನಿಂದ ಹಸಿರು ನಿಶಾನೆ ಸಿಕ್ಕಿದ ಬೆನ್ನಲ್ಲೇ ತಮಿಳುನಾಡಿನಾದ್ಯಂತ 45 ಸ್ಥಳಗಳಲ್ಲಿ ಭಾನುವಾರ ಆರೆಸ್ಸೆಸ್‌ನ ಪಥ ಸಂಚಲನ ನಡೆಯಿತು. ಪಥ ಸಂಚಲನವು ತನ್ನ ನಿಯಮಿತ ತರಬೇತಿಯ ಭಾಗವಾಗಿದೆ ಎಂದು ಆರೆಸ್ಸೆಸ್ ಹೇಳಿದೆ.

ಆರೆಸ್ಸೆಸ್ ಸ್ವಯಂಸೇವಕರು ಬಿಳಿ ಬಣ್ಣದ ಅಂಗಿ ಮತ್ತು ಖಾಕಿ ಪ್ಯಾಂಟ್ ಧರಿಸಿ ಪಾಲ್ಗೊಂಡಿದ್ದರು. ಪಥ ಸಂಚಲನ ನಡೆಯುವ ಮಾರ್ಗದ ಉದ್ದಕ್ಕೂ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಚೆನ್ನೈ, ಮದುರೈ, ಕಾಂಚಿಪುರಂ ಮತ್ತು ಚೆಂಗಲ್‌ಪೇಟೆ ಸೇರಿ ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ಈ ಪಥಸಂಚಲನದಲ್ಲಿ ಕೇಂದ್ರ ಸಚಿವ ಎಲ್. ಮುರುಗನ್ ಪಾಲ್ಗೊಂಡರು.

ಆರೆಸ್ಸೆಸ್‌ಗೆ ರಾಜ್ಯದಲ್ಲಿ ಪಥಸಂಚಲನ ನಡೆಸಲು ಮದ್ರಾಸ್ ಹೈಕೋರ್ಟ್ ನೀಡಿದ್ದ ಅನುಮತಿಯನ್ನು ಸುಪ್ರೀಂ ಕೋರ್ಟ್ ಇದೇ 11ರಂದು ಎತ್ತಿಹಿಡಿದಿತ್ತು.

ದಿನಗೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿರುವ ವೃತ್ತಿಪರರು, ಕೈಗಾರಿಕೆ, ಕಚೇರಿಗಳು ಹಾಗೂ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಸ್ವಯಂಸೇವಕರಾಗಿ ಉತ್ತಮ ತರಬೇತಿ ಪಡೆದು, ಈ ಸಂಘಟನೆಯ ಸದಸ್ಯರಾಗಿದ್ದಾರೆ ಎಂದು ಆರೆಸ್ಸೆಸ್ ತಿಳಿಸಿದೆ.


ಚೆನ್ನೈಯಲ್ಲಿ ಭಾನುವಾರ ಆರೆಸ್ಸೆಸ್ ಸ್ವಯಂಸೇವಕರು ಪಥಸಂಚಲನ ನಡೆಸಿದರು —ಪಿಟಿಐ ಚಿತ್ರ



ಸುಭಾಷಿತ

ದಿನದಲ್ಲಿ ಒಮ್ಮೆಯಾದರೂ ನಿಮ್ಮೊಂದಿಗೆ ಮಾತನಾಡಿ. ಇಲ್ಲವಾದಲ್ಲಿ ವಿಶ್ವದ ಅತ್ಯುತ್ತಮ ವ್ಯಕ್ತಿಯನ್ನು ಭೇಟಿಯಾಗುವ ಅವಕಾಶದಿಂದ ವಂಚಿತರಾಗುತ್ತೀರಿ.

–ಸ್ವಾಮಿ ವಿವೇಕಾನಂದ

ಕೊರೊನಾ ರೂಪಾಂತರಿ ಉಪದ್ರವ ಆತಂಕ ಅನವಶ್ಯಕ, ಮೈಮರೆವು ಸಲ್ಲ

ದೇಶದ ವಿವಿಧ ಭಾಗಗಳಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ಕೆಲವು ದಿನಗಳಿಂದ ಹೆಚ್ಚಾಗಿರುವುದು, ಕೋವಿಡ್ ಮಾರ್ಗಸೂಚಿಯನ್ನು ಮತ್ತೆ ಸಾರ್ವಜನಿಕ ಜೀವನದ ಭಾಗವಾಗಿಸಿಕೊಳ್ಳಲು ಒತ್ತಾಯಿಸುತ್ತಿರುವಂತಿದೆ. ಐದಾರು ತಿಂಗಳಿಂದ ಕನಿಷ್ಠ ಪ್ರಮಾಣದಲ್ಲಿದ್ದ ಕೊರೊನಾ ಸೋಂಕಿನ ಪ್ರಕರಣಗಳು ಕಳೆದೊಂದು ವಾರದಿಂದ ಏರುಗತಿಯಲ್ಲಿವೆ ಹಾಗೂ ಪ್ರತೀ ದಿನ 10 ಸಾವಿರಕ್ಕೂ ಹೆಚ್ಚು ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಎಂಟು ರಾಜ್ಯಗಳಲ್ಲಿ ಕೊರೊನಾ ಸೋಂಕಿನ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ದೆಹಲಿ, ಕೇರಳ, ಮಹಾರಾಷ್ಟ್ರ, ರಾಜಸ್ಥಾನ ಸೇರಿದಂತೆ ವಿವಿಧ ರಾಜ್ಯಗಳಲ್ಲಿ 27 ಮಂದಿ ಕೋವಿಡ್ ಬಾಧೆಯಿಂದ ಮೃತಪಟ್ಟಿದ್ದಾರೆ. ಈ ಏರಿಕೆ ಪ್ರಮಾಣ ಮುಂದಿನ ದಿನಗಳಲ್ಲಿ ಕೋವಿಡ್‌ನಿಂದ ಆಸ್ಪತ್ರೆಗೆ ಸೇರುವವರ ಸಂಖ್ಯೆ ಹೆಚ್ಚಾಗಬಹುದೆನ್ನುವ ಸೂಚನೆ ನೀಡುವಂತಿದೆ ಹಾಗೂ ಸಾವುನೋವಿನ ಪ್ರಮಾಣವೂ ಹೆಚ್ಚಾಗಬಹುದು. ಸಂಭಾವ್ಯ ಬಿಕ್ಕಟ್ಟನ್ನು ಎದುರಿಸಲು ವೈದ್ಯಕೀಯ ಕ್ಷೇತ್ರ ಅಗತ್ಯ ಸಿದ್ಧತೆಗಳನ್ನು ನಡೆಸಬೇಕಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ನಡೆಸಲು ಹಾಗೂ ಸೋಂಕಿತರಿಗೆ ಚಿಕಿತ್ಸೆ ನೀಡಲು ಆಸ್ಪತ್ರೆಗಳಲ್ಲಿನ ಮೂಲ ಸೌಕರ್ಯಗಳನ್ನು ಸುಸಜ್ಜಿತ ಸ್ಥಿತಿಯಲ್ಲಿರಿಸಿಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರ ಗಮನಹರಿಸಿದೆ. ರಾಜ್ಯಗಳ ಆರೋಗ್ಯ ಸಚಿವರೊಂದಿಗೆ ಕೇಂದ್ರ ಆರೋಗ್ಯ ಸಚಿವರು ಸಮಾಲೋಚನೆ ನಡೆಸಿದ್ದು, ಅಪಾಯದ ಸಾಧ್ಯತೆ ಹೆಚ್ಚಾಗಿರುವ ಸ್ಥಳಗಳನ್ನು ಗುರುತಿಸುವಂತೆ ಸೂಚನೆ ನೀಡಿದ್ದಾರೆ; ಪರೀಕ್ಷೆಗಳ ಸಂಖ್ಯೆ ಮತ್ತು ಲಸಿಕೆ ನೀಡುವುದನ್ನು ಹೆಚ್ಚಿಸುವುದರ ಜೊತೆಗೆ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಲು ಆಸ್ಪತ್ರೆಗಳು ಸನ್ನದ್ಧವಾಗಿರುವಂತೆ ಸೂಚಿಸಿದ್ದಾರೆ. ಹೊಸ ಸೋಂಕುಗಳಿಗೆ ಒಮೈಕ್ರಾನ್ ರೂಪಾಂತರಿ ತಳಿ ಎಕ್ಸ್‌ಬಿಬಿ.1.16 ಕಾರಣವೆಂದು ಗುರುತಿಸಲಾಗಿದೆ. ಕರ್ನಾಟಕದಲ್ಲಿ ಕೂಡ ಎಕ್ಸ್‌ಬಿಬಿ.1.16 ಸೋಂಕಿನ ಪ್ರಕರಣಗಳು ಪತ್ತೆಯಾಗಿವೆ. ಈ ರೂಪಾಂತರಿ ತಳಿ ವೇಗವಾಗಿ ಹರಡುತ್ತಿಲ್ಲ ಹಾಗೂ ಅದರ ಪರಿಣಾಮಗಳು ಸೌಮ್ಯವಾಗಿವೆ ಎನ್ನುವುದು ಸಮಾಧಾನಕರ ಸಂಗತಿ. ಆದರೆ, ಮುಂದಿನ ದಿನಗಳಲ್ಲಿ ಈ ರೂಪಾಂತರಿ ಯಾವ ರೀತಿ ವರ್ತಿಸುತ್ತದೆಂದು ಸ್ಪಷ್ಟವಾಗಿ ಹೇಳುವುದು ಕಷ್ಟ. ವಿಶ್ವ ಆರೋಗ್ಯ ಸಂಸ್ಥೆಯು ಭಾರತದಲ್ಲಿನ ರೂಪಾಂತರಿ ತಳಿಯ ವರ್ತನೆಯನ್ನು ಗಮನಿಸುತ್ತಿರುವುದಾಗಿ ತಿಳಿಸಿದೆ.



ಚುನಾವಣೆ ಸಂದರ್ಭ ಮತ್ತು ಪ್ರವಾಸಿ ಋತುವನ್ನು ಜನರು ವಿವೇಕ ಮತ್ತು ಸಂಯಮದಿಂದ ನಿಭಾಯಿಸಬೇಕು

ಕೊರೊನಾ ಸೋಂಕಿನ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿದ್ದರೂ ಆತಂಕಪಡುವ ಸ್ಥಿತಿಯೇನೂ ದೇಶದಲ್ಲಿಲ್ಲ. ಬಹುತೇಕ ನಾಗರಿಕರು ಲಸಿಕೆಯ ಸುರಕ್ಷಾ ವಲಯದಲ್ಲಿದ್ದಾರೆ. ಎರಡು– ಮೂರು ವರ್ಷಗಳ ಅವಧಿಯಲ್ಲಿ ಕೊರೊನಾ ಬಹುತೇಕರಿಗೆ ಬಂದುಹೋಗಿರುವುದರಿಂದ ಸೋಂಕಿನ ವಿರುದ್ಧ ಸಾರ್ವಜನಿಕರಲ್ಲಿ ಪ್ರತಿರೋಧ ಶಕ್ತಿ ರೂಪುಗೊಂಡಿದೆ. ಹಾಗಾಗಿ ಹೊಸ ರೂಪಾಂತರಿ ತಳಿ ನಾಗರಿಕರ ಆರೋಗ್ಯದ ಮೇಲೆ ಹೆಚ್ಚಿನ ಅಪಾಯ ಉಂಟುಮಾಡುವ ಸಾಧ್ಯತೆ ಕಡಿಮೆ. ಹಾಗೆಂದು ಜನ ಮೈಮರೆಯುವಂತಿಲ್ಲ. ಕೊರೊನಾ–19 ವೈರಸ್ ಅನಿರೀಕ್ಷಿತ ಹಾಗೂ ಅನೂಹ್ಯ ಪರಿಣಾಮಗಳನ್ನು ಉಂಟುಮಾಡುವ ಸಾಧ್ಯತೆಯನ್ನು ಉಪೇಕ್ಷಿಸಲಾಗದು. ಹಾಗಾಗಿ, ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದು ಅಗತ್ಯ. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು ಹಾಗೂ ಸಾಧ್ಯವಾದಷ್ಟೂ ವೈಯಕ್ತಿಕ ಅಂತರ ಪಾಲಿಸುವುದು ಸೇರಿದಂತೆ ಕೋವಿಡ್ ಕಾಲಘಟ್ಟದ ಎಲ್ಲ ಮುನ್ನೆಚ್ಚರಿಕಾ ಕ್ರಮಗಳಿಗೆ ಮರಳುವುದು ಇಂದಿನ ಅಗತ್ಯ. ಕೊರೊನಾ ನಿಯಂತ್ರಣದಲ್ಲಿರುವ ಸಮಯದಲ್ಲೂ ಕೋವಿಡ್ ಮಾರ್ಗಸೂಚಿಯನ್ನು ನಮ್ಮ ಜೀವನಶೈಲಿಯ ಭಾಗವಾಗಿಸಿಕೊಳ್ಳುವುದರಿಂದ ಕೆಮ್ಮು–ನೆಗಡಿಯಂತಹ ಸೋಂಕುಗಳಿಂದ ಆದಷ್ಟೂ ದೂರವಿರಬಹುದು. ಮಕ್ಕಳು, ಹಿರಿಯ ನಾಗರಿಕರು ಹಾಗೂ ಜೀವನಶೈಲಿ ಸಮಸ್ಯೆಗಳಿಂದ ಬಳಲುತ್ತಿರುವವರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ಅಗತ್ಯ. ಮೂರನೇ ಡೋಸ್ ಲಸಿಕೆ ಪಡೆಯದಿರುವವರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದು, ಅವರನ್ನು ಲಸಿಕೆಯ ಸುರಕ್ಷಾ ವಲಯದೊಳಗೆ ತರುವ ಪ್ರಯತ್ನಗಳನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ‘ಪರೀಕ್ಷೆ, ಚಿಕಿತ್ಸೆ, ಲಸಿಕೆ’ಯ ಸೂತ್ರದೊಂದಿಗೆ ಕೋವಿಡ್ ಮಾರ್ಗಸೂಚಿಯನ್ನು ಅನುಸರಿಸುವುದು ಕೊರೊನಾ ವಿರುದ್ಧದ ಹೋರಾಟದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭ ಕೂಡ ಕೊರೊನಾ ಸೋಂಕಿನ ಬಗ್ಗೆ ಹೆಚ್ಚು ಜಾಗ್ರತೆ ವಹಿಸಲು ಒತ್ತಾಯಿಸುವಂತಿದೆ. ಚುನಾವಣಾ ಸಂದರ್ಭದಲ್ಲಿ ಜನರು ಎಚ್ಚರ ತಪ್ಪಬಾರದು. ರಾಜಕೀಯ ಸಮಾವೇಶಗಳು ಹಾಗೂ ಕಾರ್ಯಕರ್ತರ ಸಭೆಗಳು ಸೋಂಕು ಹರಡುವ ಸ್ಥಳಗಳಾಗದಂತೆ ರಾಜಕೀಯ ಪಕ್ಷಗಳ ಮುಖಂಡರು, ಜನಪ್ರತಿನಿಧಿಗಳು ವಿವೇಚನೆಯಿಂದ ವರ್ತಿಸಬೇಕು. ಮತಯಾಚನೆ ಮಾಡುವುದರ ಜೊತೆಗೆ ಕೋವಿಡ್ ಮಾರ್ಗಸೂಚಿ ಪಾಲನೆಯ ಬಗ್ಗೆ ಜನಜಾಗೃತಿ ಮೂಡಿಸುವುದು ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಹೊಣೆಗಾರಿಕೆಯಾಗಿದೆ. ಶಾಲಾಕಾಲೇಜುಗಳಿಗೆ ರಜೆ ಇರುವ ಏಪ್ರಿಲ್–ಮೇ ಅವಧಿಯಲ್ಲಿ ಪ್ರವಾಸಿ ತಾಣಗಳಲ್ಲಿ ಜನಜಂಗುಳಿ ಹೆಚ್ಚಾಗಿರುವುದು ಕೂಡ ಕೊರೊನಾ ಸೋಂಕು ಹರಡಲು ಪೂರಕವಾಗಬಹುದು. ಚುನಾವಣೆ ಮತ್ತು ಪ್ರವಾಸಿ ಋತುವನ್ನು ಜನರು ವಿವೇಕ ಮತ್ತು ಸಂಯಮದಿಂದ ನಿಭಾಯಿಸಬೇಕು.

ಟಿಕೆಟ್ ಹಂಚಿಕೆ ಗೊಂದಲದಲ್ಲಿ ಇಬ್ಬರು ನಾಯಕರ ಪಾತ್ರ ಸ್ಪಷ್ಟವಾಗಿದೆ

ಬಿಜೆಪಿ: ಹಿರಿಯರಿಲ್ಲದ ಒಡೆದ ಮನೆ



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಹಿಂದಿನ ನಾಲ್ಕು ದಶಕಗಳಲ್ಲಿ ಭಾರತೀಯ ಜನತಾ ಪಕ್ಷವು ಜಾಣ್ಮೆಯ ಸೋಷಿಯಲ್ ಎಂಜಿನಿಯರಿಂಗ್ ಮೂಲಕ ತನಗೆ ಅಂಟಿಕೊಂಡಿದ್ದ ‘ಬ್ರಾಹ್ಮಣ- ಬನಿಯಾ’ ಹಣೆಪಟ್ಟಿಯನ್ನು ಕಳಚಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾ ಬಂದಿದೆ. ಇತ್ತೀಚಿನ ಮೂರು ದಶಕಗಳ ಚುನಾವಣಾ ಸಾಧನೆಯನ್ನು ಗಮನಿಸಿದರೆ ಈ ಪ್ರಯತ್ನದಲ್ಲಿ ಪಕ್ಷಕ್ಕೆ ಯಶಸ್ಸು ಕೂಡಾ ಸಿಕ್ಕಿರುವುದನ್ನು ಗಮನಿಸಬಹುದಾಗಿದೆ.

ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿರುವ ಕರ್ನಾಟಕದಲ್ಲಿ ನಡೆಯುತ್ತಿರುವ ರಾಜಕೀಯ ತಳಮಳಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಬಿಜೆಪಿಯ ಇತಿಹಾಸದ ಚಕ್ರ ಹಿಂದಕ್ಕೆ ಚಲಿಸುತ್ತಿರುವ ಹಾಗೆ ಕಾಣುತ್ತಿದೆ. ರಾಜ್ಯದ ವಿಧಾನಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ಪ್ರಧಾನ ಪಾತ್ರ ವಹಿಸಿರುವ ನಾಯಕರು ಮತ್ತು ಇದರಿಂದ ಮೂಲೆಗುಂಪಾದವರು, ಅತೃಪ್ತರಾದವರು ಹಾಗೂ ಸಿಡಿದೆದ್ದಿರುವ ನಾಯಕರ ಜಾತಿ ಹಿನ್ನೆಲೆಯನ್ನು ನೋಡಿದರೆ ಈ ಇತಿಹಾಸದ ಚಕ್ರದ ಚಲನೆಯ ದಿಕ್ಕು ಇನ್ನಷ್ಟು ಸ್ಪಷ್ಟವಾಗಬಹುದು.

ಬಿಜೆಪಿ ಮತ್ತು ಅದರ ಮಾತೃ ಸಂಸ್ಥೆಯಾದ ಆರ್‌ಎಸ್‌ಎಸ್‌ನ ಇತಿಹಾಸವನ್ನು ಗಮನಿಸಿದರೆ, ಈ ಎರಡೂ ಸಂಘಟನೆಗಳಲ್ಲಿ ಬ್ರಾಹ್ಮಣೇತರ ವ್ಯಕ್ತಿ ಉನ್ನತ ಸ್ಥಾನಕ್ಕೇರುವುದು ಅಸಾಧ್ಯ ಎಂಬ ಅಭಿಪ್ರಾಯ ಇತ್ತು. ಆರ್‌ಎಸ್‌ಎಸ್‌ಗೆ ಸಂಬಂಧಿಸಿದಂತೆ ಈ ಅಲಿಖಿತ ನಿಯಮ ಈಗಲೂ ಅಬಾಧಿತವಾಗಿದ್ದರೂ ಆರ್‌ಎಸ್‌ಎಸ್‌ನ ರಾಜಕೀಯ ಮುಖವಾದ ಬಿಜೆಪಿಯಲ್ಲಿ ಈ ನಿಯಮ ಮುರಿದುಬಿದ್ದು ಬಹಳ ಕಾಲವಾಗಿದೆ. ಇದಕ್ಕೆ ಕಾರಣ ವಾಜಪೇಯಿ– ಅಡ್ವಾಣಿ ಕಾಲದಲ್ಲಿ ನಡೆದ ಸೋಷಿಯಲ್ ಎಂಜಿನಿಯರಿಂಗ್.

ಕರ್ನಾಟಕದ ಬಿ.ಎಸ್.ಯಡಿಯೂರಪ್ಪ, ಸದಾನಂದ ಗೌಡ, ಜಗದೀಶ ಶೆಟ್ಟರ್ ಸೇರಿದಂತೆ ಕಲ್ಯಾಣ್ ಸಿಂಗ್, ಶಿವರಾಜ್ ಸಿಂಗ್ ಚೌಹಾಣ್, ವಸುಂಧರಾ ರಾಜೆ, ಉಮಾ ಭಾರತಿ ಮೊದಲಾದ ಬ್ರಾಹ್ಮಣೇತರ ನಾಯಕರು ಪಕ್ಷದ ವತಿಯಿಂದ ಮುಖ್ಯಮಂತ್ರಿ ಸ್ಥಾನಕ್ಕೇರಿದ್ದು, ಅಂತಿಮವಾಗಿ ಹಿಂದುಳಿದ ಜಾತಿಗೆ ಸೇರಿರುವ ನರೇಂದ್ರ ಮೋದಿಯವರು ಪ್ರಧಾನಿ ಪಟ್ಟಕ್ಕೇರಿದ್ದು ಇದೇ ಸೋಷಿಯಲ್ ಎಂಜಿನಿಯರಿಂಗ್ ಪ್ರಯೋಗದ ಫಲ. ಒಂದು ಹಂತದಲ್ಲಿ ಮೋದಿಯವರ ರಾಜಕೀಯ ಭವಿಷ್ಯವೇ ಅಪಾಯದಲ್ಲಿದ್ದಾಗ ಅವರನ್ನು ಉಳಿಸಿದ್ದು ಲಾಲ್ ಕೃಷ್ಣ ಅಡ್ವಾಣಿ ಎನ್ನುವುದು ಈಗ ಇತಿಹಾಸ.

ಇದೇನು ರಾತ್ರಿಹಗಲಾಗುವುದರೊಳಗೆ ನಡೆದ ಬದಲಾವಣೆ ಅಲ್ಲ. 1984ರ ಚುನಾವಣೆಯಲ್ಲಿ ರಾಜಕೀಯವಾಗಿ ನೆಲ ಕಚ್ಚಿದ್ದ ಬಿಜೆಪಿಯನ್ನು ಮತ್ತೆ ದೂಳಿನಿಂದ ಎದ್ದು ಬರುವಂತೆ ಮಾಡಿದ್ದು ವಾಜಪೇಯಿ– ಅಡ್ವಾಣಿ ಜೋಡಿ. ಇವರಿಬ್ಬರಲ್ಲಿ ವಾಜಪೇಯಿ ಸೂತ್ರಧಾರಿಯಾಗಿದ್ದರೆ, ಪಾತ್ರಧಾರಿಯಾಗಿದ್ದವರು ಲಾಲ್ ಕೃಷ್ಣ ಅಡ್ವಾಣಿ. ಆರ್‌ಎಸ್‌ಎಸ್ ಸ್ವಯಂಸೇವಕರ ಜಾಲವನ್ನು ಬಳಸಿಕೊಂಡು ದೇಶದಾದ್ಯಂತ ಓಡಾಡಿ ತಳಮಟ್ಟದಲ್ಲಿ ಪಕ್ಷವನ್ನು ಕಟ್ಟಿದವರು ಅಡ್ವಾಣಿ. ಮಂಡಲ್ ವರದಿ ಜಾರಿ ಘೋಷಣೆಯ ನಂತರದ ದಿನಗಳಲ್ಲಿ ಸಂಘಟಿತಗೊಳ್ಳುತ್ತಿದ್ದ ಹಿಂದುಳಿದ ಮತ್ತು ದಲಿತ ಸಮುದಾಯಗಳ ಜಾಗೃತಿಯ ಅಪಾಯವನ್ನು ಗಮನಿಸಿ ಅದಕ್ಕೆ ಇದಿರಾಗಿ ಕಮಂಡಲವನ್ನು ನಿಲ್ಲಿಸಿ ರಾಮಜನ್ಮಭೂಮಿ ಚಳವಳಿಯನ್ನು ಹುಟ್ಟುಹಾಕಿದವರು ಅಡ್ವಾಣಿಯವರು.

ಬ್ರಾಹ್ಮಣ–ಬನಿಯಾ ಸಮುದಾಯಗಳಲ್ಲಿ ತನ್ನ ವರ್ಗ ಮತ್ತು ವರ್ಣ ಶತ್ರುಗಳನ್ನು ಕಾಣುತ್ತಿದ್ದ ಬಹುಸಂಖ್ಯಾತ ಹಿಂದುಳಿದ ಮತ್ತು ದಲಿತ ಸಮುದಾಯಕ್ಕೆ ಹಿಂದುತ್ವದ ನಶೆಯೇರಿಸಿ, ಎದುರಾಗಿ ಮುಸ್ಲಿಮರು ಎನ್ನುವ ಶತ್ರುವನ್ನು ನಿಲ್ಲಿಸಿ ದೇಶದ ಸಾಮಾಜಿಕ ಮತ್ತು ರಾಜಕೀಯ ಸಮೀಕರಣವನ್ನೇ ಉಲ್ಟಾಪಲ್ಟಾ ಮಾಡಿದ್ದೇ ವಾಜಪೇಯಿ– ಅಡ್ವಾಣಿ ಜೋಡಿ. ಇದರಿಂದ ಗಳಿಸಿದ ರಾಜಕೀಯ ಅಧಿಕಾರ ಮತ್ತು ಅದನ್ನು ಬಳಸಿಕೊಂಡು ತನ್ನ ನೆಲೆ ವಿಸ್ತರಿಸುವ ಸಾಧ್ಯತೆಯನ್ನು ಕಂಡ ಆರ್‌ಎಸ್‌ಎಸ್ ಕೂಡಾ ತನ್ನ ಮಡಿವಂತಿಕೆಯನ್ನು ಸಡಿಲಗೊಳಿಸಿ ಈ ಪ್ರಯೋಗಕ್ಕೆ ಸಹಕಾರ ನೀಡಿತ್ತು. ಇವೆಲ್ಲದರ ಫಲ ಕಾಂಗ್ರೆಸ್ ಪಕ್ಷದ ಏಕಚಕ್ರಾಧಿಪತ್ಯವನ್ನು ಉರುಳಿಸಿ ಆ ಸ್ಥಾನಕ್ಕೇರಿರುವ ಈಗಿನ ಬಿಜೆಪಿ.

ಹೀಗಿದ್ದರೂ ಕರ್ನಾಟಕ ರಾಜ್ಯವನ್ನು ಹೊರತುಪಡಿಸಿದರೆ ದಕ್ಷಿಣದ ಯಾವ ರಾಜ್ಯಗಳಲ್ಲಿಯೂ ಸ್ವಂತ ಬಲದಿಂದ ನೆಲೆ ಕಂಡುಕೊಳ್ಳಲು ಬಿಜೆಪಿಗೆ ಈವರೆಗೆ ಸಾಧ್ಯವಾಗಲಿಲ್ಲ. ಈ ಸವಾಲಿನ ಜೊತೆಯಲ್ಲಿ ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯ ದೃಷ್ಟಿಯಿಂದಲೂ ಕರ್ನಾಟಕದ ವಿಧಾನಸಭಾ ಚುನಾವಣೆಯು ಬಿಜೆಪಿಗೆ ಜೀವನ್ಮರಣ ಪ್ರಶ್ನೆಯಷ್ಟೇ ಮಹತ್ವದ್ದು. ಇಲ್ಲಿ ಪಕ್ಷ ಪರಾಭವಗೊಂಡರೆ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರಿಗೆ ರಾಜಕೀಯವಾಗಿ ಮಾತ್ರವಲ್ಲ ಸೋಲಿಲ್ಲದ ಸರದಾರರೆನಿಸಿಕೊಂಡಿರುವ ಅವರ ವೈಯಕ್ತಿಕ ಪ್ರತಿಷ್ಠೆಗೂ ದೊಡ್ಡ ಹೊಡೆತ.

ಚುನಾವಣಾ ಫಲಿತಾಂಶವೇ ಅಂತಿಮವಾದರೂ ಕರ್ನಾಟಕದಲ್ಲಿ ಟಿಕೆಟ್ ಹಂಚಿಕೆಯಲ್ಲಿನ ಗೊಂದಲ ಮತ್ತು ಅದರಿಂದ ಹುಟ್ಟಿಕೊಂಡಿರುವ ಬಂಡಾಯದ ಚಟುವಟಿಕೆಗಳನ್ನು ಗಮನಿಸಿದರೆ, ಮೋದಿ– ಶಾ ಜೋಡಿ ಇದೇ ಮೊದಲ ಬಾರಿಗೆ ತನ್ನ ಕಾರ್ಯತಂತ್ರದಲ್ಲಿ ಎಡವಿದಂತೆ ಕಾಣುತ್ತಿದೆ. ಈ ಎಡವಟ್ಟುಗಳಲ್ಲಿ ಕರ್ನಾಟಕದ ಇಬ್ಬರು ನಾಯಕರ ಪಾತ್ರ ಸ್ಪಷ್ಟವಾಗಿ ಕಾಣಿಸುತ್ತಿದೆ. ಒಬ್ಬರು ಬಿ.ಎಲ್.ಸಂತೋಷ್, ಇನ್ನೊಬ್ಬರು ಪ್ರಲ್ಹಾದ ಜೋಶಿ.

ಇವರಿಬ್ಬರೂ ಟಿಕೆಟ್ ಹಂಚಿಕೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದವರು. ಅವರು ಪಾತ್ರಧಾರಿಗಳಾಗಿ ತೆರೆಯಮರೆಯಲ್ಲಿಯೇ ಉಳಿದುಬಿಟ್ಟಿದ್ದರೆ ಹೆಚ್ಚು ಅಪಾಯ ಆಗುತ್ತಿರಲಿಲ್ಲವೇನೋ? ಪ್ರಯೋಗದ ಪರಿಣಾಮವನ್ನು ನಿರೀಕ್ಷಿಸದೇ ಇದ್ದ ಜೋಶಿ ಅವರು ಈಶ್ವರಪ್ಪನವರ ರಾಜಕೀಯ ನಿವೃತ್ತಿ ಪತ್ರವನ್ನು ತಕ್ಷಣ ಟ್ವಿಟರ್‌ನಲ್ಲಿ ಹಂಚಿಕೊಂಡು ಶುಭ ಹಾರೈಸಿದರು. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಕ್ರಮವಾಗಿ ವಿ.ಸೋಮಣ್ಣ ಮತ್ತು ಆರ್.ಅಶೋಕ ಅವರನ್ನು ಅಭ್ಯರ್ಥಿಗಳನ್ನಾಗಿ ಮಾಡಿದ್ದು ತಮ್ಮ ಸಾಧನೆ ಎಂದು ಬಿ.ಎಲ್. ಸಂತೋಷ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿದರು. ಇಷ್ಟರಲ್ಲಿ ಟಿಕೆಟ್ ವಂಚಿತರೆಲ್ಲರಿಗೂ ತಮಗೆ ಆಗಿರುವ ಅನ್ಯಾಯಕ್ಕೆ ಇವರಿಬ್ಬರೇ ಕಾರಣಕರ್ತರು ಎನ್ನುವುದು ಮನದಟ್ಟಾಗಿತ್ತು.

ಯಡಿಯೂರಪ್ಪ ಮತ್ತು ಸಂತೋಷ್ ಅವರ ನಡುವಿನ ಶೀತಲ ಸಮರಕ್ಕೆ ದಶಕದ ಇತಿಹಾಸ ಇದೆ. 2013ರಲ್ಲಿ ಯಡಿಯೂರಪ್ಪನವರು ಪಕ್ಷ ತ್ಯಜಿಸಿದಾಗ ತಮ್ಮ ನಿರ್ಧಾರಕ್ಕೆ ಸಂತೋಷ್ ಅವರೇ ಕಾರಣ ಎಂದು ನೇರ ಆರೋಪ ಮಾಡಿದ್ದರು. ಎರಡನೇ ಬಾರಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಮತ್ತು ತಮ್ಮ ಮಗನನ್ನು ಸಂಪುಟಕ್ಕೆ ಸೇರಿಸಿಕೊಳ್ಳದೇ ಇರಲು ಸಂತೋಷ್ ಅವರೇ ಕಾರಣ ಎನ್ನುವುದು ಯಡಿಯೂರಪ್ಪನವರಿಗೂ ಗೊತ್ತಿತ್ತು. ಆದರೆ ಸಂತೋಷ್ ಅವರು ಇತ್ತೀಚೆಗೆ ದೆಹಲಿ ಹೈಕಮಾಂಡ್ ಜೊತೆ ಸೇರಿಕೊಂಡಿರುವ ಕಾರಣ ಯಡಿಯೂರಪ್ಪ ಕೂಡಾ ದೊಡ್ಡದಾಗಿ ಗುಟುರು ಹಾಕುವ ಸ್ಥಿತಿಯಲ್ಲಿಲ್ಲ. ಇದೇ ರೀತಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ನಂತರ ಹುಬ್ಬಳ್ಳಿಯಲ್ಲಿ ಜಗದೀಶ ಶೆಟ್ಟರ್ ಮತ್ತು ಪ್ರಲ್ಹಾದ ಜೋಶಿ ಅವರ ಸಂಬಂಧದಲ್ಲಿಯೂ ಬಿರುಕು ಕಾಣಿಸಿಕೊಂಡಿತ್ತು.

ಒಂದು ರೀತಿಯಲ್ಲಿ ಇಲ್ಲಿಯವರೆಗೆ ಯಡಿಯೂರಪ್ಪ ಮತ್ತು ಸಂತೋಷ್ ಅವರ ನಡುವಿನ ಶೀತಲ ಸಮರ ಈಗ ಪಕ್ಷದಲ್ಲಿ ಎರಡು ಪ್ರತ್ಯೇಕ ಗುಂಪುಗಳಾಗುವ ಮಟ್ಟಕ್ಕೆ ಬೆಳೆಯುತ್ತಿದೆ. ಈ ಭಿನ್ನಮತವನ್ನು ಶಮನಗೊಳಿಸುವ ಸಾಮರ್ಥ್ಯ ಸಂತೋಷ್– ಜೋಶಿ ಜೋಡಿಗಾಗಲೀ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗಾಗಲೀ ಇಲ್ಲ. ನಾಯಕರು ಮತ್ತು ಕಾರ್ಯಕರ್ತರ ಜೊತೆಗಿನ ತಮ್ಮ ದೀರ್ಘ ಸಂಬಂಧದಿಂದಾಗಿ ಈಗಿನ ಬಂಡಾಯವನ್ನು ಶಮನಗೊಳಿಸುವ ಸಾಮರ್ಥ್ಯ ಹೊಂದಿರುವವರು ಯಡಿಯೂರಪ್ಪ ಮಾತ್ರ. ಆದರೆ ತಮ್ಮವರೇ ಬಲಿಪಶುಗಳಾಗಿರುವ ಕಾರಣದಿಂದಾಗಿ ಅವರು ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ.

ಇಂತಹ ಸಂದರ್ಭಗಳಲ್ಲಿ ಹಿಂದೆಲ್ಲ ಮಧ್ಯಪ್ರವೇಶಿಸಿ ಬಿಕ್ಕಟ್ಟು ನಿವಾರಿಸುತ್ತಿದ್ದವರು ದಿವಂಗತ ಅನಂತ ಕುಮಾರ್. ಯಡಿಯೂರಪ್ಪ ಮತ್ತು ಅನಂತಕುಮಾರ್ ನಡುವೆ ರಾಜಕೀಯ ಪೈಪೋಟಿ ಇದ್ದರೂ ಅದನ್ನು ಮೀರಿದ ವೈಯಕ್ತಿಕ ಸಂಬಂಧ ಇತ್ತು. ಕರ್ನಾಟಕದ ರಾಜಕೀಯದಲ್ಲಿ ರಾಮಕೃಷ್ಣ ಹೆಗಡೆಯವರ ಸ್ಥಾನ ತುಂಬುವ ಪ್ರಯತ್ನದಲ್ಲಿದ್ದ ಅನಂತಕುಮಾರ್ ಅವರಿಗೆ ಒಕ್ಕಲಿಗ ಮತ್ತು ಲಿಂಗಾಯತ ಸ್ವಾಮಿಗಳ ಜೊತೆ ಆತ್ಮೀಯವಾದ ಮತ್ತು ಅಷ್ಟೇ ಗಟ್ಟಿಯಾದ ಸಂಬಂಧ ಇತ್ತು. ಆದರೆ ಅನಂತಕುಮಾರ್ ಅವರ ಜಾಗಕ್ಕೆ ಬಂದಿರುವ ಸಂತೋಷ್ ಮತ್ತು ಜೋಶಿ ತಮ್ಮನ್ನು ಬ್ರಾಹ್ಮಣ ನಾಯಕರೆಂದು ಬಿಂಬಿಸಿಕೊಂಡು ಬಂದರೇ ವಿನಾ ಲಿಂಗಾಯತ-ಒಕ್ಕಲಿಗ ಸಮಾಜದ ಸ್ವಾಮಿಗಳು ಹಾಗೂ ನಾಯಕರೊಂದಿಗೆ ಹೆಚ್ಚು ಬೆರೆತವರೇ ಅಲ್ಲ. ಆ ಸಮುದಾಯಗಳ ಮೇಲೆ ಪ್ರಭಾವ ಬೀರುವಷ್ಟು ಅವರು ಶಕ್ತರೂ ಆಗಿಲ್ಲ. ಇಬ್ಬರೂ ಒಂದು ಗುಂಪಿನ ನಾಯಕರಾಗಿದ್ದಾರೆ ಅಷ್ಟೆ.

ಇದರಿಂದಾಗಿ ರಾಜ್ಯ ಬಿಜೆಪಿ ಒಡೆದ ಮನೆ ಮಾತ್ರವಲ್ಲ, ಹಿರಿಯರಿಲ್ಲದ ಮನೆಯೂ ಆಗಿದೆ.



ಚುರುಮುರಿ



ಕೆಸರೊಳಗೆ ಕಾಲು

• ಸುಮಂಗಲಾ

‘2018ರಿಂದ ಈಗಿನವರೆಗೆ ಅಂದರೆ ಈ ಐದು ವರ್ಸದಾಗೆ ನಿನ್ನ ಆಸ್ತಿ ಎಷ್ಟ್ ಹೆಚ್ಚು ಆಗ್ಯೆತೆ’ ಬೆಕ್ಕಣ್ಣ ಬಲು ಗಂಭೀರವಾಗಿಯೇ ಕೇಳಿತು.

‘ಆಸ್ತಿ ಹೆಚ್ಚಾಗೂದು ಬಿಡು, ನನ್ನಂಥೋರು ಸಾಲಸೋಲ ಮಾಡದೇ, ಹಾಸಿಗೆ ಇದ್ದಷ್ಟು ಕಾಲುಚಾಚಿ ಬದುಕೋದೆ ದೊಡ್ಡದು’ ಎಂದೆ.

‘ನಮ್ ಬೊಮ್ಮಾಯಿ ಅಂಕಲ್ಲು ತಮ್ಮ ಆಸ್ತಿ ಐದು ವರ್ಸದ ಹಿಂದೆ ಹತ್ತು ಕೋಟಿ ಇದ್ದಿದ್ದು ಈಗ 29 ಕೋಟಿ ಆಗ್ಯೆತಂತ ಡಿಕ್ಲೇರ್ ಮಾಡ್ಯಾರ. ಅದಕ್ಕೇ ಕೇಳಿದೆ’ ಎಂದಿತು ಮುಗುಮ್ಮಾಗಿ.

‘ಅವರೊಬ್ಬರೇ ಅಲ್ಲಲೇ... ಈಗ ಚುನಾವಣೆಗೆ ನಿಂತ ಎಲ್ಲಾ ಅಭ್ಯರ್ಥಿಗಳ ಆಸ್ತಿ ಐದು ವರ್ಸದಾಗೆ ಎಷ್ಟ್ ಹೆಚ್ಚಾಗ್ಯೆತಿ ನೋಡು. ಹೋದ ಚುನಾವಣೆ ಟೈಮಿನಾಗೆ ಲಕ್ಷಾಧಿಪತಿ ಇದ್ದವರೂ ಈಗ ಕೋಟ್ಯಧಿಪತಿ ಆಗ್ಯಾರೆ’.

‘ನಮ್ಮ ಎಲ್ಲಾ ಶಾಸಕರು, ಮಂತ್ರಿಗಳು, ಮರಿಪುಢಾರಿಗಳು ಎಷ್ಟ್ ಕಷ್ಟಪಟ್ಟು ಹಗಲೂ ರಾತ್ರಿ ದುಡಿದು, ಐದೇ ವರ್ಸದಾಗೆ ಮೂರು-ನಾಕು ಪಟ್ಟು ಆಸ್ತಿ ಹೆಚ್ಚಿಸಿಗೋತಾರ. ನೀವು ಅದೀರಿ ಶ್ರೀಸಾಮಾನ್ಯರು, ಮೂರೂ ಹೊತ್ತು ರೊಕ್ಕ ಇಲ್ಲ ಅಂತ ಅಳೂದೆ ನಿಮ್ಮ ಹಣೇಬರಹ’ ಎಂದು ನನ್ನ ಮೂತಿಗೆ ತಿವಿಯಿತು.

‘ಅದೇ ನಾನೂ ಹೇಳದು... ಶ್ರೀಸಾಮಾನ್ಯರು ಬೆವರುಸುರಿಸಿ ಹಗಲೂರಾತ್ರಿ ದುಡಿದರೂ ರೊಕ್ಕ ಮಾಡಾಕೆ ಆಗಂಗಿಲ್ಲ. ಯಾಕಂದ್ರ ಈ ಎಲ್ಲಾ ರಾಜಕಾರಣಿಗಳ ಹಿತ್ತಿಲಿನಾಗೆ ಇರೋ ಮಾಡಾಳ್ ತಳಿ ಅಡಿಕೆಮರಗಳು ನಮ್ಮ ಬಳಿ ಇಲ್ಲ’.

‘ಕಮಲಕ್ಕನ ಮನಿಯವರು ನನಗೇ ಭ್ರಷ್ಟ ಅಂದರೆ, ಇಡೀ ಪ್ರಪಂಚದಾಗೆ ಇನ್ಯಾರೂ ಪ್ರಾಮಾಣಿಕರು ಇಲ್ಲ ಅಂತ ನಮ್ಮ ಕೇಜ್ರಿ ಅಂಕಲ್ಲು ಗುರುಗುಟ್ಟಿದಾರ. ನಮ್ಮ ಕೇಜ್ರಿ ಅಂಕಲ್ಲು ಒಬ್ಬರೇ ಮಾಡಾಳ್ ತಳಿ ಅಡಿಕೆಮರ ಬೆಳೆಸಿಲ್ಲ ಅಂತ ಕಾಣತೈತಿ’.

‘ಆಹಾ... ಬಾಯಿಮಾತಿನಾಗೆ ಎಲ್ಲರೂ ಪ್ರಾಮಾಣಿಕರೇ...’ ನಾನು ನಕ್ಕೆ.

‘ಹೌದೌದು... ಬಾಯಿಮಾತಿನಾಗೆ ಎಲ್ಲರೂ ಕೆಸರೇ ಅಂಟದ ಕಮಲಪತ್ರದ ಹಂಗೆ... ಆದರೆ ಎಲ್ಲರ ಕಾಲು ಮಾತ್ರ ಭ್ರಷ್ಟಾಚಾರದ ಕೆಸರೊಳಗೆ’ ಎಂದು ಬೆಕ್ಕಣ್ಣನೂ ಹ್ಹೆಹ್ಹೆಗುಟ್ಟಿತು!

ದಿನದ ಟ್ವೀಟ್

ಸಾಮಾನ್ಯರಿಗೆ ತೊಂದರೆಯಾಗದಿರಲಿ



ಚುನಾವಣಾ ಅಕ್ರಮ ತಡೆಯಲು ವಾಹನಗಳನ್ನು ಬಹುತೇಕ ಕಡೆ ತಪಾಸಣೆ ಮಾಡಲಾಗುತ್ತಿದೆ. ಕೋರ್ಟು, ಕಚೇರಿ ಇತರೆ ತುರ್ತು ಕೆಲಸಕ್ಕೆ ಹಣ ಒಯ್ಯುವವರು ಕೂಡಾ ಚುನಾವಣಾ ಸಿಬ್ಬಂದಿಯ ತೀಕ್ಷ್ಣ ಕಾರ್ಯಶೈಲಿಯಿಂದ ವಿಚಲಿತರಾಗುತ್ತಾರೆ. ಸಾಮಾನ್ಯರು ಯಾವ ಉದ್ದೇಶಕ್ಕಾಗಿ ಹಣ ಒಯ್ಯುತ್ತಿದ್ದಾರೆಂದು ಘೋಷಣೆ ಮಾಡಿ ನಿರಾಳವಾಗಿ ಸಾಗಲು ಅವಕಾಶ ನೀಡುವ ವ್ಯವಸ್ಥೆ ಪರಿಣಾಮಕಾರಿಯಾಗಿ ಜಾರಿಯಾಗಲಿ.

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ



ನಾನು, ಬಿಜೆಪಿಯ ಡಿಎನ್‌ಎ ಬಗ್ಗೆ ಹಿಂದೊಮ್ಮೆ ಮಾತನಾಡಿದ್ದೆ. ಬಿಜೆಪಿಯಲ್ಲಿ ಈಗ ನಡೆಯುತ್ತಿರುವ ಬೆಳವಣಿಗೆಗೆ ಅದು ಪೂರಕವಾಗಿದೆ ಎಂಬುದು ನನ್ನ ಅನಿಸಿಕೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 17-4-1998

• **ಪಟೇಲ್ ಸರ್ಕಾರ ಬದಲಾವಣೆ: ಶಾಸಕರಿಗೆ ಹೆಗಡೆ ಕರೆ**

ಬೆಂಗಳೂರು, ಏ. 16– ‘ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಆರಿಸಿ ಬರುವ ಆಸೆ ಇದ್ದರೆ, ಈ ಸರ್ಕಾರ ಇರಬೇಕೆ ಅಥವಾ ಬೇಡವೆ ಎಂಬುದನ್ನು ರಾಜ್ಯ ಜನತಾದಳ ಶಾಸಕರು ತಕ್ಷಣ ನಿರ್ಧರಿಸಬೇಕು’ ಎಂದು ಲೋಕಶಕ್ತಿ ರಾಷ್ಟ್ರೀಯ ಅಧ್ಯಕ್ಷ ಮತ್ತು ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಇಂದು ಕರೆ ನೀಡಿದರು.

ನಗರದಲ್ಲಿ ನಡೆದ ಲೋಕಶಕ್ತಿ ಕಾರ್ಯಕರ್ತರಿಗೆ ಕೃತಜ್ಞತಾ ಸಮರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು, ‘ಪಟೇಲ್ ಸರ್ಕಾರವನ್ನು ಬದಲಾಯಿಸುವ ಬೇಡಿಕೆ ಬರುತ್ತಲೇ ಇದೆ. ಆದರೆ ಶಾಸಕರು ಮನಸ್ಸು ಮಾಡದೆ ನಾನೇನು ಮಾಡಲು ಸಾಧ್ಯ?’ ಎಂದು ಪ್ರಶ್ನಿಸಿದರು.

• **ಕಾವೇರಿ: ಕೇಂದ್ರಕ್ಕೆ ರಾಜ್ಯದ ಪ್ರತಿಭಟನಾ ಪತ್ರ**

ಬೆಂಗಳೂರು, ಏ. 16– ಜಲ ವಿವಾದ ನ್ಯಾಯ ಮಂಡಲಿಯ ತೀರ್ಪು ಸುಪ್ರೀಂ ಕೋರ್ಟ್ ತೀರ್ಪಿನಷ್ಟೇ ಮಹತ್ವದ್ದು ಎಂಬ ಅಂಶ ಸೇರಿದಂತೆ ಅಂತರರಾಜ್ಯ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯಗಳಿಗೆ ಕರ್ನಾಟಕದ ಒಪ್ಪಿಗೆ ಇಲ್ಲ ಎಂದು ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಪ್ರತಿಭಟನಾ ಪತ್ರ ಬರೆದಿರುವುದಾಗಿ ವಿಧಾನಸಭೆಯಲ್ಲಿ ಇಂದು ಸರ್ಕಾರ ಸ್ಪಷ್ಟಪಡಿಸಿತು.

50 ವರ್ಷಗಳ ಹಿಂದೆ

ಮಂಗಳವಾರ, 17-4-1973

• **ರಾಜ್ಯ ಎಂ.ಪಿ.ಗಳಲ್ಲಿ ಭಿನ್ನಮತ: ಪ್ರಧಾನಿಗೆ ಬರಿಮಾತಿನ ದೂರು**

ನವದೆಹಲಿ, ಏ.16 – ಮೈಸೂರು ಸಚಿವ ಸಂಪುಟದ ವಿರುದ್ಧ ದೂರುಗಳ ಕಡೆಗೆ ತಾವು ಗಮನ ಕೊಡುವುದಾಗಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ರಾಜ್ಯದ ಕಾಂಗ್ರೆಸ್ ಸಂಸತ್ ಸದಸ್ಯರಿಗೆ ಭರವಸೆ ಕೊಟ್ಟು, ಅವರು ಪರಸ್ಪರ ‘ಎದುರು ಬದುರು’ ನಿಲ್ಲುವುದು ಕೂಡದೆಂದು ಸಲಹೆ ನೀಡಿದುದಾಗಿ ವರದಿಯಾಗಿದೆ.

ದೇವರಾಜ ಅರಸು ಸಂಪುಟದ ‘ವೈಫಲ್ಯಗಳು’ ಹಾಗೂ ಮೈಸೂರಿನಲ್ಲಿ ಪಕ್ಷದ ದಣಿಗಳ ವರ್ತನೆ ಕುರಿತು ಲಿಖಿತ ಮನವಿ ಪತ್ರವೊಂದನ್ನು ಸಲ್ಲಿಸುವ ವಿಷಯದಲ್ಲಿ ಈ ಮೊದಲು 180 ನಿಮಿಷ ಸೇರಿದ್ದ ತಮ್ಮ ಸಭೆಯಲ್ಲಿ ಆ ಸದಸ್ಯರು ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳಲಾಗದೆ ಒಂದು ರಾಜಿಗೆ ಬಂದು ಆಡಳಿತದ ಬಗೆಗೆ ರಾಜ್ಯದ ಜನರಲ್ಲಿ ವಿಶೇಷವಾಗಿ ಕಾಂಗ್ರೆಸ್‌ನವರಲ್ಲಿ ಬಹಳಷ್ಟು ಅಸಮಾಧಾನವಿದೆಯೆಂದು ಅವರಲ್ಲೊಬ್ಬರು ಪ್ರಧಾನಿಗೆ ಬಾಯಿ ಮಾತಿನಲ್ಲಿ ತಿಳಿಸಿದರು.

• **ವಿಷ ಬೆರೆತ ಕಳ್ಳಬಟ್ಟಿ ಕುಡಿದು ನಗರದಲ್ಲಿ 11 ಮಂದಿ ಮರಣ**

ಬೆಂಗಳೂರು, ಏ. 16– ಫ್ರೆಂಚ್ ಪಾಲಿಷ್ ಬೆರಕೆಯ ಕಳ್ಳಬಟ್ಟಿ ಸಾರಾಯಿ ಸೇವಿಸಿ ಮೂವರು ಮಹಿಳೆಯರು ಸೇರಿ ಒಟ್ಟು ಹನ್ನೊಂದು ಮಂದಿ ಸತ್ತು ಐವರು ಆಸ್ಪತ್ರೆ ಸೇರಿದ ದುರಂತ ನಗರದಲ್ಲಿ ನಡೆದಿದೆ.

ಸಂಗತ

ವಸ್ತ್ರಸಂಹಿತೆ: ನಡೆದಿದೆಯೇ ಸಂಶೋಧನೆ?

ವಸ್ತ್ರಸಂಹಿತೆ ಹೆಸರಿನಲ್ಲಿ ಸಂಕುಚಿತತೆ ಬಿತ್ತಲು ಉತ್ಸಾಹ ತೋರುವ ಅಗತ್ಯ ಇಲ್ಲ

• ಎಚ್.ಕೆ.ಶರತ್

ಮಕ್ಕಳ ಮನಸ್ಸಿನಲ್ಲಿ ಬೇರೂರಬಹುದಾದ ಸಂಕುಚಿತ ಆಲೋಚನೆಗಳನ್ನು ಕಿತ್ತೊಗೆದು ವಿಶಾಲ ದೃಷ್ಟಿಕೋನಕ್ಕೆ ನೆಲೆ ಕಲ್ಪಿಸುವುದು ಶಿಕ್ಷಣದ ಆದ್ಯತೆಯಾಗಬೇಕೊ ಅಥವಾ ಸಂಕುಚಿತ ದೃಷ್ಟಿಕೋನವೇ ಈ ಕಾಲಕ್ಕೂ ಸಲ್ಲಬೇಕಿರುವ ಮೌಲ್ಯವೆಂದು ತಿಳಿಹೇಳುವುದು ಮುಖ್ಯವಾಗಬೇಕೊ?

ಶಿಕ್ಷಕರ ಬೋಧನೆ ಮತ್ತು ಮಕ್ಕಳ ಕಲಿಕೆಯ ಗುಣಮಟ್ಟ ಸುಧಾರಿಸಲು ಏನು ಮಾಡಬೇಕು ಮತ್ತು ಏನೆಲ್ಲಾ ಮಾಡಬಾರದು ಎಂಬ ಕುರಿತು ಗಮನ ಕೇಂದ್ರೀಕರಿಸಬೇಕಿದ್ದ ಶೈಕ್ಷಣಿಕ ವಲಯವು ಇಂದಿಗೂ ಶಿಕ್ಷಕರು ಹಾಗೂ ಮಕ್ಕಳು ಯಾವ ಬಟ್ಟೆ ಧರಿಸಿ ತರಗತಿಗೆ ಬರಬೇಕು, ಯಾವುದನ್ನು ಧರಿಸಬಾರದು ಎಂಬ ಚರ್ಚೆಯಲ್ಲಿ ತೊಡಗುವುದು ವಿಪರ್ಯಾಸವಲ್ಲವೇ?


‘ಶಿಕ್ಷಕರಿಗೊಂದು ನೀತಿ ಸಂಹಿತೆ ಬೇಡವೇ?’ ಎಂಬ ಆರತಿ ಪಟ್ರಮೆ ಅವರ ಬರಹ (ಸಂಗತ, ಮಾರ್ಚ್ 15) ನಮ್ಮ ಶೈಕ್ಷಣಿಕ ವಲಯ ಮತ್ತು ಸಮಾಜ ಸಂಕುಚಿತ ಮನೋಭಾವವನ್ನೇ ಮೌಲ್ಯವೆಂದು ಪ್ರತಿಪಾದಿಸಲು ಹೇಗೆ ಹವಣಿಸುತ್ತಿದೆ ಎಂಬುದಕ್ಕೆ ನಿದರ್ಶನ. ಲೇಖನದಲ್ಲಿ ಒಂದೆಡೆ ‘ಜೀನ್ಸ್ ಪ್ಯಾಂಟ್, ಟಿ-ಶರ್ಟ್‌ನಲ್ಲಿ ಗುರುಗಳನ್ನು ಕಲ್ಪಿಸಿಕೊಳ್ಳಬಲ್ಲೆವೇ’ ಎನ್ನುವ ಪ್ರಶ್ನೆಯನ್ನು ಲೇಖಕಿ ಮುಂದಿಟ್ಟಿದ್ದಾರೆ. ಜೀನ್ಸ್ ಪ್ಯಾಂಟ್, ಟಿ-ಶರ್ಟ್ ಧರಿಸಿ ಬರುವವರನ್ನು ಶಿಕ್ಷಕರಾಗಿ ಪರಿಗಣಿಸಬಾರದೆನ್ನುವ ಅಭಿಪ್ರಾಯ ವಿದ್ಯಾರ್ಥಿ ಸಮೂಹದಲ್ಲಿ ನೆಲೆಯೂರಿದೆ ಎಂಬುದನ್ನು ಸಾಬೀತುಪಡಿಸುವ ಆಧಾರಗಳೇನಾದರೂ ಇವೆಯೇ? ಈ ಕುರಿತು ಯಾರಾದರೂ ಸಂಶೋಧನೆ ನಡೆಸಿ, ಅದರ ವಿವರಗಳನ್ನು ಯಾವುದಾದರೂ ಸಂಶೋಧನಾ ಪತ್ರಿಕೆಯಲ್ಲಿ ಅಂಕಿಅಂಶಗಳ ಸಮೇತ ಪ್ರಕಟಿಸಿದ್ದಾರೆಯೇ?

ಒಂದು ವೇಳೆ ಇಂತಹದ್ದೊಂದು ಅಭಿಪ್ರಾಯ ಕೆಲ ವಿದ್ಯಾರ್ಥಿಗಳಲ್ಲಿ ಮೂಡಿದ್ದರೆ, ಅವರಿಗೆ ತಿಳಿಹೇಳುವ ಕೆಲಸವನ್ನು ಶಿಕ್ಷಕರು ಮಾಡಬೇಕಲ್ಲವೇ? ಯಾರ ವ್ಯಕ್ತಿತ್ವವನ್ನೂ ಅವರು ಧರಿಸುವ ಬಟ್ಟೆಯ ಆಧಾರದಲ್ಲಿ ಅಳೆಯಬಾರದು ಎನ್ನುವ ತಿಳಿವಳಿಕೆ ಮೂಡಿಸುವುದು ಕೂಡ ನಮ್ಮ ಆದ್ಯತೆಯಾಗಬೇಕಲ್ಲವೇ? ಜೀನ್ಸ್ ಪ್ಯಾಂಟು, ಟಿ-ಶರ್ಟ್ ಇಂದಿಗೂ ನಮ್ಮದಲ್ಲದ ದಿರಿಸುಗಳಾಗಿ ಉಳಿದುಬಿಟ್ಟಿವೆಯೇ? ಪಾಶ್ಚಿಮಾತ್ಯ ದಿರಿಸು ಮತ್ತು ಸಂಸ್ಕೃತಿ ಎಂದು ಮೂರ್ನಾಲ್ಕು ದಶಕಗಳ ಹಿಂದೆ ಗುರುತಿಸುತ್ತಿದ್ದುದೆಲ್ಲ ಇಂದು ನಮ್ಮದೇ ಬದುಕಿನಲ್ಲಿ ಅಂತರ್ಗತವಾಗಿರುವುದನ್ನು ಒಪ್ಪಿಕೊಳ್ಳಲು ಏಕೆ ಹಿಂದೇಟು ಹಾಕಬೇಕು?

ಮನೆಯವರನ್ನೂ ಒಳಗೊಂಡಂತೆ ಸುತ್ತಮುತ್ತಲಿನ ಬಹುತೇಕ ಮಂದಿ ತೊಡುವ, ಎಲ್ಲೆಡೆ ಕಾಣಸಿಗುವ ಜೀನ್ಸ್ ಪ್ಯಾಂಟು, ಟಿ-ಶರ್ಟ್‌ನಂತಹ ದಿರಿಸುಗಳನ್ನು ಶಿಕ್ಷಕರು ಧರಿಸಿದ ಕೂಡಲೇ ವಿದ್ಯಾರ್ಥಿಗಳ ಪಾಲಿಗೆ ಸಮಸ್ಯಾತ್ಮಕವಾಗಲು ಹೇಗೆ ಸಾಧ್ಯ? ತಮ್ಮ ಅಗತ್ಯ ಮತ್ತು ಅಭಿರುಚಿಗೆ ಅನುಗುಣವಾಗಿ ಬಟ್ಟೆ ಧರಿಸುವ ಆಯ್ಕೆಯನ್ನು ಶಿಕ್ಷಕರು ಹಾಗೂ ವಿದ್ಯಾರ್ಥಿ ಸಮೂಹಕ್ಕೆ ನೀಡುವುದು ಆದ್ಯತೆಯಾಗಬೇಕೊ ಅಥವಾ ಇಂಥದ್ದನ್ನು ಧರಿಸಿದರೆ ಮಾತ್ರ ಶಿಕ್ಷಕರಾಗಲು ಅಥವಾ ವಿದ್ಯಾರ್ಥಿಯಾಗಲು ಯೋಗ್ಯ ಎನ್ನುವ ಸಂಕುಚಿತ ಮನೋಭಾವ ಬೆಳೆಸುವುದು ಗುರಿಯಾಗಬೇಕೊ?

ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಬೇರೆ ಬೇರೆ ಸಮವಸ್ತ್ರ ನಿಗದಿಪಡಿಸುವ ಅಗತ್ಯವೂ ಇಲ್ಲ ಎಂಬುದನ್ನು ಈಗಾಗಲೇ ಕೆಲವು ಶಾಲಾ-ಕಾಲೇಜುಗಳು ಮನಗಂಡು, ಅದನ್ನು ಅನುಷ್ಠಾನಕ್ಕೆ ತಂದಿವೆ. ಹುಡುಗಿಯರ ಶಾಲಾ-ಕಾಲೇಜು ಸಮವಸ್ತ್ರದಲ್ಲಿ ಪ್ಯಾಂಟು, ಶರ್ಟ್‌ಗೆ ಮನ್ನಣೆ ದೊರಕುತ್ತಿರುವ ಮತ್ತು ಅದನ್ನು ಎಲ್ಲರೂ ಸಹಜವೆಂದು ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಶಿಕ್ಷಕಿಯರು ಸೀರೆ ಧರಿಸಿದ್ದರೆ ಮಾತ್ರ ವೃತ್ತಿಘನತೆ ಎತ್ತಿ ಹಿಡಿಯಲು ಸಾಧ್ಯವೆನ್ನುವ ವಾದ ಮಂಡಿಸುವುದು ಹಾಸ್ಯಾಸ್ಪದವಾಗಿ ತೋರುವುದಿಲ್ಲವೇ?

ಎನ್‌ಪಿಟಿಇಎಲ್ (ನ್ಯಾಷನಲ್ ಪ್ರೋಗ್ರಾಂ ಆನ್ ಟೆಕ್ನಾಲಜಿ ಎನ್‌ಹ್ಯಾನ್ಸ್‌ಡ್ ಲರ್ನಿಂಗ್) ನಡೆಸಿದ ಪರೀಕ್ಷೆಯ ಪ್ರವೇಶ ಪತ್ರದಲ್ಲಿ ವಸ್ತ್ರಸಂಹಿತೆಗೆ ಸಂಬಂಧಿಸಿದ ಸೂಚನೆಯನ್ನು ಎದ್ದು ಕಾಣುವ ಹಾಗೆ ಮುದ್ರಿಸಲಾಗಿತ್ತು. ಅದು ಹೀಗಿತ್ತು: ‘ಪರೀಕ್ಷಾ ಕೇಂದ್ರಗಳು ವಸ್ತ್ರಸಂಹಿತೆಯ ನಿಯಮಾವಳಿಗಳನ್ನು ಹೊಂದಿರಬಹುದು. ಅಭ್ಯರ್ಥಿಗಳು ಆಯಾ ಪರೀಕ್ಷಾ ಕೇಂದ್ರ ನಿಗದಿಪಡಿಸಿದ ವಸ್ತ್ರಸಂಹಿತೆಯನ್ನು ಪಾಲಿಸಬೇಕಿರುವುದು ಅಪೇಕ್ಷಣೀಯ. ಪರೀಕ್ಷೆ ಬರೆಯಲು ಬರುವ ಅಭ್ಯರ್ಥಿಗಳು ವೃತ್ತಿಪರ ವಸ್ತ್ರ ಧರಿಸಬೇಕೆಂದು ನಾವು ಶಿಫಾರಸು ಮಾಡುತ್ತೇವೆ’.



ಆದರೆ ಯಾವೆಲ್ಲ ವಸ್ತ್ರಗಳನ್ನು ಪರೀಕ್ಷಾ ಕೇಂದ್ರಗಳು ವೃತ್ತಿಪರವೆಂದು ಪರಿಗಣಿಸುತ್ತವೆ ಎಂದು ಎಲ್ಲಿಯೂ ತಿಳಿಸಿರಲಿಲ್ಲ. ಪರೀಕ್ಷೆಗಳನ್ನು ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ವಿಷಯಾಸಕ್ತರು ಹೀಗೆ ಯಾರು ಬೇಕಾದರೂ ತೆಗೆದುಕೊಳ್ಳಲು ಅವಕಾಶವಿದೆ. ತಂತ್ರಜ್ಞಾನ ಒದಗಿಸಿರುವ ಅನುಕೂಲಗಳನ್ನು ಬಳಸಿಕೊಂಡು ಜ್ಞಾನ ಪಸರಿಸುವುದು ಹಾಗೂ ಹೊಸ ವಿಷಯಗಳ ಕಲಿಕೆಯನ್ನು ಉತ್ತೇಜಿಸುವುದು ಮುಖ್ಯ ಉದ್ದೇಶವಾಗಿರುವ ಎನ್‌ಪಿಟಿಇಎಲ್‌ಗೆ ಕೂಡ ಪರೀಕ್ಷೆ ಎದುರಿಸಲು ಬರುವವರು ಏನನ್ನು ಧರಿಸಿ ಬರುತ್ತಾರೆ ಎಂಬುದು ಮುಖ್ಯವಾಗುವುದು ವರ್ತಮಾನದ ವಿಪರ್ಯಾಸ.

ವಸ್ತ್ರಸಂಹಿತೆ ಕುರಿತ ಸಂಕುಚಿತ ಮನೋಭಾವವನ್ನು ಮೌಲ್ಯವೆಂದು ಪರಿಭಾವಿಸಿ, ವಿದ್ಯಾರ್ಥಿಗಳ ಮನದಲ್ಲೂ ಬೇರೂರಿಸುವುದರಿಂದ ನಮಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ಅವರಂತೆ ಮಾತನಾಡುವ ವ್ಯಕ್ತಿತ್ವಗಳನ್ನು ಅಣಿಗೊಳಿಸಲು ಸಾಧ್ಯವಾಗಬಹುದೇ ವಿನಾ, ಇದರಿಂದ ಕಲಿಕೆಯ ಗುಣಮಟ್ಟ ಸುಧಾರಿಸಲಾಗದು. ‘ಕೆಟ್ಟದಾಗಿ ಬಟ್ಟೆ ಧರಿಸುವ ಹುಡುಗಿಯರು ರಾಮಾಯಣದಲ್ಲಿ ಬರುವ ಶೂರ್ಪನಖಿ ರಾಕ್ಷಸಿಯ ಹಾಗೆ ಕಾಣುತ್ತಾರೆ’ ಎಂದು ವಿಜಯವರ್ಗೀಯ ಇತ್ತೀಚೆಗಷ್ಟೇ ಹೇಳಿದ್ದಾರೆ. ಹೀಗೆ ಮಾತನಾಡುವುದನ್ನು ಕಲಿಸುವುದು ಹಾಗೂ ಹುರಿದುಂಬಿಸುವುದು ಶಿಕ್ಷಣದ ಉದ್ದೇಶವಾಗಬೇಕೆ? ಇಲ್ಲವಾದಲ್ಲಿ ವಸ್ತ್ರಸಂಹಿತೆ ಹೆಸರಿನಲ್ಲಿ ಸಂಕುಚಿತತೆ ಬಿತ್ತಲು ಏಕೆ ಇನ್ನಿಲ್ಲದ ಉತ್ಸಾಹ?

ವಾಚಕರ ವಾಣಿ

ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಲಿ

ಯಾರಿಗಾದರೂ ಅನ್ಯಾಯವಾದಾಗ ಬಂಡಾಯವೇಳುವುದು ಸಹಜ ಧರ್ಮ. ಅದರಲ್ಲೂ ವಿಶೇಷವಾಗಿ ತಾವು ನಂಬಿ, ಪಾಲಿಸಿಕೊಂಡು ಬಂದಿರುವ ತತ್ವಗಳಿಗೆ ಮಾನ್ಯತೆ ದೊರೆಯದಿದ್ದಾಗ, ಆಕ್ರೋಶ ಹೊರಹಾಕುವುದು ಸಾಮಾನ್ಯ. ರಾಜಕಾರಣಿಗಳಂತೂ ತಮ್ಮ ಅಧಿಕಾರಕ್ಕೆ ಸಂಚಕಾರ ತರುವವರ ವಿರುದ್ಧ ಹರಿಹಾಯಲು ಕಾತರರಾಗಿರುತ್ತಾರೆ. ಈ ದಿಸೆಯಲ್ಲಿ ಜಗದೀಶ ಶೆಟ್ಟರ್ ಅವರು ಬಂಡಾಯ ಎದ್ದಿರುವುದು ಅವರ ನಂಬಿಕೆಗೆ ಅನುಗುಣವಾಗಿರಬಹುದು.

ಆದರೆ, ಅವರು ಹಾಗೂ ಅವರಂತಹ ರಾಜಕಾರಣಿಗಳ ಬಗ್ಗೆ ನನ್ನ ತಕರಾರು ಏನೆಂದರೆ, ಮಾತೃ ಪಕ್ಷಕ್ಕೆ ರಾಜೀನಾಮೆ ನೀಡಿ, ತಮ್ಮ ನಿಲುವಿಗೆ ವಿರುದ್ಧವಾದ ಮತ್ತೊಂದು ಪಕ್ಷಕ್ಕೆ ಸೇರುವುದು ಇಲ್ಲವೇ ಅದರೊಂದಿಗೆ ಗುರುತಿಸಿಕೊಳ್ಳುವುದು ಎಷ್ಟು ಸರಿ? ಶೆಟ್ಟರ್ ಅವರು ಕಾಂಗ್ರೆಸ್ ಸೇರಬಹುದು ಎಂಬ ಮಾತು ಕೇಳಿಬಂದಿದೆ. ಈ ಸುದ್ದಿ ನಿಜವೇ ಆಗಿದ್ದರೆ ಇಲ್ಲೊಂದು ಪ್ರಶ್ನೆ ಏಳುತ್ತದೆ. ಸುಮಾರು ನಲವತ್ತು ವರ್ಷಗಳಿಂದ ವಿರೋಧಿಸಿಕೊಂಡು ಬಂದಿರುವ ಕಾಂಗ್ರೆಸ್ ಪಕ್ಷದ ಬಗ್ಗೆ ಇದ್ದಕ್ಕಿದ್ದಂತೆ ಒಲವು ತೋರುವುದೆಂದರೆ, ಅದು ಅವರ ನಂಬಿಕೆಗೆ ಅನುಗುಣವಾಗಿರುತ್ತದೆಯೇ? ಬದ್ಧತೆಯ ತತ್‌ಕ್ಷಣದ ಈ ಬದಲಾವಣೆ ಯಾವ ರೀತಿಯಲ್ಲಿ ಸಮರ್ಥನೀಯ? ಇದೇನೇ ಇವರ ಸಿದ್ಧಾಂತ ನಿಷ್ಠೆ ಮತ್ತು ಪ್ರಾಮಾಣಿಕತೆ? ತಮ್ಮ ಆತ್ಮಸಾಕ್ಷಿಯನ್ನು ತಾವೇ ಪ್ರಶ್ನಿಸಿಕೊಳ್ಳಲಿ.

ಪ್ರೊ.ಎಂ.ಎಸ್.ರಘುನಾಥ್, ಬೆಂಗಳೂರು

ಎಲ್ಲೆಡೆ ಕಾಂಚಾಣದ ಕುಣಿತ

ರಾಜ್ಯ ವಿಧಾನಸಭಾ ಚುನಾವಣೆಯ ರೀತಿನೀತಿ ಗಮನಿಸಿದರೆ ಕಾಂಚಾಣದ ಕುಣಿತ ಎಲ್ಲೆಡೆಯೂ ಜೋರು ಪಡೆದಿರುವಂತೆ ಭಾಸವಾಗುತ್ತದೆ. ಕೊರೊನಾ ತೀವ್ರವಾಗಿ ಬಾಧಿಸಿದ ಸಂದರ್ಭದಲ್ಲಿ ಜನರ ಕಷ್ಟಗಳಿಗೆ ಬೆನ್ನು ತಿರುಗಿಸಿದ ಸ್ಪರ್ಧಾ ಆಕಾಂಕ್ಷಿಗಳು ಈಗ ಎಲ್ಲೆಡೆ ಹಾದಿಬೀದಿಯಲ್ಲಿ ಭರವಸೆಗಳ ಮಳೆ ಸುರಿಸುತ್ತಿದ್ದಾರೆ. ಗೆದ್ದು ಬಂದರೆ ಸಹಾಯಹಸ್ತ ಚಾಚುವ ವಾಗ್ದಾನ ಮಾಡುತ್ತಿದ್ದಾರೆ. ಎಲ್ಲೆಲ್ಲೂ ಹಣದ ಹೊಳೆ ಹರಿಯುತ್ತಿದೆ. ಇದನ್ನು ನೋಡಿದರೆ ಜನರ ಮನಃಸ್ಥಿತಿಯ ಬಗ್ಗೆ ಬೇಸರವೆನಿಸುತ್ತದೆ.

ಚುನಾವಣೆಯಲ್ಲಿ ಹಣಬಲದಿಂದ ಗೆದ್ದು ಬಂದ ಅಭ್ಯರ್ಥಿ, ಆ ಬಳಿಕ ಜನರ ಕಷ್ಟಗಳಿಗೆ ಮಿಡಿಯುವರೇ? ಮತದಾರರ ಬಗ್ಗೆ ಜನಪ್ರತಿನಿಧಿಗೆ ಇರಬೇಕಾದ ಗೌರವ ಉಳಿಯಲು ಸಾಧ್ಯವೇ? ಜನತಂತ್ರವನ್ನು ಬಲಪಡಿಸುವ ಉದ್ದೇಶ ಇದ್ದರೆ ಮೊದಲು ಮತದ ಮೌಲ್ಯ ಅರಿಯಬೇಕು. ಆಮಿಷಗಳಿಗೆ ಒಳಗಾಗುವುದನ್ನು ಬಿಡಬೇಕು.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಮಿತಿ ಹೇರುವ ಅಗತ್ಯ ಇದೆ

ಬಿಜೆಪಿಯು ಪ್ರಸಕ್ತ ವಿಧಾನಸಭೆ ಚುನಾವಣೆಯಲ್ಲಿ ಕೆಲವು ಹಿರಿಯ ತಲೆಗಳನ್ನು ಬದಿಗೆ ಸರಿಸಿ ಬೇರೆಯವರಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸುತ್ತಿದೆ ಎಂದು ಹೇಳಲಾಗಿದೆ. ಶಾಸಕರು ಮತ್ತು ಸಂಸದರಾಗಲು ಕನಿಷ್ಠ ವಯೋಮಿತಿಯನ್ನು ನಿಗದಿಪಡಿಸಲಾಗಿದೆ. ಆದರೆ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸಲಾಗಿಲ್ಲ ಮತ್ತು ಅವಧಿಗೆ ಸಂಬಂಧಿಸಿದಂತೆ ಗರಿಷ್ಠ ಆಯ್ಕೆಯ ಮಿತಿಯನ್ನೂ ನಿಗದಿಪಡಿಸಿಲ್ಲ. ಹೀಗಾಗಿ ಬಹಳಷ್ಟು ಶಾಸಕರು ಮತ್ತು ಸಂಸದರು ಇದರ ಲಾಭ ಪಡೆಯುತ್ತಿದ್ದಾರೆ. ಪದೇ ಪದೇ ಅವರೇ ಸ್ಪರ್ಧಿಸುತ್ತಿದ್ದಾರೆ. ಅವರ ನಂತರ ಅವರ ಕುಟುಂಬದ ಇತರ ಸದಸ್ಯರು ಆರಿಸಿ ಬರುವಂಥ ಸ್ಥಿತಿ ಇದೆ. ಇದರಿಂದಾಗಿ ವಂಶಾಡಳಿತ, ಕೌಟುಂಬಿಕ ರಾಜಕಾರಣಕ್ಕೆ ಅವಕಾಶವಾಗಿದೆ. ಕೆಲವು ಕಡೆ ಅದು ರಾಜಕೀಯ ಪಾಳೆಗಾರಿಕೆ ಮಟ್ಟಕ್ಕೆ ಇಳಿದಿದೆ. ಅದರಿಂದಾಗಿ ಪಟ್ಟಭದ್ರ ಹಿತಾಸಕ್ತಿಗಳು ಬೆಳೆದು ಪ್ರಜಾಪ್ರಭುತ್ವದ ನೈಜ ಆಶಯಗಳು ನೇಪಥ್ಯಕ್ಕೆ ಸರಿಯುತ್ತಿವೆ.

ಹೀಗಾಗಿ ಯುವಕರಿಗೆ, ಹೊಸಬರಿಗೆ, ಸಜ್ಜನರಿಗೆ ಅವಕಾಶ ಸಿಗದೇ, ಶಾಸಕರು ಮತ್ತು ಸಂಸದರ ಆಯ್ಕೆಯಲ್ಲಿ ಸಾರ್ವಜನಿಕ ಸೇವೆಗಿಂತ ಇತರೆ ಹಿತಾಸಕ್ತಿಗಳು ಮುಂಚೂಣಿಗೆ ಬರುತ್ತಿವೆ. ಕಾರ್ಯಾಂಗ ಮತ್ತು ನ್ಯಾಯಾಂಗದಲ್ಲಿ ಕಾರ್ಯನಿರ್ವಹಿಸುವವರಿಗೆ ಸಂವಿಧಾನದಲ್ಲಿ ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸಿ, ಶಾಸಕಾಂಗದ ಜನಪ್ರತಿನಿಧಿಗಳಿಗೆ ಗರಿಷ್ಠ ವಯೋಮಿತಿ, ಅವಧಿಯ ಆಯ್ಕೆ ಮಿತಿಯನ್ನು ನಿಗದಿಪಡಿಸದೆ ಇರುವುದು, ಪ್ರಜಾಪ್ರಭುತ್ವ ಬಲಗೊಳ್ಳುವ ದಿಶೆಯಲ್ಲಿ ಮುಖ್ಯ ತೊಡಕಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಸಂವಿಧಾನ ತಿದ್ದುಪಡಿ ಮೂಲಕ ಶಾಸಕರು ಮತ್ತು ಸಂಸದರ ಸ್ಥಾನಕ್ಕೆ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸುವುದಲ್ಲದೆ, ಚುನಾಯಿತ ಅವಧಿಗೆ ಸಹ ಮಿತಿ ಹೇರುವ ಅವಶ್ಯಕತೆ ಇದೆ. ಕೆಲವು ದೇಶಗಳಲ್ಲಿ ಈ ಕ್ರಮ ಜಾರಿಯಲ್ಲಿದೆ. ಆದರೆ ನಮ್ಮಲ್ಲಿ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು?

ವೆಂಕಟೇಶ ಮಾಚಕನೂರ, ಧಾರವಾಡ

ಕನ್ನಡದಲ್ಲೂ ಪರೀಕ್ಷೆ: ಸ್ವಾಗತಾರ್ಹ ನಡೆ

ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ವಿವಿಧ ಹುದ್ದೆಗಳ ಭರ್ತಿಗಾಗಿ ನಡೆಸುವ ಪರೀಕ್ಷೆಗಳನ್ನು ಹಿಂದಿ, ಇಂಗ್ಲಿಷ್ ಮಾತ್ರವಲ್ಲದೆ ಕನ್ನಡ, ಕೊಂಕಣಿ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲೂ ನಡೆಸಲು ನಿರ್ಧರಿಸಿರುವುದು ಸ್ವಾಗತಾರ್ಹ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ನಮ್ಮ ರಾಜ್ಯದ ವಿರೋಧ ಪಕ್ಷಗಳ ಮುಖಂಡರು ಧ್ವನಿ ಎತ್ತಿದ್ದರ ಫಲ ಇದು. ವಿರೋಧ ಪಕ್ಷಗಳ ಮುಖಂಡರ ಆಗ್ರಹಕ್ಕೆ ಸ್ಪಂದಿಸಿದ ಕೇಂದ್ರ ಗೃಹ ಸಚಿವಾಲಯದ ನಡೆ ಮೆಚ್ಚುಗೆಗೆ ಅರ್ಹ.

ಈ ಕೆಲಸ ಎಂದೋ ಆಗಬೇಕಿತ್ತು. ತಡವಾಗಿಯಾದರೂ ಈಗ ಜಾರಿಗೆ ಬರಲಿದೆ ಎಂಬುದು ಸಂತಸದ ಸಂಗತಿ. ಕೇಂದ್ರ ಸರ್ಕಾರದ ನೇಮಕಾತಿ ಪರೀಕ್ಷೆಗಳಲ್ಲಿ ಹಿಂದಿಗೆ ವಿಶೇಷ ಮಹತ್ವ ನೀಡುವ ಅಗತ್ಯ ಇಲ್ಲ. ಎಲ್ಲ ರಾಜ್ಯ ಭಾಷೆಗಳಿಗೂ ಸಮಾನ ಅವಕಾಶ ಇರಬೇಕಾದುದು ಅಗತ್ಯ.

ಎ.ಎಂ.ಶ್ರೀನಿವಾಸ್, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉತ್ತರ ಪ್ರದೇಶದಲ್ಲಿ ಎನ್‌ಕೌಂಟರ್ ಹತ್ಯೆ ಪರ್ವ



ಈಚೆಗೆ ನಡೆದ ಸಾಲು ಸಾಲು ಪೊಲೀಸ್ ಎನ್‌ಕೌಂಟರ್ ಹತ್ಯೆಗಳು ಮತ್ತು ಶೂಟೌಟ್ ಪ್ರಕರಣಗಳ ಕಾರಣದಿಂದ ಉತ್ತರ ಪ್ರದೇಶ ಹೆಚ್ಚು ಸುದ್ದಿಯಲ್ಲಿದೆ. ಈ ಹತ್ಯೆಗಳನ್ನು ಉತ್ತರ ಪ್ರದೇಶ ಸರ್ಕಾರವು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು 'ನೀವು ಅಪರಾಧ ಮಾಡಿದರೆ, ನಿಮ್ಮನ್ನು ಹೊಡೆದು ಹಾಕುತ್ತೇವೆ' ಎಂದು ಸಾರ್ವಜನಿಕವಾಗಿಯೇ ಹಲವು ಬಾರಿ ಹೇಳಿದ್ದಾರೆ. ಇವೆಲ್ಲಾ ನಕಲಿ ಎನ್‌ಕೌಂಟರ್‌ಗಳು. ಆತ್ಮರಕ್ಷಣೆ ಹೆಸರಿನಲ್ಲಿ ಸರ್ಕಾರವು ಒಂದು ಸಮುದಾಯದ ಜನರನ್ನೇ ಗುರಿ ಮಾಡಿಕೊಂಡು ಕೊಲ್ಲುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಎನ್‌ಕೌಂಟರ್ ಹತ್ಯೆ ಪ್ರಕರಣಗಳಲ್ಲಿ ಉತ್ತರ ಪ್ರದೇಶ ಸರ್ಕಾರವು ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ ಎಂಬುದನ್ನು ಕೇಂದ್ರ ಸರ್ಕಾರದ ವರದಿಗಳೇ ಹೇಳುತ್ತವೆ

ಪ್ರಜಾವಾಣಿ ವಾರ್ತೆ

ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ ಅವರ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರದ ಆರು ವರ್ಷಗಳಲ್ಲಿ ಪೊಲೀಸ್ ಎನ್‌ಕೌಂಟರ್‌ಗಳಲ್ಲಿ 183 ಜನರನ್ನು ಕೊಲ್ಲಲಾಗಿದೆ ಎಂದು ಅಲ್ಲಿನ ಪೊಲೀಸ್ ಇಲಾಖೆಯೇ ಹೇಳಿಕೊಂಡಿದೆ. ದೇಶದ ಬೇರೆ ಯಾವುದೇ ರಾಜ್ಯದಲ್ಲೂ ನಡೆಯದಷ್ಟು ಎನ್‌ಕೌಂಟರ್ ಹತ್ಯೆಗಳು ಉತ್ತರ ಪ್ರದೇಶದಲ್ಲಿ ನಡೆದಿವೆ. ಛತ್ತೀಸಗಡದಲ್ಲಿ ಹೆಚ್ಚು ಎನ್‌ಕೌಂಟರ್ ಹತ್ಯೆಗಳು ನಡೆದರೂ ಅವುಗಳಲ್ಲಿ ಹೆಚ್ಚಿನವು ನಕ್ಸಲ್ ಚಟುವಟಿಕೆಗೆ ಸಂಬಂಧಿಸಿದ್ದಾಗಿವೆ. ಆದರೆ, ಅಪರಾಧಿಗಳು ಮತ್ತು ಕ್ರಿಮಿನಲ್ ಆರೋಪಿಗಳನ್ನು ಗುಂಡು ಹಾರಿಸಿ ಕೊಂದ ಪ್ರಕರಣಗಳು ಉತ್ತರ ಪ್ರದೇಶದಲ್ಲೇ ಹೆಚ್ಚು.

2017ರಲ್ಲಿ ಅಧಿಕಾರಕ್ಕೆ ಬಂದ ನಂತರ ಯೋಗಿ ಆದಿತ್ಯನಾಥ ಅವರು, ಅಪರಾಧಿಗಳ ನಿರ್ಮೂಲನೆಗೆ ಕರೆ ನೀಡಿದ್ದರು. ಅದರ ಬೆನ್ನಲ್ಲೇ ಕ್ರಿಮಿನಲ್‌ಗಳ, ಗೂಂಡಾ ಪಟ್ಟಿಯಲ್ಲಿರುವವರ, ಗ್ಯಾಂಗ್‌ಸ್ಟರ್‌ಗಳ ಎನ್‌ಕೌಂಟರ್ ಹತ್ಯೆ ಕಾರ್ಯಾಚರಣೆ ಆರಂಭವಾಗಿದ್ದವು. 2017ರೊಂದರಲ್ಲೇ ಈ ರೀತಿ 44 ಜನರನ್ನು ಪೊಲೀಸರು ಹತ್ಯೆ ಮಾಡಿದ್ದರು. ಪೊಲೀಸರ ಗುಂಡಿಗೆ ಬಲಿಯಾದವರಲ್ಲಿ ಮುಸ್ಲಿಮರ ಸಂಖ್ಯೆಯೇ ಹೆಚ್ಚು ಎಂಬುದು ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜವಾದಿ ಪಕ್ಷದ ಆರೋಪವಾಗಿತ್ತು. ನಂತರದ ವರ್ಷಗಳಲ್ಲೂ ಇಂತಹ ಹತ್ಯೆಗಳು ಪದೇ ಪದೇ ನಡೆದವು. ಪ್ರತೀ ಬಾರಿ ಇಂತಹ ಹತ್ಯೆ ನಡೆದಾಗಲೂ ನಕಲಿ ಎನ್‌ಕೌಂಟರ್‌ನ ಆರೋಪ ಕೇಳಿಬರುತ್ತಿತ್ತು. ಎನ್‌ಕೌಂಟರ್ ಹತ್ಯೆಗಳನ್ನು ಸರ್ಕಾರವು ಸಮರ್ಥಿಸಿಕೊಳ್ಳುತ್ತಿತ್ತು.

ಅಪರಾಧಿಗಳು ಅಥವಾ ಆರೋಪಿಗಳು ತಮ್ಮ ಮೇಲೆ ದಾಳಿ ನಡೆಸಿದಾಗ, ಪೊಲೀಸರು ಆತ್ಮರಕ್ಷಣೆಗಾಗಿ ಮಾತ್ರ ಗುಂಡು ಹಾರಿಸಲು ಕಾನೂನಿನಲ್ಲಿ ಅವಕಾಶವಿದೆ.



ಅತೀಕ್ ಅಹ್ಮದ್ ಮಗ ಅಸಾದ್ ಹಾಗೂ ಆತನ ಸಹಚರನನ್ನು ಪೊಲೀಸರು ಎನ್‌ಕೌಂಟರ್‌ನಲ್ಲಿ ಕಳೆದವಾರ ಕೊಂದಿದ್ದರು

ಆತ್ಮರಕ್ಷಣೆಗಾಗಿಯೇ ಪೊಲೀಸರು ಗುಂಡು ಹಾರಿಸಿದ್ದರೆ, ಕಾನೂನು ಕ್ರಮ ಅಥವಾ ಶಿಕ್ಷೆಯಿಂದ ಪೊಲೀಸರಿಗೆ ರಕ್ಷಣೆ ಸಿಗಲಿದೆ. ಇಲ್ಲದಿದ್ದರೆ, ಪೊಲೀಸರಿಗೂ ಶಿಕ್ಷೆಯಾಗಲಿದೆ. ಆದರೆ, ಉತ್ತರ ಪ್ರದೇಶ ಸರ್ಕಾರವೇ ಅಪರಾಧಿಗಳನ್ನು ಹೊಡೆದುಹಾಕಿ ಎಂದು ಹಲವು ಬಾರಿ ಕರೆ ಕೊಟ್ಟಿದೆ. ಈ ರೀತಿ ಎನ್‌ಕೌಂಟರ್‌ಗೆ ಕರೆ ನೀಡುವುದು ಕಾನೂನು ಬಾಹಿರ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಸಚಿವ ಕೇಶವ ಪ್ರಸಾದ್ ಮೌರ್ಯ ಸೇರಿ ಹಲವರು ಇಂತಹ ಕರೆ ನೀಡಿದ್ದಾರೆ. ಕಳೆದ ವಾರವಷ್ಟೇ ಯೋಗಿ, 'ಎನ್‌ಕೌಂಟರ್ ಹೆಸರು ಕೇಳಿದರೆ ಅಪರಾಧಿಗಳ ಪ್ಯಾಂಟ್ ಒದ್ದೆಯಾಗುತ್ತದೆ' ಎಂದಿದ್ದರು.

ಎನ್‌ಕೌಂಟರ್ ಹತ್ಯೆಗಳು ನಡೆದ ತಕ್ಷಣ ಆ ಸಂಬಂಧ ಎಫ್‌ಐಆರ್ ದಾಖಲಿಸಬೇಕು ಮತ್ತು ತನಿಖೆ ನಡೆಸಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಮಾರ್ಗಸೂಚಿಗಳು ಹೇಳುತ್ತವೆ. ಎನ್‌ಕೌಂಟರ್‌ಗಳು ನಡೆದ 48 ಗಂಟೆಗಳ ಒಳಗೆ ಆಯೋಗಕ್ಕೆ ಆ ಬಗ್ಗೆ ಮಾಹಿತಿ ನೀಡಬೇಕು. ಮೂರು ತಿಂಗಳ ಒಳಗೆ ತನಿಖಾ ವರದಿಗಳು, ವಿಧಿವಿಜ್ಞಾನ ಪರೀಕ್ಷೆಯ ವರದಿಗಳನ್ನು ಆಯೋಗಕ್ಕೆ ಸಲ್ಲಿಸಬೇಕು. ಪೊಲೀಸರಿಂದ ಲೋಪವಾಗಿದ್ದರೆ, ಅವರಿಗೆ ಶಿಕ್ಷೆಯಾಗಬೇಕು. ಹತನಾದ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಮಾರ್ಗಸೂಚಿಗಳು ಹೇಳುತ್ತವೆ. ಆದರೆ, ಉತ್ತರ ಪ್ರದೇಶ ಸರ್ಕಾರವು ಈ ಮಾರ್ಗಸೂಚಿಗಳನ್ನು ಪೂರ್ಣಪ್ರಮಾಣದಲ್ಲಿ ಪಾಲಿಸುತ್ತಿಲ್ಲ ಎಂಬುದರತ್ತ ದಾಖಲೆಪತ್ರಗಳು ಬೊಟ್ಟುಮಾಡಿ ಹೇಳುತ್ತವೆ.

ಉತ್ತರ ಪ್ರದೇಶದಲ್ಲಿ ನಡೆದ 183 ಎನ್‌ಕೌಂಟರ್‌ಗಳಲ್ಲಿ ಎಲ್ಲವನ್ನೂ ಆಯೋಗದ ಗಮನಕ್ಕೆ ತಂದಿಲ್ಲ. 2017ರಿಂದ 2022ರ ಮಾರ್ಚ್‌ವರೆಗೆ ನಡೆದ ಎನ್‌ಕೌಂಟರ್‌ಗಳಲ್ಲಿ 117 ಪ್ರಕರಣಗಳನ್ನಷ್ಟೇ ಉತ್ತರ ಪ್ರದೇಶ ಸರ್ಕಾರವು ಆಯೋಗದ ಗಮನಕ್ಕೆ ತಂದಿದೆ. ಅನಂತರದ ಎನ್‌ಕೌಂಟರ್ ಹತ್ಯೆಗಳನ್ನು ಆಯೋಗದ ಗಮನಕ್ಕೆ ತಂದ ಬಗ್ಗೆ ಮಾಹಿತಿ ಲಭ್ಯವಿಲ್ಲ. ಈ ಪ್ರಕರಣಗಳಲ್ಲಿ 75 ಪ್ರಕರಣಗಳನ್ನಷ್ಟೇ ಇತ್ಯರ್ಥಪಡಿಸಲಾಗಿದೆ. ಉಳಿದ ಪ್ರಕರಣಗಳು ಇನ್ನೂ ಇತ್ಯರ್ಥವೇ ಆಗಿಲ್ಲ. ಅಂದರೆ, ಈ ಪ್ರಕರಣಗಳಲ್ಲಿ ಪೊಲೀಸರು ನಿಜವಾಗಿಯೂ ಆತ್ಮರಕ್ಷಣೆಗಾಗಿ ಎನ್‌ಕೌಂಟರ್ ಹತ್ಯೆಗಳನ್ನು ನಡೆಸಿದ್ದಾರೆ ಎಂಬುದು ಇನ್ನೂ ಸಾಬೀತಾಗಿಲ್ಲ. ಆದರೆ, 2022ರ ಮಾರ್ಚ್ ನಂತರವೂ ಈವರೆಗೆ ಮತ್ತೆ ಎನ್‌ಕೌಂಟರ್ ಮೂಲಕ 66 ಜನರನ್ನು ಉತ್ತರ ಪ್ರದೇಶ ಪೊಲೀಸರು ಹತ್ಯೆ ಮಾಡಿದ್ದಾರೆ. ಎನ್‌ಕೌಂಟರ್ ಹತ್ಯೆಗಳನ್ನು ರಾಜ್ಯ ಸರ್ಕಾರವು ಸಮರ್ಥಿಸಿಕೊಳ್ಳುತ್ತಲೇ ಇದೆ. ಉತ್ತರ ಪ್ರದೇಶದಲ್ಲಿ ಅಪಾರಾಧ ಕೃತ್ಯಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ.

ಹೆಚ್ಚಿದ ಅಪರಾಧ ಕೃತ್ಯಗಳು

ಅಪರಾಧಿಗಳನ್ನು ಸದೆಬಡಿಯುವ ಮೂಲಕ ರಾಜ್ಯದಲ್ಲಿ ಅಪರಾಧ ಕೃತ್ಯಗಳನ್ನು ನಿಯಂತ್ರಿಸುತ್ತೇವೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು **2017**ರ ಏಪ್ರಿಲ್‌ನಲ್ಲಿ ಹೇಳಿದ್ದರು. ಉತ್ತರ ಪ್ರದೇಶದ ಹಲವು ಸಚಿವರು ಮತ್ತು ಬಿಜೆಪಿ ನಾಯಕರೂ ಇದೇ ಮಾತನ್ನು ಹಲವು ಬಾರಿ ಹೇಳಿದ್ದಾರೆ. ಆದರೆ, ಯೋಗಿ ಆದಿತ್ಯನಾಥ ಅವರ ಸರ್ಕಾರ ಬಂದ ಮೇಲೆ ರಾಜ್ಯದಲ್ಲಿ ನಡೆದ ಅಪರಾಧ ಕೃತ್ಯಗಳ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. **2016**ರಲ್ಲಿ ರಾಜ್ಯದಾದ್ಯಂತ ಒಟ್ಟು **2.82** ಲಕ್ಷ ಅಪರಾಧ ಕೃತ್ಯಗಳು ದಾಖಲಾಗಿದ್ದವು. **2021**ರಲ್ಲಿ ರಾಜ್ಯದಲ್ಲಿ ದಾಖಲಾದ ಅಪರಾಧ ಕೃತ್ಯಗಳ ಸಂಖ್ಯೆ **3.57** ಲಕ್ಷಕ್ಕೆ ಏರಿಕೆಯಾಗಿದೆ.



ಗುಂಡಿನ ದಾಳಿ ಪ್ರಕರಣ: ತಾಳೆಯಾಗದ ಸರ್ಕಾರ ದತ್ತಾಂಶ

2017ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಪೊಲೀಸ್ ಗುಂಡಿನ ದಾಳಿಯ (ಎನ್‌ಕೌಂಟರ್) 10,900 ಘಟನೆಗಳು ನಡೆದಿವೆ ಎಂದು ಉತ್ತರ ಪ್ರದೇಶ ಸರ್ಕಾರ ಮಾಹಿತಿ ನೀಡಿದೆ. ಇಷ್ಟು ದೊಡ್ಡ ಮಟ್ಟದ ಗುಂಡಿನ ದಾಳಿಗಳು ನಡೆಯುತ್ತಿದ್ದರೂ ಅವು ವರದಿಯಾಗುತ್ತಿಲ್ಲ ಎಂಬುದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿಗಳಿಂದ ತಿಳಿದುಬರುತ್ತದೆ. ಸರ್ಕಾರವು ನೀಡಿರುವ ಅಂಕಿ–ಅಂಶಗಳಿಗೂ, ಎನ್‌ಸಿಆರ್‌ಬಿಗೆ ಅದೇ ಸರ್ಕಾರ ನೀಡುವ ಅಂಕಿ–ಅಂಶಗಳಿಗೂ ತಾಳೆಯಾಗುವುದಿಲ್ಲ. 2017ರಿಂದ ಪ್ರತೀ ವರ್ಷ ಸರಿಸುಮಾರು 1,800 ಗುಂಡಿನ ಚಕಮಕಿಗಳು ನಡೆದಿವೆ. ಆದರೆ ಪ್ರತೀ ವರ್ಷದ ಎನ್‌ಸಿಆರ್‌ಬಿ ದಾಖಲೆಗಳನ್ನು ಗಮನಿಸಿದರೆ, ಬೆರಳಣಿಕೆಯಷ್ಟು ಪ್ರಕರಣಗಳು ಮಾತ್ರ ಕಾಣಸಿಗುತ್ತವೆ.

2017 ಹಾಗೂ 2018ರಲ್ಲಿ ರಾಜ್ಯದಲ್ಲಿ ಪೊಲೀಸ್ ಎನ್‌ಕೌಂಟರ್‌ನ ಒಂದೇ ಒಂದು ಪ್ರಕರಣ ದಾಖಲಾಗಿಲ್ಲ ಎಂದು ಎನ್‌ಸಿಆರ್‌ಬಿ ವರದಿಗಳು ಹೇಳುತ್ತವೆ. 2019ರಲ್ಲಿ ಇಂತಹ ಎರಡು ಪ್ರಕರಣಗಳು ಮಾತ್ರ ವರದಿಯಾಗಿವೆ. 2020ರ ಎನ್‌ಸಿಆರ್‌ಬಿ ವರದಿಯಲ್ಲಿ ಒಂದೇ ಒಂದು ಪ್ರಕರಣವನ್ನು ಉಲ್ಲೇಖಿಸಲಾಗಿದೆ. 2021ರ ವರದಿಯಲ್ಲಿ ಮಾತ್ರ 11 ಪ್ರಕರಣಗಳನ್ನು ಉಲ್ಲೇಖಿಸಲಾಗಿದೆ. 2022ರ ವರದಿ ಇನ್ನೂ ಬಿಡುಗಡೆಯಾಗಿಲ್ಲ. ವರ್ಷಕ್ಕೆ ಸರಾಸರಿ 1,800 ಪ್ರಕರಣಗಳು ನಡೆದಿವೆ ಎಂದು ಹೇಳುವ ಸರ್ಕಾರವೇ, ಅವುಗಳ ಮಾಹಿತಿಯನ್ನು ಎನ್‌ಸಿಆರ್‌ಬಿಗೆ ನೀಡುತ್ತಿಲ್ಲ ಎಂಬುದು ಇದನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಎನ್‌ಕೌಂಟರ್ ಘಟನೆಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಸರ್ಕಾರವು, ಅವುಗಳನ್ನು ರಾಷ್ಟ್ರೀಯ ಅಪರಾಧ ಬ್ಯೂರೊ ದಾಖಲೆಗಳಿಗೆ ಸೇರಿಸಲು ಹಿಂದೇಟು ಹಾಕುತ್ತಿದೆ.

ಈ ಆರು ವರ್ಷಗಳಲ್ಲಿ ನಡೆದ ಪೊಲೀಸ್ ದಾಳಿಯಲ್ಲಿ 23,300ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದ್ದು, 5,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಐಜಿ ಪ್ರಶಾಂತ್ ಕುಮಾರ್ ಅವರು ಹೇಳಿದ್ದಾರೆ ಎಂದು ಪಿಟಿಐ ವರದಿ ಮಾಡಿದೆ. ಇಷ್ಟೊಂದು ದೊಡ್ಡ ಸಂಖ್ಯೆಯ ಜನರನ್ನು ಬಂಧಿಸಿರುವುದು ಹಾಗೂ ಭಾರಿ ಸಂಖ್ಯೆಯ ಜನರು ಗಾಯಾಳುಗಳಾಗಿರುವುದನ್ನು ನೋಡಿದರೆ ಎನ್‌ಕೌಂಟರ್‌ಗಳು ದೊಡ್ಡ ಮಟ್ಟದಲ್ಲೇ ನಡೆದಿರುವುದು ಸ್ಪಷ್ಟ. ಆದರೆ ಕೇಂದ್ರ ಮಟ್ಟದ ಅಪರಾಧ ದಾಖಲೆಗಳಲ್ಲಿ ಈ ಮಾಹಿತಿ ಇಲ್ಲದಿರುವುದು ಸರ್ಕಾರದ ಲೋಪವನ್ನು ತೋರಿಸುತ್ತದೆ. ಅಪರಾಧಗಳನ್ನು ನಿಗ್ರಹಿಸಲು ಇಂತಹ ದಿಟ್ಟ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳುವ ಸರ್ಕಾರ ಮಾತ್ರ, ಅಂತಹ ಘಟನೆಗಳನ್ನು ರಾಷ್ಟ್ರ ಮಟ್ಟದ ಅಪರಾಧ ದಾಖಲೆಗಳಲ್ಲಿ ಸೇರಿಸಲು ಸಿದ್ಧವಿಲ್ಲದಿರುವುದು ಕಂಡುಬಂದಿದೆ.

10,900 ಉತ್ತರ ಪ್ರದೇಶ ಪೊಲೀಸರು ನಡೆಸಿದ್ದೇವೆ ಎಂದು ಹೇಳಿದ ಎನ್‌ಕೌಂಟರ್ ಕಾರ್ಯಾಚರಣೆಗಳ ಸಂಖ್ಯೆ

13 ಎನ್‌ಸಿಆರ್‌ಬಿಯಲ್ಲಿ ದಾಖಲಾದ ಎನ್‌ಕೌಂಟರ್ ಕಾರ್ಯಾಚರಣೆಗಳ ಸಂಖ್ಯೆ (2017ರಿಂದ 2021ರ ಅಂತ್ಯದವರೆಗೆ)

ದಾಖಲಾದ ಎಫ್‌ಐಆರ್‌ಗಳೆಷ್ಟು?

ಎನ್‌ಕೌಂಟರ್ ಹತ್ಯೆಗಳಿಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಬೇಕು ಮತ್ತು ಪೊಲೀಸೇತರ ತನಿಖಾ ಸಂಸ್ಥೆಗಳು, ಆ ಪ್ರಕರಣಗಳ ತನಿಖೆ ನಡೆಸಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಮಾರ್ಗಸೂಚಿಗಳು ಹೇಳುತ್ತವೆ. ಆದರೆ, ಉತ್ತರ ಪ್ರದೇಶದಲ್ಲಿ ಈ ಸಂಬಂಧ ಎಷ್ಟು ಎಫ್‌ಐಆರ್ ದಾಖಲಿಸಲಾಗಿದೆ ಮತ್ತು ಯಾರು ತನಿಖೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ನಮ್ಮ ಬಳಿ ಇಲ್ಲ ಎಂದು ಕೇಂದ್ರ ಗೃಹ ಸಚಿವಾಲಯವು ಸಂಸತ್ತಿಗೆ ಮಾಹಿತಿ ನೀಡಿದೆ.

2017ರ ಮಾರ್ಚ್‌ನಿಂದ ಈವರೆಗೆ 183 ಎನ್‌ಕೌಂಟರ್ ಹತ್ಯೆಗಳು ನಡೆದಿವೆ ಎಂದು ಉತ್ತರ ಪ್ರದೇಶ ಸರ್ಕಾರ ಹೇಳುತ್ತಿದೆ. ಆದರೆ, ಈ ಸಂಬಂಧ ಎಷ್ಟು ಎಫ್‌ಐಆರ್‌ಗಳು ದಾಖಲಾಗಿವೆ ಮತ್ತು ಅವುಗಳ ತನಿಖೆಯನ್ನು ಯಾರು ನಡೆಸುತ್ತಿದ್ದಾರೆ ಎಂಬ ಮಾಹಿತಿಯನ್ನು ರಾಜ್ಯ ಸರ್ಕಾರ ನೀಡಿಲ್ಲ. ಎಫ್‌ಐಆರ್ ದಾಖಲಾದರಷ್ಟೇ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿಯಲ್ಲಿ ಅವುಗಳನ್ನು ಸೇರಿಸಲಾಗುತ್ತದೆ. ಆದರೆ ಎನ್‌ಸಿಆರ್‌ಬಿ ವರದಿಗಳಲ್ಲಿ ಉತ್ತರ ಪ್ರದೇಶದಲ್ಲಿ ನಡೆದ ಎನ್‌ಕೌಂಟರ್ ಹತ್ಯೆಗಳ ಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ.

ನಿಲ್ಲದ ಗ್ಯಾಂಗ್‌ವಾರ್

ಉತ್ತರ ಪ್ರದೇಶದಲ್ಲಿ ರೌಡಿಗಳ ನಡುವೆ ಗ್ಯಾಂಗ್‌ವಾರ್ ಸಾಮಾನ್ಯ. ಬಿಎಸ್‌ಪಿ ಶಾಸಕ ರಾಜು ಪಾಲ್ ಅವರನ್ನು 2005ರಲ್ಲಿ ನಡೆದ ಶೂಟೌಟ್‌ನಲ್ಲಿ ಹತ್ಯೆ ಮಾಡಲಾಗಿತ್ತು. ಇದೇ ಪ್ರಕರಣದಲ್ಲಿ ಈಗ ಎರಡು ತಿಂಗಳ ಅವಧಿಯಲ್ಲಿ ಆರು ಶೂಟೌಟ್‌ಗಳು ನಡೆದಿವೆ. ರಾಜು ಪಾಲ್ ಹತ್ಯೆ ಪ್ರಕರಣದ ಪ್ರತ್ಯಕ್ಷದರ್ಶಿಯಾಗಿದ್ದ ವಕೀಲ ಉಮೇಶ್ ಪಾಲ್ ಅವರನ್ನು ಇದೇ ಫೆಬ್ರುವರಿ 24ರಂದು ಅಪರಿಚಿತರು ಗುಂಡಿಟ್ಟು ಹತ್ಯೆ ಮಾಡಿದ್ದರು. ಅತೀಕ್ ಅಹ್ಮದ್ ಅವರ ತಂಡವೇ ಉಮೇಶ್ ಯಾದವ್ ಹತ್ಯೆಯ ಹಿಂದಿದೆ ಎನ್ನಲಾಗಿದೆ. ಇದೇ ಶನಿವಾರ ಅತೀಕ್ ಹಾಗೂ ಆತನ ಸಹೋದರ ಅಪರಿಚಿತರ ಗುಂಡೇಟಿಗೆ ಬಲಿಯಾಗಿದ್ದಾರೆ.

2021ರ ಮೇ ತಿಂಗಳಲ್ಲಿ ಉತ್ತರ ಪ್ರದೇಶದ ಭಾರಿ ಭದ್ರತೆಯ ಚಿತ್ರಕೂಟ ಜೈಲಿನಲ್ಲಿ ಗ್ಯಾಂಗ್‌ವಾರ್‌ಗೆ ಮೂವರು ಬಲಿಯಾಗಿದ್ದರು. ಅಂಶು ದೀಕ್ಷಿತ್ ಎಂಬ ಕೈದಿಯು ಮುಕಿಮ್ ಹಾಗೂ ಮಿರಾಜುದ್ದೀನ್ ಎಂಬ ಇಬ್ಬರು ಸಹ ಕೈದಿಗಳನ್ನು ಗುಂಡಿಟ್ಟು ಹತ್ಯೆ ಮಾಡಿದ ಎಂದು ಜೈಲು ಅಧಿಕಾರಿಗಳು ತಿಳಿಸಿದ್ದರು. ಈ ಇಬ್ಬರು ಕೈದಿಗಳು ಗ್ಯಾಂಗ್‌ಸ್ಟರ್ ಹಾಗೂ ರಾಜಕಾರಣಿ ಮುಕ್ತಾರ್ ಅನ್ಸಾರಿ ಸಹಚರರು ಎನ್ನಲಾಗಿದೆ. ಜೈಲಿನಲ್ಲಿ ಗುಂಡಿನ ದಾಳಿ ಎಸಗಿದ ಅಂಶು ದೀಕ್ಷಿತ್‌ನನ್ನು ಪೊಲೀಸರು ಗುಂಡಿಟ್ಟು ಹತ್ಯೆ ಮಾಡಿದ್ದರು.

2018ರ ಜನವರಿಯಲ್ಲಿ ಅಮೇಠಿಯಲ್ಲಿ ಎರಡು ಗುಂಪಿನ ನಡುವಿನ ಗ್ಯಾಂಗ್‌ವಾರ್‌ನಲ್ಲಿ ಅಶ್ಫಾಕ್ ಎಂಬಾತ ಹತನಾಗಿದ್ದ. ಆತ ಜಗದೀಶ್‌ಪುರದಲ್ಲಿ ಕಾರಿನಲ್ಲಿ ಇಳಿಯುತ್ತಿದ್ದಂತೆಯೇ, ಬೈಕ್‌ನಲ್ಲಿ ಬಂದ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದರು. ಅಶ್ಫಾಕ್ ಪ್ರತಿದಾಳಿ ನಡೆಸಿದ್ದ. ಆದರೆ ಗುಂಟೇನಿಂದ ಅಶ್ಫಾಕ್ ಮೃತಪಟ್ಟಿದ್ದ. 2016ರಲ್ಲಿ ಮುಜಫ್ಫರ್‌ಪುರ ಕೋರ್ಟ್ ಆವರಣದಲ್ಲಿ ಗುಂಡಿನ ದಾಳಿ ನಡೆದಿತ್ತು. ವಿಚಾರಣೆ ಎದುರಿಸುತ್ತಿದ್ದ ವಿಕ್ಕಿ ತ್ಯಾಗಿ ಎಂಬಾತನನ್ನು ಗುಂಡಿಟ್ಟು ಹತ್ಯೆ ಮಾಡಲಾಗಿತ್ತು. ರಾಜ್ಯದ ಪಶ್ಚಿಮ ಭಾಗದಲ್ಲಿ ಗ್ಯಾಂಗ್‌ಲೀಡರ್ ಆಗಿ ಕುಖ್ಯಾತನಾಗಿದ್ದ ವಿಕ್ಕಿಯನ್ನು ಒಬ್ಬ ಬಾಲಕ ಹತ್ಯೆ ಮಾಡಿದ್ದ.

ಆಧಾರ: ರಾಜ್ಯಸಭೆ ಮತ್ತು ಲೋಕಸಭೆಗೆ ಕೇಂದ್ರ ಗೃಹ ಸಚಿವಾಲಯ ನೀಡಿದ ಮಾಹಿತಿಗಳು, ಪಿಟಿಐ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ 'ಎನ್‌ಕೌಂಟರ್ ಹತ್ಯೆ ಪ್ರಕರಣಗಳ ನಿರ್ವಹಣೆ ಮಾರ್ಗಸೂಚಿಗಳು–2010', ಎನ್‌ಸಿಆರ್‌ಬಿ ವಾರ್ಷಿಕ 'ಭಾರತದಲ್ಲಿ ಅಪರಾಧ' ವರದಿಗಳು

ರಾಧೆಯಾಗಿ ಮಯೂರಿ ನಟರಾಜ್

ಇತ್ತೀಚೆಗಷ್ಟೇ ಬಿಡುಗಡೆಗೊಂಡ ಧನಂಜಯ್ ಅಭಿನಯದ 'ಗುರುದೇವ್ ಹೊಯ್ಸಳ' ಚಿತ್ರದಲ್ಲಿ 'ಭೂಮಿ' ಪಾತ್ರದ ಮೂಲಕ ಪ್ರೇಕ್ಷಕರ ಗಮನ ಸೆಳೆದಿದ್ದರು ಮಯೂರಿ ನಟರಾಜ್. ಈಗ ನಟ ರಕ್ಷಿತ್ ಶೆಟ್ಟಿಯವರ ಪರಂವಾ ಸ್ಟುಡಿಯೋಸ್ ನಿರ್ಮಾಣದ 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರಕ್ಕೆ ಎರಡನೆಯ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ಚಿತ್ರದಲ್ಲಿ ಅವರ ಪಾತ್ರದ ಹೆಸರು ರಾಧೆ. ಚಿತ್ರತಂಡ ಮಯೂರಿ ಪಾತ್ರ ಪರಿಚಯಿಸುವ ಪೋಸ್ಟರ್ ಅನ್ನು ಬಿಡುಗಡೆಗೊಳಿಸಿದೆ. ಚಂದ್ರಜಿತ್ ಬೆಳ್ಳಿಯಪ್ಪ ಕಥೆ-ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರವು ಇದೀಗ ಮುಕ್ತಾಯ ಹಂತದಲ್ಲಿದೆ. ಈಗಾಗಲೇ ಮಯೂರಿ ನಟರಾಜ್ ಚಿತ್ರೀಕರಣದಲ್ಲಿ ಭಾಗವಹಿಸಿದ್ದಾರೆ' ಎಂದು ಚಿತ್ರತಂಡ ಹೇಳಿದೆ.

ಮಯೂರಿ ಇದಕ್ಕೂ ಮೊದಲು 'ಮ್ಯಾನ್ ಆಫ್ ದಿ ಮ್ಯಾಚ್', 'ಒನ್ ಅಪಾನ್ ಎ ಟೈಮ್ ಇನ್ ಜಮಾಲಿಗುಡ್ಡ' ಚಿತ್ರಗಳಲ್ಲಿ ನಟಿಸಿದ್ದರು. 'ಇಬ್ಬನಿ ತಬ್ಬಿದ ಇಳೆಯಲಿ' ಮೂರು ವಿಭಿನ್ನ ಕಾಲಘಟ್ಟದಲ್ಲಿ ನಡೆಯುವ ಚಿತ್ರವಾಗಿದೆ. ವಿಹಾನ್ ಮತ್ತು ಅಂಕಿತಾ ಅಮರ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಈ ಚಿತ್ರಕ್ಕೆ ಗಗನ್ ಬಡೇರಿಯಾ ಸಂಗೀತ ಮತ್ತು ಶ್ರೀವತ್ಸನ್ ಸೆಲ್ವರಾಜನ್ ಅವರ ಛಾಯಾಗ್ರಹಣವಿದೆ.



ಸೂರ್ಯ ಅಭಿನಯದ 'ಕಂಗುವ'ಗೆ ಗ್ರಾಫಿಕ್ಸ್ ಮೆರುಗು

'ಬಾಹುಬಲಿ', 'ಆರ್‌ಆರ್‌ಆರ್'ನಂತಹ ದೊಡ್ಡ ಬಜೆಟ್‌ನ ಸಿನಿಮಾಗಳ ಸಾಲಿಗೆ ಸೇರುವ ತಮಿಳು ನಟ ಸೂರ್ಯ ಅವರ ಚಿತ್ರವೊಂದು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಘೋಷಣೆಯಾಗಿತ್ತು. ತಮಿಳು, ತೆಲುಗಿನ ಜನಪ್ರಿಯ ನಿರ್ದೇಶಕ ಶಿವ ನಿರ್ದೇಶನದ ಈ ಚಿತ್ರಕ್ಕೆ 'ಕಂಗುವ'ಎಂದು ಹೆಸರಿಡಲಾಗಿದೆ.

ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಗೊಂಡಿದ್ದು, ಭರ್ಜರಿ ಗ್ರಾಫಿಕ್ಸ್ ಹೊಂದಿರುವ ಕಾಲ್ಪನಿಕ ಜಗತ್ತಿನ ಚಿತ್ರ ಎಂದು ಮೇಲ್ನೋಟಕ್ಕೆ ತಿಳಿಯುತ್ತಿದೆ.



ಕಂಗುವ ಚಿತ್ರದ ಮೊದಲ ನೋಟ

'ಕಂಗುವ ಎಂದರೆ, ಬೆಂಕಿಯ ಶಕ್ತಿಯುಳ್ಳವನು. ಚಿತ್ರದಲ್ಲಿ ಸೂಪರ್ ಹೀರೋ ಆಗಿರುವ ನಾಯಕ, ಹಲವು ಅವತಾರಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಈ ಚಿತ್ರದಲ್ಲಿ ಸಾಕಷ್ಟು ಗ್ರಾಫಿಕ್ಸ್ ಇದೆ. ಹೀಗಾಗಿ ಚಿತ್ರೀಕರಣದ ನಂತರದ ಕೆಲಸಗಳು ಹೆಚ್ಚಿವೆ. ಮುಂದಿನ ವರ್ಷದ ಪ್ರಾರಂಭದಲ್ಲಿ 3ಡಿ ಅವತರಣಿಕೆಯಲ್ಲಿ 10 ಭಾಷೆಗಳಲ್ಲಿ ಬಿಡುಗಡೆಗೊಳ್ಳುತ್ತಿದೆ' ಎಂದು ಚಿತ್ರತಂಡ ಹೇಳಿದೆ. ಚಿತ್ರದಲ್ಲಿ ನಾಯಕಿಯಾಗಿ ಬಾಲಿವುಡ್ ಬೆಡಗಿ ದಿಶಾ ಪಟಾನಿ ನಟಿಸುತ್ತಿದ್ದಾರೆ. ಯೋಗಿ ಬಾಬು ಮುಂತಾದವರು ಪ್ರಮುಖ ಪಾತ್ರಗಳಲ್ಲಿದ್ದಾರೆ. ಕೆ.ಇ. ಜ್ಞಾನ ವೇಲ್ ರಾಜ ನಿರ್ಮಿಸಿರುವ ಚಿತ್ರಕ್ಕೆ ವೆಟ್ರಿ ಪಳನಿಸಾಮಿ ಅವರ ಛಾಯಾಗ್ರಹಣ ಮತ್ತು ದೇವಿ ಶ್ರೀಪ್ರಸಾದ್ ಅವರ ಸಂಗೀತವಿದೆ. ಈಗಾಗಲೇ ಗೋವಾ, ಚೆನ್ನೈ ಮುಂತಾದ ಕಡೆ ಚಿತ್ರದ ಶೇ 50ರಷ್ಟು ಚಿತ್ರೀಕರಣ ಮುಗಿದಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಾದಶಿ ಗಂ. 15-47 ನಕ್ಷತ್ರ: ಪೂರ್ವಾಭಾದ್ರಾ ಗಂ. 26-28, ಯೋಗ: ಬ್ರಹ್ಮ ಗಂ. 21-07, ಕರಣ: ತೈತಿಲ ಗಂ. 15-47, ಮೇಷ ಮಾಸದ 03 ನೇ ದಿನ, ಮಳೆನಕ್ಷತ್ರ: ಅಶ್ವಿನಿ 1. ರಾಹುಕಾಲ : ಬೆಳಿಗ್ಗೆ 07-30 – 09-00 ಸೂರ್ಯೋದಯ : 06-21 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 25 ರಂಜಾನ್ ದಿನ ವಿಶೇಷ : ಸೋಮ ಪ್ರದೋಷ ಅದೃಷ್ಟ ಸಂಖ್ಯೆ : 2, 8

ಮೇಷ: ಒಂಟಿತನ ಹೋಗಲಾಡಿಸಿಕೊಳ್ಳಲು ಮನಸ್ಸನ್ನು ಅಧಿಕ ಸಮಯದಲ್ಲಿ ಕೆಲಸಗಳತ್ತ ಹರಿಸುವಿರಿ. ಅನಗತ್ಯ ಚಿಂತೆ ಮೈಮೇಲೆ ಎಳೆದುಕೊಳ್ಳಬೇಡಿ. ನಿಮ್ಮ ಆತ್ಮಸ್ಥೈರ್ಯ ಹೆಚ್ಚಲಿದೆ. ಮನಸ್ಸಿನ ದುಗುಡ ನಿವಾರಣೆಗೆ ತಾಳ್ಮೆ ಅತ್ಯವಶ್ಯ.

ವೃಷಭ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಸಮಸ್ಯೆ ಬಗೆಹರಿಸಲು ಜಾಣತನ, ಬುದ್ಧಿವಂತಿಕೆ ಬಳಸಿಕೊಳ್ಳಿ. ವೃತ್ತಿಯು ಉತ್ತಮ ಸ್ಥಿತಿಯಲ್ಲಿರುವುದು.

ಮಿಥುನ: ಚಿನ್ನಾಭರಣದ ಖರೀದಿಸಬೇಕಾದ ಪ್ರಸಂಗ ಎದುರಾಗಲಿದೆ. ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಬಳಸಿಕೊಂಡು ಮುಂದುವರಿಸುವಿರಿ.

ಕರ್ಕಾಟಕ: ಅಸೂಯೆ ಪಡುವ ಸಹೋದ್ಯೋಗಿ ಯಾರೆಂಬುವುದು ತಿಳಿಯುವುದು. ಕಾರ್ಯರಂಗದಲ್ಲಿ ನಿಮ್ಮ ಶ್ರದ್ಧೆಗೆ ಮತ್ತು ಶ್ರಮಕ್ಕೆ ತಕ್ಕ ಫಲ ನಿರೀಕ್ಷಿಸಬಹುದು. ನಿರುದ್ಯೋಗಿಗಳಿಗೆ ಉದ್ಯೋಗದ ಭರವಸೆ ಸಿಗಲಿದೆ.

ಸಿಂಹ: ಪಾಲುದಾರಿಕೆ ವ್ಯವಹಾರದಲ್ಲಿ ಲಾಭವಾಗಲಿದೆ. ಆಕಸ್ಮಿಕ ಪ್ರಯಾಣದ ಸಾಧ್ಯತೆಯಿದೆ. ಯಾವುದೇ ಸಮಸ್ಯೆಗಳಿಗಾದರೂ ಉತ್ತರ ಸಿಗುವುದು. ನವಗ್ರಹ ಪೀಡಾ ಸ್ತೋತ್ರವನ್ನು ಪಠಿಸುವುದರಿಂದ ಶುಭವಾಗುತ್ತದೆ.

ಕನ್ಯಾ: ಮಕ್ಕಳ ವಿದ್ಯಾಭ್ಯಾಸವು ಅಭಿವೃದ್ಧಿದಾಯಕವಾಗಿ ಮುಂದುವರೆಯಲಿದೆ. ದೇಹಾರೋಗ್ಯದ ಬಗ್ಗೆ ಅದರಲ್ಲೂ ಉದರವ್ಯಾಧಿಯ ಬಗ್ಗೆ ಕಳಜಿ ವಹಿಸಬೇಕು. ರಾಜಕೀಯ ಧುರೀಣರಿಗೆ ಈ ದಿನವು ಮೋಡ ಮುಸುಕಿದಂತಿರುವುದು.

ತುಲಾ: ಈ ದಿನ ವಿವಿಧ ರೀತಿಯಲ್ಲಿ ಧನಾಗಮನ ಉತ್ತಮವಾಗಿರಲಿದೆ. ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ನಿಮ್ಮ ಕಾರ್ಯವೈಖರಿಯಿಂದ ಅನುಭವಕ್ಕೆ ಬರುತ್ತದೆ. ಕೆಲಸವನ್ನು ನೂತನವಾಗಿ ಆರಂಭಿಸುವವರು.

ವೃಶ್ಚಿಕ: ರಾಜಕೀಯ ಪ್ರತಿಸ್ಪರ್ಧಿಗಳು ಗಲಾಟೆಯನ್ನು ಉಂಟುಮಾಡಬಹುದು ಅಥವಾ ನಿಮ್ಮನ್ನು ಹಿಂದಿಕ್ಕುವ ಪ್ರಯತ್ನ ಮಾಡಲಿದ್ದಾರೆ. ಮಗಳ ಮದುವೆ ವಿಚಾರದಲ್ಲಿ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾದುದು ಆಗಿರುತ್ತದೆ.

ಧನು: ಸ್ವಂತ ಪ್ರಯತ್ನದಿಂದ ಆಸ್ತಿ ಸಂಪಾದನೆ ಮಾಡುವಿರಿ. ಮಿತ್ರರ ಸಹಕಾರದಿಂದ ಮತ್ತು ಅವರ ಚಾಣಾಕ್ಷ ವರ್ತನೆಯಿಂದ ನಿಮ್ಮ ವ್ಯಾಪಾರದಲ್ಲಿ ಪ್ರಗತಿ ಇರುವುದು. ಉದ್ಯೋಗಸ್ಥ ಮಹಿಳೆಯರಿಗೆ ಬಡ್ತಿ ದೊರಕುವ ಸಂಭವವಿದೆ.

ಮಕರ: ಎಲ್ಲರೊಂದಿಗೆ ಮುಕ್ತವಾಗಿ ಬೆರೆಯಬೇಕು. ಮನೆ ಕೊಳ್ಳುವ ವಿಷಯದ ಬಗ್ಗೆ ಮನೆಯವರಿಂದ ಹೆಚ್ಚಿನ ಮಾಹಿತಿಯನ್ನು ಪಡೆಯುವಿರಿ. ಶಿಕ್ಷಕ ವೃತ್ತಿ ಆರಂಭಿಸುವ ಬಗ್ಗೆ ಆಲೋಚಿಸಿದವರಿಗೆ ಶುಭ ದಿನ.

ಕುಂಭ: ಭೂಸಂಬಂಧಿ ವ್ಯವಹಾರದಲ್ಲಿರುವವರಿಗೆ ಧನಲಾಭವಾಗುವುದು. ಸರ್ಕಾರಿ ಅಧಿಕಾರಿಗಳಿಗೆ ಉದ್ಯೋಗದಲ್ಲಿ ವರ್ಗಾವಣೆ ಸಂಭವವಿದೆ. ಅರ್ಧಕ್ಕೆ ನಿಂತ ನಿಮ್ಮ ಸ್ವಂತ ಕಾರ್ಯಗಳು ಈ ದಿನದಲ್ಲಿ ಪುನಃ ಚಾಲನೆ ದೊರೆಯಲಿದೆ.

ಮೀನ: ಪೊಲೀಸ್ ಮತ್ತು ಅಬಕಾರಿ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚಲಿದೆ. ವ್ಯವಹಾರದಲ್ಲಿ ಎದುರಾಗುವ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ಬರಲಿದೆ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಕೇವಲ ಒಳ್ಳೆಯ ಭಾವನೆ ಸಾಕೇ?

ಮುದಿಕುರುಡಿ ಹೊಂಗೆಯನು "ಬಾದಾಮಿ, ಕೋ"ಯೆನುತ |
ಪದುಳದಿಂ ಮೊಮ್ಮಂಗೆ ಕೊಡಲು ಸಿಹಿಯಹುದೆ? ||
ಹೃದಯವೊಳಿತಾದೊಡೇಂ? ತಿಳಿವಿಹುದೆ? ಜಾಣಿಹುದೆ? ||
ಸುಧೆ ಬಂತೆ ಸುಲಭದಲಿ? - ಮಂಕುತಿಮ್ಮ || 863||

ಪದ-ಅರ್ಥ: ಕೋ = ತೆಗೆದುಕೊ, ಪದುಳದಿಂ = - ಪ್ರೀತಿಯಿಂದ, ಮೊಮ್ಮಂಗೆ = ಮೊಮ್ಮಗನಿಗೆ, ಹೃದಯವೊಳಿತಾದೊಡೇಂ = ಹೃದಯ + ಒಳಿತು + ಆದೊಡೇಂ(ಆದರೇನು), ತಿಳಿದಿಹುದೆ = ತಿಳಿವು + ಅಹುದೆ, ಜಾಣಿಹುದೆ = ಜಾಣತನವಿಹುದೆ,ಸುಧೆ = ಅಮೃತ


ವಾಚ್ಯಾರ್ಥ: ಮುದುಕಿಯಾದ ಕುರುಡಿ ಹೊಂಗೆಮರದ ಬೀಜವನ್ನು ಹಿಡಿದುಕೊಂಡು, ಬಾದಾಮಿಯನ್ನು ತೆಗೆದುಕೋ ಎಂದು ಪ್ರೀತಿಯಿಂದ ಮೊಮ್ಮಗನಿಗೆ ಕೊಟ್ಟರೆ ಅದು ಸಿಹಿಯಾಗುವುದೆ? ಹೃದಯದಲ್ಲಿ ಎಷ್ಟು ಒಳ್ಳೆಯ ಭಾವನೆ ಇದ್ದರೇನು, ತಿಳುವಳಿಕೆ ಇದೆಯೇ, ಜಾಣತನವಿದೆಯೇ? ಅಮೃತ ಸುಲಭದಲ್ಲಿ ಬಂದೀತೇ?

ವಿವರಣೆ: ಗರುಡ ಮಹಾವಿಷ್ಣುವಿನ ಅರಮನೆಯ ಬಾಗಿಲಲ್ಲಿ ಕುಳಿತಿದ್ದ. ಅಲ್ಲಿಗೆ ಯಮರಾಜ ಬಂದ. ಗರುಡನಿಗೆ ಅಭಿವಾದನೆ ಮಾಡಿ, ಎಡಗಡೆಗೆ ನೋಡಿದ. ಅಲ್ಲೊಂದು ಗುಬ್ಬಚ್ಚಿ ಕುಳಿತಿದೆ. ಅದನ್ನು ಕಂಡು ಆಶ್ಚರ್ಯದಿಂದ ಹುಬ್ಬೇರಿಸಿ ಒಳಗೆ ನಡೆದ. ಗುಬ್ಬಚ್ಚಿ ಬಿಕ್ಕಿ ಬಿಕ್ಕಿ ಅಳತೊಡಗಿತು. ಯಮ ತನ್ನನ್ನು ನೋಡಿದ ರೀತಿಯಿಂದ ತನ್ನ ಆಯುಷ್ಯ ಮುಗಿಯಿತೆಂದು ಖಚಿತವಾಯಿತು. ಗರುಡ ಮಹಾಶಕ್ತಿಶಾಲಿಯಾದರೂ ಪಕ್ಷಿಯೇ ತಾನೇ? ಜಾತಿ ಪ್ರೇಮ ಉಕ್ಕೇರಿತು. ಗುಬ್ಬಚ್ಚಿಯಿಂದ ಗಾಬರಿಯ ಕಾರಣವನ್ನು ಕೇಳಿ, ಭಯಪಡಬೇಡ, ಯಮರಾಜ ನಿನಗೆ ಏನೂ ಮಾಡದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು ಎಂದು ಗುಬ್ಬಚ್ಚಿಯನ್ನು ಹಗುರವಾಗಿ ತನ್ನ ಕೊಕ್ಕಿನಲ್ಲಿ ಹಿಡಿದು ಆಕಾಶಕ್ಕೆ ಹಾರಿತು. ಗರುಡ ಮನೋವೇಗದಲ್ಲಿ ಹೋಗುವ ಪಕ್ಷಿ. ಒಂದು ಕ್ಷಣದಲ್ಲಿ ಗುಬ್ಬಚ್ಚಿಯನ್ನು ಗಂಧಮಾದನ ಪರ್ವತದ ತುತ್ತತುದಿಯಲ್ಲಿ ಇಳಿಸಿ, ಮರಳಿ ಬಂದು ತನ್ನ ಸ್ಥಳದಲ್ಲಿ ಕುಳಿತುಕೊಂಡಿತು. ಯಮರಾಜ ಹೊರಗೆ ಬಂದು ಗುಬ್ಬಚ್ಚಿಯು ಕುಳಿತಿದ್ದ ಸ್ಥಳವನ್ನು ಕಂಡು ಆಶ್ಚರ್ಯ ತೋರಿದ. ಗರುಡ ಕೇಳಿದ, ಏಕೆ, ಆ ಗುಬ್ಬಚ್ಚಿಯ ಪ್ರಾಣಹರಣ ಮಾಡಬೇಕೆಂದಿದ್ದೀಯಾ? ನಿನಗೆ ಸಿಗದ ಹಾಗೆ ವ್ಯವಸ್ಥೆ ಮಾಡಿದ್ದೇನೆ. ನೀನು ಬರೆದ ಹಣೆಬರಹವನ್ನು ಯಾರೂ ಬದಲಿಸಲಾರರೆಂಬ ಅಹಂಕಾರವಲ್ಲವೇ ನಿನಗೆ? ಇಲ್ಲ, ನನಗೆ ಆಶ್ಚರ್ಯವಾದದ್ದು ಈ ಗುಬ್ಬಚ್ಚಿ ಈಗ ಯಾಕೆ ಇಲ್ಲಿದೆ? ಈ ಕ್ಷಣದಲ್ಲಿ ಅದರ ಪ್ರಾಣ ಗಂಧಮಾದನ ಪರ್ವತದ ತುತ್ತತುದಿಯಲ್ಲಿ ಆಗಬೇಕಿತ್ತು. ಅದು ವರ್ಷಗಟ್ಟಲೇ ಹಾರಿದರೂ ಅಲ್ಲಿಗೆ ತಲುಪಲಾರದು. ಮನೋವೇಗದಿಂದ ಸಾಗುವ ನೀನು ಮಾತ್ರ ಅದನ್ನು ಅಲ್ಲಿಗೆ ತಲುಪಿಸಿ ನನ್ನ ಬರೆಹ ತಪ್ಪದಂತೆ ನೋಡಿಕೊಂಡೆ. ಗುಬ್ಬಚ್ಚಿ ಅಲ್ಲಿಯೇ ಸತ್ತಿದೆ ಎಂದ ಯಮರಾಜ. ಗರುಡನ ಉದ್ದೇಶ ಒಳ್ಳೆಯದಿತ್ತು. ಆದರೆ ಒಳಿತಾಯಿತೇ? ಕಗ್ಗ ಅದನ್ನೇ ತಿಳಿಸುತ್ತದೆ. ಕುರುಡಿಯಾದ ಅಜ್ಜಿ ಕೈಯಲ್ಲಿ ಹೊಂಗೆಯ ಬೀಜವನ್ನು ಹಿಡಿದುಕೊಂಡು, ಬಾದಾಮಿಯೆಂದು ಮೊಮ್ಮಗನಿಗೆ ಕೊಟ್ಟರೆ ಸಿಹಿಯಾದೀತೇ? ಹೃದಯ ಒಳ್ಳೆಯದು, ಆದರೆ ತಿಳುವಳಿಕೆ ಇದೆಯೆ? ಜಾಣತನವಿದೆಯೆ? ಆ ಜಾಣತನ, ತಿಳುವಳಿಕೆ ಸುಲಭದಲ್ಲಿ ಬರುವುದಲ್ಲ. ಸಮುದ್ರಮಥನ ಮಾಡಿದಾಗ ಅಮೃತ ಸುಲಭದಲ್ಲಿ ಬಂತೇ? ಏನೇನೋ ವಸ್ತುಗಳು, ವಿಷ ಬಂದ ಮೇಲೆ ಅಮೃತ ಸಿದ್ಧಿಯಾಯಿತು. ಅದರಂತೆಯೇ ಆ ಜಾಣತನ, ತಿಳುವಳಿಕೆಗೆ ತಾಳ್ಮೆ, ಪರಿಶ್ರಮ ಬೇಕು.

ಪದಬಂಧ 5291 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಕೊನೆಗೆ ಶವವನ್ನಿಟ್ಟಾಗಿನ ಬಾಲ್ಯ (3)
4. ಓರಿಗೆಯವರೊಡನೆ ತಿಂದಿರುವ ಪಕ್ವವಾದ ಅನ್ನ (3)
6. ಸರಕು ಮೊದಲಾದುವುಗಳನ್ನು ಕಳುಹಿಸು (4)
8. ಮಹಮ್ಮದೀಯ ಬೈರಾಗಿ (4)
10. ಇದು ಹೊಸತು (3)
13. ಬಣ್ಣದ ದಾರದಿಂದ ಬಟ್ಟೆ ಮೇಲೆ ಹೆಣೆದ ಅಲಂಕಾರ (3)
15. ಇದಿನ್ನೂ ಎಳೆ ಮಗು (4)
19. ಕೊಬ್ಬೇರಿದ ಆನೆಯಿದು (4)
21. ಧಾನ್ಯಗಳನ್ನು ಕುಟ್ಟುವ ಸಾಧನ (3)
22. ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ
1. ಬಿಗಿಯನ್ನು ಕಳೆದುಕೊಂಡಿರುವಿಕೆ (3)
2. ಮರ್ಯಾದೆಯ ಗಳಿಕೆ! (4)
3. ರವ ಇಲ್ಲಿ ಕೇಳುತ್ತಿದೆಯೇ? (2)
5. ವಿಷವನ್ನು ಕೊಟ್ಟು ಕೊಲ್ಲಲು ಬಯಸುವವನು (3)
7. ಸಖನಿಂದ ಬಂದಿರುವ ಸಂತೋಷ (2)
9. ಸಲ್ಲಿಕೆಯ ಚೀಟಿ (3)
11. ಪಾಪಿಗಳ ಲೋಕವಿದು (3)
12. ಕಾಯ ಕೊನೆಗಿದ್ದಾಗಲೇ ಈ ಅನುಮಾನ! (3)
14. ಎಳ್ಳು ನೀರು ಬಿಡುವಿಕೆ (4)
16. ಸುಮ್ಮನಿರಿ! ಹಿಗ್ಗು ಹೀಗೆ ಬಂದಿದೆ (3)
17. ಸುಗಮವಾಗಿ ಕಿತ್ತು ತಂದಿರುವ ಹೂ (2)
18. ಇದೊಂದು ಬಗೆಯ ಮೆಟ್ಟು (3)
20. ಸೊಂಟಕ್ಕೆ ಸುತ್ತುವ ಪಂಚೆ (2)



5290ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಮಾನ 3.ತಕಲೀಪು
5.ವಧಕಾರ 6.ರಸ
8.ಚದುರಂಗ 10.ಸದಾಚಾರ
13.ರಕ 15.ಮಾರಾಮಾರಿ
17.ವಸಾಹತು 18 ಪುಲ್ಲಿಂಗ

ಮೇಲಿಂದ ಕೆಳಕ್ಕೆ:
1.ವಿಧುರ 2.ನವ
3.ತರದೂದು 4.ಪುಧಾರಿ
7.ಸಮಂಜಸ 8.ಚಮ್ಮಾರ
9.ಗತ್ಯಂತರ 11.ಚಾಟುಮಾತು
12.ಗಡವ 14.ಕಡಗ
16.ರಿಪು

ಸುಡೊಕು 5677

7				5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6					7	3	
				2			6	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5676 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಭಾರತದೊಂದಿಗೆ ದ್ವಿಪಕ್ಷೀಯ ವ್ಯಾಪಾರ

ಮೊದಲ ಸ್ಥಾನದಲ್ಲಿ ಅಮೆರಿಕ





ನವದೆಹಲಿ (ಪಿಟಿಐ): ಭಾರತದೊಂದಿಗೆ ಅತಿ ಹೆಚ್ಚು ವ್ಯಾಪಾರ ನಡೆಸಿದ ದೇಶಗಳ ಸಾಲಿನಲ್ಲಿ 2022–23ರಲ್ಲಿಯೂ ಅಮೆರಿಕ ಮೊದಲ ಸ್ಥಾನ ಪಡೆದುಕೊಂಡಿದೆ. 2021–22ರಲ್ಲಿ ಮೊದಲ ಬಾರಿಗೆ ಅಮೆರಿಕವು ಚೀನಾವನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೇರಿತ್ತು.

ಕೇಂದ್ರ ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಿರುವ ತಾತ್ಕಾಲಿಕ ಮಾಹಿತಿಯ ಪ್ರಕಾರ, 2022–23ರಲ್ಲಿ ಭಾರತ ಮತ್ತು ಅಮೆರಿಕದ ಮಧ್ಯೆ ₹10.54 ಲಕ್ಷ ಕೋಟಿ ಮೌಲ್ಯದ ದ್ವಿಪಕ್ಷೀಯ ವ್ಯಾಪಾರ ನಡೆದಿದೆ. 2021–22ರಲ್ಲಿ ಆಗಿದ್ದ ವ್ಯಾಪಾರಕ್ಕೆ ಹೋಲಿಸಿದರೆ ಶೇ 7.65ರಷ್ಟು ಹೆಚ್ಚಾಗಿದೆ.

ಭಾರತದಿಂದ ಅಮೆರಿಕಕ್ಕೆ 2021–22ರಲ್ಲಿ ₹6.24 ಲಕ್ಷ ಕೋಟಿ ಮೌಲ್ಯದ ಸರಕು ಮತ್ತು ಸೇವೆಗಳ ರಫ್ತು ಆಗಿತ್ತು. ಇದು 2022–23ರಲ್ಲಿ ₹6.42 ಲಕ್ಷ ಕೋಟಿಗೆ ಅಂದರೆ ಶೇ 2.81ರಷ್ಟು ಹೆಚ್ಚಾಗಿದೆ. ಆಮದು ವಹಿವಾಟು ಸಹ ಶೇ 16ರಷ್ಟು ಹೆಚ್ಚಾಗಿದ್ದು ₹4.11 ಲಕ್ಷ ಕೋಟಿಗೆ ತಲುಪಿದೆ.

2022–23ರಲ್ಲಿ ಭಾರತ ಮತ್ತು ಚೀನಾ ಮಧ್ಯೆ ದ್ವಿಪಕ್ಷೀಯ ವ್ಯಾಪಾರವು ಶೇ 1.5ರಷ್ಟು ಇಳಿಕೆ ಕಂಡು ₹9.33 ಲಕ್ಷ ಕೋಟಿಯಷ್ಟಾಗಿದೆ. 2021–22ರಲ್ಲಿ ₹9.46 ಲಕ್ಷ ಕೋಟಿ ಮೌಲ್ಯದ ವ್ಯಾಪಾರ ನಡೆದಿತ್ತು.

ಚೀನಾಕ್ಕೆ ರಫ್ತು ಶೇ 28ರಷ್ಟು ಇಳಿಕೆ ಆಗಿದ್ದು, ಚೀನಾದಿಂದ ಆಮದು ಪ್ರಮಾಣವು ಶೇ 4.16ರಷ್ಟು ಹೆಚ್ಚಾಗಿದೆ. ವ್ಯಾಪಾರ ಕೊರತೆ ಅಂತರವು ₹5.97 ಲಕ್ಷ ಕೋಟಿಯಿಂದ ₹6.82 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಅಮೆರಿಕಕ್ಕೆ ಔಷಧ, ಎಂಜಿನಿಯರಿಂಗ್, ಹರಳು ಮತ್ತು ಚಿನ್ನಾಭರಣ ರಫ್ತು ಹೆಚ್ಚಾಗುತ್ತಿದೆ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎ. ಶಕ್ತಿವೇಲ್ ಹೇಳಿದ್ದಾರೆ.

ಯುಎಇ, ಸೌದಿ ಅರೇಬಿಯಾ ಮತ್ತು ಸಿಂಗಪುರ ದೇಶಗಳು ಕ್ರಮವಾಗಿ ಮೂರು, ನಾಲ್ಕು ಮತ್ತು ಐದನೇ ಸ್ಥಾನದಲ್ಲಿವೆ.

ಭಾರತ ಮತ್ತು ಅಮೆರಿಕದ ಆರ್ಥಿಕ ಒಪ್ಪಂದಗಳನ್ನು ಇನ್ನಷ್ಟು ಬಲಪಡಿಸಿಕೊಳ್ಳುತ್ತಿವೆ. ಹೀಗಾಗಿ ಭಾರತ ಮತ್ತು ಅಮೆರಿಕ ಮಧ್ಯೆ ದ್ವಿಪಕ್ಷೀಯ ವ್ಯಾಪಾರವು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆಯನ್ನು ತಜ್ಞರು ಹೊಂದಿದ್ದಾರೆ.

ಜಾಗತಿಕ ಕಂಪನಿಗಳು ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದು ಭಾರತವನ್ನೂ ಒಳಗೊಂಡು ಅನ್ಯ ದೇಶಗಳೊಂದಿಗೂ ವಹಿವಾಟು ನಡೆಸುತ್ತಿವೆ ಎಂದು ಒಕ್ಕೂಟದ ಉಪಾಧ್ಯಕ್ಷ ಖಾಲಿದ್ ಖಾನ್ ಹೇಳಿದ್ದಾರೆ.

7 ಕಂಪನಿಗಳ ಬಂಡವಾಳ ಮೌಲ್ಯ ಹೆಚ್ಚಳ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳಲ್ಲಿ 7 ಕಂಪನಿಗಳ ಮಾರುಕಟ್ಟೆ ಮೌಲ್ಯವು ಏಪ್ರಿಲ್ 13ಕ್ಕೆ ಕೊನೆಗೊಂಡ ವಾರದಲ್ಲಿ ₹67,859 ಕೋಟಿಯಷ್ಟು ಹೆಚ್ಚಾಗಿದೆ. ಐಸಿಐಸಿಐ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಹೆಚ್ಚಿನ ಗಳಿಕೆ ಕಂಡುಕೊಂಡಿವೆ.

ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ, ಐಟಿಸಿ, ಎಸ್‌ಬಿಐ ಮತ್ತು ಭಾರ್ತಿ ಏರ್‌ಟೆಲ್ ಕಂಪನಿಗಳ ಮಾರುಕಟ್ಟೆ ಮೌಲ್ಯ ಹೆಚ್ಚಾಗಿದೆ. ಆದರೆ, ಟಿಸಿಎಸ್, ಎಚ್‌ಯುಎಲ್ ಮತ್ತು ಇನ್ಫೊಸಿಸ್ ಷೇರು ಮೌಲ್ಯ ಇಳಿಕೆ ಕಂಡಿದೆ.

ಐಸಿಐಸಿಐ ಬ್ಯಾಂಕ್ ಮಾರುಕಟ್ಟೆ ಮೌಲ್ಯ ₹17,188 ಕೋಟಿ ಹೆಚ್ಚಾಗಿ ₹6.27 ಲಕ್ಷ ಕೋಟಿಗೆ ತಲುಪಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯ ₹15,065 ಕೋಟಿ ಹೆಚ್ಚಾಗಿ ₹9.44 ಲಕ್ಷ ಕೋಟಿಗೆ ತಲುಪಿದೆ.

ಟಿಸಿಎಸ್ ಕಂಪನಿಯ ನಿವ್ವಳ ಲಾಭವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 14.8ರಷ್ಟು ಹೆಚ್ಚಾಗಿ ₹11,392 ಕೋಟಿಗೆ ಏರಿಕೆ ಆಗಿದೆ. ಆದರೆ, ಸಿಲಿಕಾನ್ ವ್ಯಾಲಿ ಬ್ಯಾಂಕ್ (ಎಸ್‌ವಿಬಿ) ದಿವಾಳಿ ಆಗಿರುವುದರ ಜೊತೆಗೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಅಸ್ಥಿರತೆಯು ಉತ್ತರ ಅಮೆರಿಕದಲ್ಲಿ ಕಂಪನಿ ಹೊಂದಿರುವ ವಹಿವಾಟಿನ ಮೇಲೆ ಪರಿಣಾಮ ಬೀರುವ ಆತಂಕ ಎದುರಾಗಿದೆ. ಹೀಗಾಗಿ ಕಂಪನಿಯ ಮಾರುಕಟ್ಟೆ ಮೌಲ್ಯದಲ್ಲಿ ₹11,654 ಕೋಟಿ ಕಡಿಮೆ ಆಗಿದೆ.

ಇನ್ನೊಂದೆಡೆ ಇನ್ಫೊಸಿಸ್ ಕಂಪನಿಯ ನಿವ್ವಳ ಲಾಭವು ಮಾರುಕಟ್ಟೆ ನಿರೀಕ್ಷೆಗಿಂತಲೂ ಕಡಿಮೆ ಇದೆ. ಹೀಗಾಗಿ ಇನ್ಫೊಸಿಸ್ ಮಾರುಕಟ್ಟೆ ಮೌಲ್ಯದಲ್ಲಿ ₹13,897 ಕೋಟಿ ಕರಗಿದೆ.

ದೇಶದ ಅತ್ಯಂತ ಮೌಲ್ಯಯುತ ಕಂಪನಿಗಳ ಪಟ್ಟಿಯಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಮೊದಲ ಸ್ಥಾನ ಕಾಯ್ದುಕೊಂಡಿದೆ. ಟಿಸಿಎಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹410
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹410

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹271-532
ದ್ವಿತಳಿ (ಬಿ.ವಿ) ₹299-641

ಬ್ಯಾಂಕ್ ಸಾಲದ ಅರ್ಜಿ ತಿರಸ್ಕರಿಸುವುದೇಕೆ?



ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಸಾಲಕ್ಕಾಗಿ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ್ದೆ. ಆದರೆ ಸಾಲವೇ ಸಿಗಲಿಲ್ಲ ಎಂದು ಅನೇಕರು ಅಲವತ್ತುಕೊಳ್ಳುತ್ತಾರೆ. ಸಾಮಾನ್ಯವಾಗಿ ಬ್ಯಾಂಕ್‌ಗಳು ಸಾಲ ಕೊಡುವಾಗ ವ್ಯಕ್ತಿಯ ಸ್ಥಿರವಾದ ಆದಾಯ, ಸದ್ಯ ಚಾಲ್ತಿ ಇರುವ ಸಾಲದ ಮಾಸಿಕ ಕಂತುಗಳು (ಇಎಂಐ), ಮತ್ತು ಕ್ರೆಡಿಟ್ ಸ್ಕೋರ್ ಪರಿಗಣಿಸುತ್ತವೆ. ಕ್ರೆಡಿಟ್ ಸ್ಕೋರ್ 750ಕ್ಕಿಂತ ಹೆಚ್ಚಿಗೆ ಇದ್ದರೆ, ಸುಲಭದಲ್ಲಿ ಸಾಲ ಸಿಗುತ್ತದೆ. ಯಾವ ಆಧಾರದಲ್ಲಿ ಬ್ಯಾಂಕ್‌ಗಳು ಸಾಲ ಕೊಡುತ್ತವೆ ಮತ್ತು ನಿರಾಕರಿಸುತ್ತವೆ ಎನ್ನುವುದನ್ನು ಪ್ರಾಯೋಗಿಕವಾಗಿ ತಿಳಿಯೋಣ ಬನ್ನಿ.

ಸಂದರ್ಭ -1: ಪಟ್ಟಿಯಲ್ಲಿರುವಂತೆ ವ್ಯಕ್ತಿಯೊಬ್ಬರ ಆದಾಯ ₹ 50 ಸಾವಿರ ಆಗಿದ್ದು, ಈಗಾಗಲೇ ಪಡೆದಿರುವ ಸಾಲವೊಂದಕ್ಕೆ ಅವರು ₹ 10 ಸಾವಿರ ಮಾಸಿಕ ಇಎಂಐ ಕಂತು ಪಾವತಿಸುತ್ತಿದ್ದಾರೆ. ಸಾಲದ ನಿಯಮದ ಪ್ರಕಾರ ನಮ್ಮ ಸಾಲದ ಇಎಂಐ ಕಂತು ಆದಾಯದ ಶೇ 50 ಕ್ಕಿಂತ ಹೆಚ್ಚಿಗೆ ಇರಬಾರದು. ಅದರಂತೆ ಲೆಕ್ಕ ಮಾಡಿ ನೋಡಿದಾಗ ಆದಾಯದ ಶೇ 20 ರಷ್ಟು(₹ 10 ಸಾವಿರ) ಹಣವನ್ನು ಅವರು ಸದ್ಯ ಮಾಸಿಕ ಸಾಲದ ಕಂತಿಗೆ ಪಾವತಿಸುತ್ತಿದ್ದಾರೆ. ಇನ್ನೂ ಶೇ 30 ರಷ್ಟು ಹಣವನ್ನು (₹ 15 ಸಾವಿರ) ಸಾಲದ ರೂಪದಲ್ಲಿ ಪಡೆಯಲು ಅವಕಾಶವಿದೆ. ಈ ಲೆಕ್ಕಾಚಾರವನ್ನು ಪರಿಗಣಿಸಿದಾಗ ವ್ಯಕ್ತಿಗೆ ಹೆಚ್ಚುವರಿಯಾಗಿ ಶೇ 10 ರ ಬಡ್ಡಿ ದರದಲ್ಲಿ ₹ 15 ಲಕ್ಷ ಸಾಲವನ್ನು 20 ವರ್ಷಗಳ ಅವಧಿಗೆ ಬ್ಯಾಂಕ್ ನೀಡಹುದು.

ಸಂದರ್ಭ - 2: ಪಟ್ಟಿಯಲ್ಲಿರುವಂತೆ ವ್ಯಕ್ತಿಯೊಬ್ಬರ ಆದಾಯ ₹ 1 ಲಕ್ಷ ಆಗಿದ್ದು, ಈಗಾಗಲೇ ಪಡೆದಿರುವ ಸಾಲವೊಂದಕ್ಕೆ ಅವರು ₹ 50 ಸಾವಿರ ಮಾಸಿಕ ಇಎಂಐ ಕಂತು ಪಾವತಿಸುತ್ತಿದ್ದಾರೆ. ಸಾಲದ ನಿಯಮದ ಪ್ರಕಾರ ಸಾಲದ ಇಎಂಐ ಕಂತು ಆದಾಯದ ಶೇ 50 ಕ್ಕಿಂತ ಹೆಚ್ಚಿಗೆ ಇರಬಾರದು. ಅದರಂತೆ ಲೆಕ್ಕ ಮಾಡಿ ನೋಡಿದಾಗ ಆದಾಯದ ಶೇ 50 ರಷ್ಟು (₹ 50 ಸಾವಿರ) ಹಣವನ್ನು ಸದ್ಯ ಅವರು ಮಾಸಿಕ ಸಾಲದ ಕಂತಿಗೆ ಪಾವತಿಸುತ್ತಿದ್ದಾರೆ. ಈ ಸನ್ನಿವೇಶದಲ್ಲಿ ಅವರಿಗೆ ಬ್ಯಾಂಕ್‌ನಿಂದ ಯಾವುದೇ ಹೆಚ್ಚುವರಿ ಸಾಲ ಸಿಗುವುದಿಲ್ಲ.

ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆಯುವುದು ಹೇಗೆ?: ರವಿ ಎನ್ನುವ ವ್ಯಕ್ತಿ ₹ 10.29 ಲಕ್ಷದ ಕಾರು ಖರೀದಿಸಲು ತೀರ್ಮಾನಿಸಿ ₹ 4 ಲಕ್ಷ ಹೊಂದಿಸಿಕೊಂದು ಬಾಕಿ ₹ 6.29 ಲಕ್ಷ ಸಾಲಕ್ಕಾಗಿ ಬ್ಯಾಂಕ್ ವೊಂದರಲ್ಲಿ ಅರ್ಜಿ ಸಲ್ಲಿಸಿದರು. ಒಂದು ಬ್ಯಾಂಕ್ ಅವರಿಗೆ ಶೇ 11.70 ಬಡ್ಡಿ ದರದಲ್ಲಿ 5 ವರ್ಷದ ಅವಧಿಗೆ ಸಾಲ ಕೊಡುವುದಾಗಿ ಹೇಳಿತು. ಅದಕ್ಕೆ ಮಾಸಿಕ ಕಂತು ₹ 13,897 ಕಟ್ಟಬೇಕಿತ್ತು. ರವಿ ಮತ್ತೊಂದು ಬ್ಯಾಂಕ್ ನಲ್ಲಿ ಸಾಲಕ್ಕಾಗಿ ಅರ್ಜಿ ಹಾಕಿದರು. ಆ ಬ್ಯಾಂಕ್ ಗ್ರಾಹಕನ ಕ್ರೆಡಿಟ್ ಸ್ಕೋರ್ ಚೆಕ್ ಮಾಡಿ ಶೇ 11.30 ಬಡ್ಡಿ ದರದಲ್ಲಿ ಸಾಲ ಕೊಡುವುದಾಗಿ ತಿಳಿಸಿತು. ಇದರಿಂದ ಮಾಸಿಕ ಕಂತಿನ ಮೊತ್ತದಲ್ಲಿ ₹ 126 ಕಡಿಮೆಯಾಯಿತು. ರವಿ ಮೊದಲು ಅರ್ಜಿ ಹಾಕಿದ್ದ ಬ್ಯಾಂಕ್‌ಗೆ ಕರೆ ಮಾಡಿ ಸಾಲ ಬೇಡ, ಬೇರೆ ಬ್ಯಾಂಕ್‌ನಲ್ಲಿ ಕಡಿಮೆ ಬಡ್ಡಿಗೆ ಸಾಲ ಲಭಿಸಿದೆ ಎಂದು ಹೇಳಿದರು. ಇದನ್ನು ತಿಳಿದ ಬ್ಯಾಂಕ್, ರವಿಗೆ ಶೇ 10.34 ರ ಬಡ್ಡಿ ದರದಲ್ಲಿ ಸಾಲ ಕೊಡುವುದಾಗಿ ಹೇಳಿತು. ಇದರಿಂದ ಇಎಂಐ ಮೊತ್ತ ₹ 13,470 ಕ್ಕೆ ಇಳಿಯಿತು. ಬಡ್ಡಿ ದರ ಸರಿಸುಮಾರು ಶೇ 3 ರಷ್ಟು ಇಳಿದ ಕಾರಣ ರವಿಗೆ ಒಟ್ಟು ₹ 25,604 (5 ವರ್ಷದ ಅವಧಿಯಲ್ಲಿ) ಉಳಿತಾಯವಾಯಿತು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಯಾವ ಆಧಾರದಲ್ಲಿ ಬ್ಯಾಂಕ್‌ಗಳು ಸಾಲ ಕೊಡುತ್ತವೆ ಯಾವ ಆಧಾರದಲ್ಲಿ ಸಾಲ ನಿರಾಕರಿಸುತ್ತವೆ?

ಸಂದರ್ಭ -1	ಸಂದರ್ಭ -2
ಆದಾಯ ₹ 50 ಸಾವಿರ	ಆದಾಯ ₹ 1 ಲಕ್ಷ
ಪ್ರಸ್ತುತ ಸಾಲಕ್ಕೆ ಪಾವತಿಸುತ್ತಿರುವ **EMI** ಮೊತ್ತ ₹ 10 ಸಾವಿರ	ಪ್ರಸ್ತುತ ಸಾಲಕ್ಕೆ ಪಾವತಿಸುತ್ತಿರುವ **EMI** ಮೊತ್ತ ₹ 50 ಸಾವಿರ
ಆದಾಯ ಮತ್ತು ಇಎಂಐ ಅನುಪಾತ ಶೇ 20 (₹10,000/₹50,000)	ಆದಾಯ ಮತ್ತು ಇಎಂಐ ಅನುಪಾತ ಶೇ 50 (₹50,000/₹1,00000)
ಆದಾಯದಲ್ಲಿ ಸಾಲಕ್ಕೆ ಮೀಸಲಿಡಬೇಕಾದ ಮೊತ್ತ ಶೇ 50 ರಷ್ಟು	ಆದಾಯದಲ್ಲಿ ಸಾಲಕ್ಕೆ ಮೀಸಲಿಡಬೇಕಾದ ಮೊತ್ತ ಶೇ 50 ರಷ್ಟು
ಪಡೆದುಕೊಳ್ಳಬಹುದಾದ ಗರಿಷ್ಠ ಸಾಲದ ಮೊತ್ತ ಶೇ 50 ರಷ್ಟು ಅಂದ್ರೆ (50% * 50,000= ₹ 25,000)	ಪಡೆದುಕೊಳ್ಳಬಹುದಾದ ಗರಿಷ್ಠ ಸಾಲದ ಮೊತ್ತ ಶೇ 50 ರಷ್ಟು ಅಂದ್ರೆ (50% * 1,00000 = ₹ 50,000)
ಆದಾಯಕ್ಕೆ ತಕ್ಕಂತೆ ಪಾವತಿಸಬಹುದಾದ ಹೆಚ್ಚುವರಿ ಸಾಲದ **EMI** ₹ 25,000 –₹ 10,000 = ₹ 15,000	ಆದಾಯಕ್ಕೆ ತಕ್ಕಂತೆ ಪಾವತಿಸಬಹುದಾದ ಹೆಚ್ಚುವರಿ ಸಾಲದ **EMI** ₹ 0
ಆದಾಯ ಮತ್ತು ಪ್ರಸ್ತುತ **EMI** ಗಣನೆಗೆ ತೆಗೆದುಕೊಂಡು ಸುಮಾರು 20 ವರ್ಷಗಳ ಅವಧಿಗೆ ಶೇ 10 ರ ಬಡ್ಡಿ ದರದಲ್ಲಿ ನೀಡಬಹುದಾದ ಹೆಚ್ಚುವರಿ ಸಾಲ ₹ 15 ಲಕ್ಷ	ಆದಾಯ ಮತ್ತು ಪ್ರಸ್ತುತ **EMI** ಗಣನೆಗೆ ತೆಗೆದುಕೊಂಡು ಸುಮಾರು 20 ವರ್ಷಗಳ ಅವಧಿಗೆ ಶೇ 10 ರ ಬಡ್ಡಿ ದರದಲ್ಲಿ ನೀಡಬಹುದಾದ ಹೆಚ್ಚುವರಿ ಸಾಲ ₹0
ಸಾಲ ಸಿಗುತ್ತದೆ	ಸಾಲ ಸಿಗುವುದಿಲ್ಲ

ಮೂರನೇ ವಾರವೂ ಷೇರುಪೇಟೆ ಗಳಿಕೆ

ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರ ಜಿಗಿತ ಕಂಡಿವೆ. ಏಪ್ರಿಲ್ 13ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ಕಂಡಿವೆ. 60,431 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.99 ರಷ್ಟು ಹೆಚ್ಚಳ ಕಂಡಿದೆ. 17,828 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ, ಶೇ 1.3 ರಷ್ಟು ಚೇತರಿಸಿಕೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಬಡ್ಡಿ ದರ ಹೆಚ್ಚಳಕ್ಕೆ ತಡೆ ಒಡ್ಡಲಿದೆ ಎಂಬ ಮಾಹಿತಿ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲಿ ಸಕಾರಾತ್ಮಕ ನೋಟ ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 5.25 ರಷ್ಟು ಹೆಚ್ಚಳವಾಗಿದೆ. ವಾಹನ ಸೂಚ್ಯಂಕ ಶೇ 3.6, ಲೋಹ ಸೂಚ್ಯಂಕ ಶೇ 3.2 ಮತ್ತು ಬ್ಯಾಂಕ್ ಸೂಚ್ಯಂಕ ಶೇ 2.6 ರಷ್ಟು ಸುಧಾರಿಸಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1.5 ರಷ್ಟು ಕುಸಿದಿದ್ದು ಮಾಧ್ಯಮ ಸೂಚ್ಯಂಕ ಶೇ 0.6 ರಷ್ಟು ಇಳಿಕೆಯಾಗಿದೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3355.16 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ಲಾಭ ಗಳಿಕೆಗೆ ಮುಂದಾದ ಕಾರಣ ₹ 411.42 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್ ಇ ಲಾರ್ಜ್ ಕ್ಯಾಪ್ ನಲ್ಲಿ ಅದಾನಿ ಗ್ರೀನ್ ಎನರ್ಜಿ, ಡಿವೀಸ್ ಲ್ಯಾಬೊರೇಟರೀಸ್, ಟಾಟಾ ಮೋಟರ್ಸ್ ಡಿವಿಆರ್, ಐಷರ್ ಮೋಟರ್ಸ್, ಡಿಎಲ್ ಎಫ್, ಅದಾನಿ ಟ್ರಾನ್ಸ್ ಮಿಷನ್ ಮತ್ತು ಟಾಟಾ ಮೋಟರ್ಸ್ ಗಳಿಕೆ ಕಂಡಿವೆ.

ಮುನ್ನೋಟ: ಈ ವಾರ ಹ್ಯಾತ್ ವೇ, ಜಸ್ಟ್ ಡೈಯಲ್, ಸಿಟಾಡೆಲ್, ಟಿವಿ18, ನೆಟ್‌ವರ್ಕ್ 18, ಐಸಿಐಸಿಐ ಬ್ಯಾಂಕ್, ಟಾಟಾ ಕಾಫಿ, ಕ್ರಿಸೆಲ್, ಟಾಟಾ ಕಮ್ಯೂನಿಕೇಶನ್ಸ್, ಯೆಸ್ ಬ್ಯಾಂಕ್, ಐಸಿಐಸಿಐ ಲೊಂಬಾರ್ಡ್ ಜನರಲ್ ಇನ್ಶೂರೆನ್ಸ್ ಕಂಪನಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.



ಐ.ಎಸ್ ಉಗ್ರರ ದಾಳಿ: 31 ಸಾವು

ಬೈರುತ್ (ಎಎಫ್‌ಪಿ): ಯುದ್ಧಪೀಡಿತ ಸಿರಿಯಾದಲ್ಲಿ ಭಾನುವಾರ ಶಂಕಿತ ಐ.ಎಸ್ (ಇಸ್ಲಾಮಿಕ್ ಸ್ಟೇಟ್) ಉಗ್ರರ ಗಂಪು ನಡೆಸಿರುವ ಭೀಕರ ದಾಳಿಯಲ್ಲಿ 31 ಜನರು ಮೃತಪಟ್ಟಿದ್ದಾರೆ.

ಕೇಂದ್ರ ನಗರ ಹಮಾದ ಪೂರ್ವ ಮರುಭೂಮಿಯಲ್ಲಿ ಈ ಘಟನೆ ನಡೆದಿದೆ. ಮೃತರಲ್ಲಿ ಸಿರಿಯಾ ಸರ್ಕಾರದ 12 ಸೈನಿಕರು ಸೇರಿದ್ದಾರೆ ಎಂದು ಸಿರಿಯಾದ ಅಧಿಕೃತ ಸುದ್ದಿ ಸಂಸ್ಥೆ 'ಸನಾ (ಎಸ್‌ಎಎನ್‌ಎ)' ವರದಿ ಮಾಡಿದೆ. ಪ್ರತ್ಯೇಕ ಘಟನೆಯಲ್ಲಿ ಜಿಹಾದಿ ಉಗ್ರರು ಕುರಿ ಕಾಯುವ ನಾಲ್ವರನ್ನು ಕೊಂದು, ಇಬ್ಬರನ್ನು ಅಪಹರಿಸಿದ್ದಾರೆ ಎಂದೂ ಮಾನವ ಹಕ್ಕುಗಳ ಸಂಸ್ಥೆಯೊಂದು ವರದಿಯಲ್ಲಿ ತಿಳಿಸಿದೆ.

ಬಾನೆಟ್ ಮೇಲೆ ಪೊಲೀಸ್: 20 ಕಿ.ಮೀ. ಚಲಿಸಿದ ಕಾರು!

ಮುಂಬೈ: ಮಾದಕ ವ್ಯಸನದ ಅಮಲಿನಲ್ಲಿದ್ದ ಯುವಕನೊಬ್ಬ ಕಾರಿನ ಬಾನೆಟ್ ಮೇಲೆ ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರನ್ನು 20 ಕಿ.ಮೀ. ದೂರಕ್ಕೆ ಕೊಂಡೊಯ್ದ ಆಘಾತಕಾರಿ ಘಟನೆ ನವಿ ಮುಂಬೈ ಉಪನಗರದಲ್ಲಿ ಶನಿವಾರ ನಡೆದಿದೆ. ಕಾನ್‌ಸ್ಟೆಬಲ್ ಸಿದ್ದೇಶ್ವರ ಮಾಲಿ (37) ಸುರಕ್ಷಿತರಾಗಿದ್ದಾರೆ. ಆರೋಪಿಯನ್ನು ಆದಿತ್ಯ ಬೆಂಬ್ಡೆ (22) ಎಂದು ಗುರುತಿಸಲಾಗಿದೆ.

ಆರ್‌ಎಸ್‌ಎಫ್ ಜೊತೆ ಸಂಧಾನದ ಪ್ರಶ್ನೆ ಇಲ್ಲ –ಸೇನೆ ಹೇಳಿಕೆ

ಸುಡಾನ್‌ನಲ್ಲಿ ಘರ್ಷಣೆ: 56 ಸಾವು

ಖಾರ್ಟೂಮ್ (ಎಪಿ): ರಾಜಧಾನಿ ಖಾರ್ಟೂಮ್ ಸೇರಿದಂತೆ ಸುಡಾನ್‌ನ ವಿವಿಧೆಡೆ ಭಾನುವಾರ ಸೇನೆ ಮತ್ತು ಅರೆಸೇನಾ ಪಡೆ ನಡುವೆ ತೀವ್ರ ಘರ್ಷಣೆ ನಡೆದಿದ್ದು, ಕನಿಷ್ಠ 56 ಮಂದಿ ಸತ್ತು, ಹಲವರು ಗಾಯಗೊಂಡಿದ್ದಾರೆ. ದೇಶದಾದ್ಯಂತ ಅಶಾಂತಿ, ಉದ್ವಿಗ್ನ ಸ್ಥಿತಿ ಮೂಡಿದೆ.

2021ರಲ್ಲಿ ಸೇನಾ ದಂಗೆಯ ಬಳಿಕ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಹಳಿತಪ್ಪಿತ್ತು. ಈಗಿನ ಬೆಳವಣಿಗೆಯೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆ ಸರಿದಾರಿಗೆ ಬರುವ ನಿರೀಕ್ಷೆ ಕ್ಷೀಣಿಸಿದೆ. ಇನ್ನೊಂದೆಡೆ, ಸೇನೆ ಮತ್ತು ಅರೆಸೇನಾಪಡೆ (ಆರ್‌ಎಸ್‌ಎಫ್) ನಡುವೆ ಮೂಡಿದ್ದ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಂಡಿದೆ.

ಉಭಯ ಪಡೆಗಳ ನಡುವೆ ಶನಿವಾರ ಘರ್ಷಣೆ ಆರಂಭವಾಗಿದ್ದು, ಭಾನುವಾರವೂ ಮುಂದುವರಿಯಿತು. ಎರಡೂ ಪಡೆಗಳು ಪರಸ್ಪರರ ತಾಣಗಳ ಮೇಲೆ ಹಕ್ಕು ಸಾಧಿಸಿರುವುದಾಗಿ ಹೇಳಿಕೊಂಡಿವೆ.

ಸುಡಾನ್‌ನ ನಗರಗಳನ್ನು ಶಸ್ತ್ರಸಜ್ಜಿತ ವಾಹನಗಳು, ಮಷೀನ್ ಗನ್ ಜೋಡಿಸಲಾದ ಟ್ರಕ್‌ಗಳು ಆವರಿಸಿವೆ, ಯುದ್ಧ ವಿಮಾನಗಳು ಹಾರಾಡುತ್ತಿವೆ. ನಮ್ಮ ಪರ ಹತ್ತು ಸಾವಿರಕ್ಕೂ ಹೆಚ್ಚು ಯೋಧರು ರಾಜಧಾನಿಯಲ್ಲೇ ಇದ್ದಾರೆ ಎಂದು ಉಭಯ ಬಣಗಳು ಹೇಳಿಕೊಂಡಿವೆ.

ಭಾನುವಾರ ಬೆಳಿಗ್ಗೆವರೆಗೆ 56 ಜನ ಸತ್ತಿದ್ದು, 595 ಜನ ಗಾಯಗೊಂಡಿದ್ದರು. ರಾಜಧಾನಿ ಖಾರ್ಟೂಮ್ ಮತ್ತು ಒಂಡರ್ಮನ್‌ನಲ್ಲಿ ತಲಾ ಕನಿಷ್ಠ ಆರು, ದಕ್ಷಿಣ ಡಾರ್ಫರ್ ಪ್ರಾಂತ್ಯದ ರಾಜಧಾನಿ ನ್ಯಾಲಾ ಬಳಿ ಎಂಟು ಜನರು ಅಸುನೀಗಿದರು.

ಒಂಡರ್ಮನ್ ನಗರದಲ್ಲಿ ಆರ್‌ಎಸ್‌ಎಫ್ ನೆಲೆಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಸೇನೆ ಹೇಳಿದೆ. ವಿಮಾನ ಸಂಚಾರದಲ್ಲಿ ವ್ಯತ್ಯಯವಾಗಿದೆ. ಖಾರ್ಟೂಮ್ ಅಂತರರಾಷ್ಟ್ರೀಯ ವಿಮಾನನಿಲ್ದಾಣ ಮುಚ್ಚಿರುವ ಬಗ್ಗೆ ಅಧಿಕೃತ ಹೇಳಿಕೆ ನೀಡಿಲ್ಲ. ಹೆಚ್ಚಿನ ವಿಮಾನಗಳ ಸಂಚಾರ ರದ್ದುಗೊಂಡಿದೆ.

ಸೌದಿ ಅರೇಬಿಯಾ ನ್ಯಾಷನಲ್ ಏರ್‌ಲೈನ್‌ಗೆ ಸೇರಿದ ವಿಮಾನ ಸೇರಿ ಎರಡು ವಿಮಾನಗಳಿಗೆ ಬೆಂಕಿ ಹೊತ್ತಿಕೊಂಡಿತ್ತು. ಸೌದಿ ಅರೇಬಿಯಾ ಏರ್‌ಲೈನ್ಸ್ ಇದನ್ನು ಅವಘಡ ಎಂದು ಹೇಳಿದೆ. ವಿಮಾನ ನಿಲ್ದಾಣದಲ್ಲಿ ಇಬ್ಬರು ನಾಗರಿಕರು ಮೃತಪಟ್ಟರು ಎಂದು ವೈದ್ಯರು ತಿಳಿಸಿದ್ದಾರೆ.

ಸೇನೆಯ ಮುಖ್ಯಸ್ಥರು ಆರ್‌ಎಸ್‌ಎಫ್ ಅನ್ನು 'ಕ್ರಿಮಿನಲ್' ಎಂದು ಟೀಕಿಸಿದ್ದಾರೆ. ಆರ್‌ಎಸ್‌ಎಫ್ ಜೊತೆಗೆ ಸಂಧಾನದ ಸಾಧ್ಯತೆಗಳೇ ಇಲ್ಲ ಎಂದು ಸೇನೆ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಆರ್‌ಎಸ್‌ಎಫ್ ಶಕ್ತಿ ಕುಂದಿಸಲು ಆದ್ಯತೆ ನೀಡಲಾಗುವುದು ಎಂದು ಸ್ಪಷ್ಟಪಡಿಸಿದೆ.

'ಇಂತಹ ಹೋರಾಟದ ಪರಿಸ್ಥಿತಿಯನ್ನು ಹಿಂದೆಂದೂ ನೋಡಿರಲಿಲ್ಲ' ಎಂದು ಸ್ಥಳೀಯ ನಿವಾಸಿ ಅಬ್ದೆಲ್ ಹಮೀದ್ ಮುಸ್ತಾಫಾ ಪ್ರತಿಕ್ರಿಯಿಸಿದರೆ, 'ಎಲ್ಲೆಡೆ ಬೆಂಕಿ, ಸ್ಫೋಟದ ದೃಶ್ಯಗಳೇ ಕಾಣಿಸುತ್ತಿವೆ' ಎಂದು ಒಂಡರ್ಮನ್‌ನ ಸಾರ್ವಜನಿಕ ಆಸ್ಪತ್ರೆ ವೈದ್ಯ ಅಮಲ್ ಮೊಹಮ್ಮದ್ ಅವರು ಹೇಳಿದರು.



ಸುಡಾನ್‌ನ ರಾಜಧಾನಿ ಖಾರ್ಟೂಮ್‌ನ ವಸತಿ ಪ್ರದೇಶವೊಂದರಲ್ಲಿ ನಡೆದ ಸಂಘರ್ಷದಿಂದಾಗಿ ಭಾನುವಾರ ಕಪ್ಪು ಹೊಗೆ ಆವರಿಸಿತ್ತು–ಎಎಫ್‌ಪಿ ಚಿತ್ರ

ಸಂಘರ್ಷ ಸ್ಥಿತಿ ತಕ್ಷಣ ಶಮನಗೊಳ್ಳದಿದ್ದರೆ ಪ್ರಾದೇಶಿಕ ಬಿಕ್ಕಟ್ಟು ಸೃಷ್ಟಿಯಾಗಲಿದೆ. ಗುಂಡಿನ ದಾಳಿ ಮತ್ತು ಸಂಘರ್ಷವನ್ನು ತಕ್ಷಣವೇ ನಿಲ್ಲಿಸಬೇಕು

ಅಬ್ದುಲ್ಲಾ ಹಮ್‌ಡೊಕ್, ಮಾಜಿ ಪ್ರಧಾನಿ (2021 ಸೇನಾ ದಂಗೆ ಬಳಿಕಅಧಿಕಾರ ಕಳೆದುಕೊಂಡವರು)

'ದೇಶದ ಮೇಲೆ ಹಿಡಿತ ಸಾಧಿಸುವ ಗುರಿ'

ದೇಶದ ಆಡಳಿತದ ಮೇಲೆ ಹಿಡಿತ ಸಾಧಿಸುವ ಸಂಬಂಧ ಸೇನೆ ಮತ್ತು ಶಕ್ತಿಯುತ ಅರೆಸೇನಾ ಪಡೆಯ ನಡುವೆ ಇದ್ದ ವೈಮನಸ್ಯ ಈಗ ಸಂಘರ್ಷಕ್ಕೆ ನಾಂದಿಯಾಗಿದೆ.

2021ರ ಅಕ್ಟೋಬರ್‌ನಲ್ಲಿ ಸುಡಾನ್‌ನಲ್ಲಿ ಸೇನಾ ದಂಗೆ ನಡೆದಿತ್ತು. ಆಗಿನ ಪ್ರಧಾನಿ ಅಬ್ದುಲ್ಲಾ ಹಮ್‌ಡೊಕ್ ಅವರನ್ನು ಪದಚ್ಯುತಗೊಳಿಸಿ ಉಭಯ ಪಡೆಗಳು ಅಧಿಕಾರವನ್ನು ಕೈವಶ ಪಡೆದಿದ್ದವು.

ಸೇನೆ ಮತ್ತು ಹಾಗೂ ತನ್ನದೇ ಸಾಮರ್ಥ್ಯವುಳ್ಳ ಅರೆಸೇನಾ ಪಡೆ –ರ್‍ಯಾಪಿಡ್ ಸಪೋರ್ಟ್ ಫೋರ್ಸ್ (ಆರ್‌ಎಸ್‌ಎಫ್) ಒಟ್ಟಾಗಿ ಸೇನಾ ದಂಗೆ ನಡೆಸಿದ್ದವು. ಸೇನೆಯೊಂದಿಗೆ ಆರ್‌ಎಸ್‌ಎಫ್ ಕೈಜೋಡಿಸಿತ್ತು.

ಸೇನೆ ನೇತೃತ್ವವನ್ನು ಅಬ್ದೆಲ್ ಫತ್ತಾ ಅಲ್ ಬುರ್ಹಾನ್ ವಹಿಸಿದ್ದರೆ, ಉಪ ನಾಯಕನಾಗಿ ರ್‍ಯಾಪಿಡ್ ಸಪೋರ್ಟ್ ಫೋರ್ಸ್ ಕಮಾಂಡರ್ ಮೊಹಮ್ಮದ್ ಹಮ್ದಾನ್ ಡಾಗ್ಲೊ ಅವರು ಇದ್ದಾರೆ. ಅಧಿಕಾರಕ್ಕಾಗಿ ಈ ಇಬ್ಬರ ನಡುವಣ ಭಿನ್ನಮತ ಸಂಘರ್ಷಕ್ಕೆ ಕಾರಣವಾಗಿದೆ.

ಭಾರತೀಯ ಬಲಿ

ನವದೆಹಲಿ (ಪಿಟಿಐ): ಸುಡಾನ್ ರಾಜಧಾನಿ ಖಾರ್ಟೂಮ್‌ನಲ್ಲಿ ಸೇನೆ ಮತ್ತು ಅರೆಸೇನಾ ಪಡೆ ನಡುವೆ ನಡೆದ ಘರ್ಷಣೆಯಲ್ಲಿ ಗುಂಡಿನದಾಳಿಗೆ ಸಿಕ್ಕು ಭಾರತೀಯರೊಬ್ಬರು ಮೃತಪಟ್ಟಿದ್ದಾರೆ.

ಮೃತರನ್ನು ಆಲ್ಬರ್ಟ್ ಅಗಸ್ಟೀನ್ ಎಂದು ಗುರುತಿಸಿದ್ದು, ಇವರು ಅವರು ಸುಡಾನ್‌ನ ದಾಲ್ ಗ್ರೂಪ್‌ನಲ್ಲಿ ಉದ್ಯೋಗಿಯಾಗಿದ್ದರು ಎಂದು ಖಾರ್ಟೂಮ್‌ನಲ್ಲಿರುವ ಭಾರತೀಯ ರಾಯಭಾರಿ ದೃಢಪಡಿಸಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಭಾರತೀಯನ ಸಾವಿಗೆ ಸಂತಾಪ ವ್ಯಕ್ತಪಡಿಸಿದ್ದು, ಸುಡಾನ್‌ನ ಬೆಳವಣಿಗೆ ಕಳವಳಕಾರಿ ಯಾದುದು ಎಂದು ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ನಾಯಿ ದಾಳಿ: ವ್ಯಕ್ತಿ ಸಾವು

ಅಲೀಗಢ (ಉತ್ತರ ಪ್ರದೇಶ) (ಪಿಟಿಐ): ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯದ (ಎಎಂಯು) ಆವರಣದಲ್ಲಿ ಬೀದಿ ನಾಯಿಗಳ ಗುಂಪು ದಾಳಿ ಮಾಡಿದ ಪರಿಣಾಮ ವ್ಯಕ್ತಿಯೊಬ್ಬರು ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಯಾಂಪಸ್ ಬಳಿಯ ಜನವಸತಿ ಪ್ರದೇಶವೊಂದರ ನಿವಾಸಿ ಸಫ್ದಾರ್ ಅಲಿ ಎಂಬವರು ವಾಯುವಿಹಾರಕ್ಕಾಗಿ ಬಂದಿದ್ದ ವೇಳೆ ನಾಯಿಗಳು ಅವರ ಮೇಲೆ ದಾಳಿ ನಡೆಸಿದವು. ಕೂಡಲೇ ಪೊಲೀಸರು ಸ್ಥಳಕ್ಕೆ ಧಾವಿಸಿದರು. ಅಷ್ಟರಲ್ಲಿ ಸಫ್ದಾರ್ ಅವರು ಮೃತಪಟ್ಟಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಅಣ್ಣಾಮಲೈ ವಿರುದ್ಧ ಮಾನನಷ್ಟ ನೋಟಿಸ್

ಚೆನ್ನೈ (ಪಿಟಿಐ): ತಮಿಳುನಾಡು ಬಿಜೆಪಿ ಮುಖ್ಯಸ್ಥ ಕೆ. ಅಣ್ಣಾಮಲೈ ಅವರಿಗೆ ₹500 ಕೋಟಿ ಮಾನನಷ್ಟ ಪರಿಹಾರ ನೀಡುವಂತೆ ರಾಜ್ಯದ ಆಡಳಿತಾರೂಢ ಡಿಎಂಕೆ ನ್ಯಾಯಾಂಗ ನೋಟಿಸ್ ಜಾರಿ ಮಾಡಿದೆ.

ಡಿಎಂಕೆ ಮುಖ್ಯಸ್ಥ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಗುರಿಯಾಗಿಸಿಕೊಂಡು ಅಣ್ಣಾಮಲೈ ಅವರು ಭ್ರಷ್ಟಾಚಾರದ ಆರೋಪ ಮಾಡಿದ್ದರು. ಅದನ್ನು 'ಡಿಎಂಕೆ ಫೈಲ್ಸ್' ಎಂದು ಕರೆದಿದ್ದರು. ಈ ಆರೋಪಗಳನ್ನು ಪ್ರಶ್ನಿಸಿ ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ 10 ಪುಟಗಳ ನ್ಯಾಯಾಂಗ ನೋಟಿಸ್ ಹೊರಡಿಸಿದ್ದಾರೆ.

'ವಂದೇ ಭಾರತ್ ಮಂಗಳೂರುವರೆಗೆ ವಿಸ್ತರಿಸಿ'

ತಿರುವನಂತಪುರ (ಪಿಟಿಐ): ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸಂಚಾರವನ್ನು ಮಂಗಳೂರಿನ ವರೆಗೂ ವಿಸ್ತರಿಸಬೇಕು ಎಂದು ಕೇರಳದ ಯುಡಿಎಫ್ ನೇತೃತ್ವದ ವಿರೋಧ ಪಕ್ಷಗಳು ಕೇಂದ್ರ ರೈಲ್ವೆ ಸಚಿವಾಲಯವನ್ನು ಒತ್ತಾಯಿಸಿವೆ. ರೈಲಿನ ಸಂಚಾರವನ್ನು ಮಂಗಳೂರಿನ ವರೆಗೆ ವಿಸ್ತರಿಸಿದರೆ ಕಾಸರಗೋಡು ಜಿಲ್ಲೆಯ ಜನರಿಗೂ ಅದರ ಪ್ರಯೋಜನ ಲಭಿಸಲಿದೆ ಎಂದು ಸಚಿವಾಲಯಕ್ಕೆ ಬರೆದಿರುವ ಪತ್ರದಲ್ಲಿ ಕೇರಳ ವಿಧಾನಸಭೆಯ ವಿಪಕ್ಷದ ನಾಯಕ ವಿ.ಡಿ.ಸತೀಶನ್ ಉಲ್ಲೇಖಿಸಿದ್ದಾರೆ.

ದುಬೈನಲ್ಲಿ ಅಗ್ನಿ ದುರಂತ: ನಾಲ್ವರು ಭಾರತೀಯರು ಸೇರಿ 16 ಸಾವು

ದುಬೈ (ಪಿಟಿಐ): ಇಲ್ಲಿನ ವಸತಿ ಸಂಕೀರ್ಣವೊಂದರಲ್ಲಿ ಭಾನುವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ನಾಲ್ವರು ಭಾರತೀಯರು ಸೇರಿದಂತೆ ಒಟ್ಟು 16 ಮಂದಿ ಮೃತಪಟ್ಟಿದ್ದಾರೆ.

ಇಲ್ಲಿನ ಅಲ್ ರಸ್ ಪ್ರದೇಶದಲ್ಲಿರುವ ವಸತಿ ಸಂಕೀರ್ಣದ 4ನೇ ಮಹಡಿಯಲ್ಲಿ ಕಾಣಿಸಿಕೊಂಡ ಬೆಂಕಿ, ಬಳಿಕ ಇತರ ಮಹಡಿಗಳಿಗೂ ವ್ಯಾಪಿಸಿದೆ. ಅವಘಡದಲ್ಲಿ ಒಟ್ಟು 9 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ನಾಲ್ವರು ಭಾರತೀಯರು ಮೃತಪಟ್ಟಿರುವುದನ್ನು ಇಲ್ಲಿರುವ ಭಾರತದ ಕಾನ್ಸಲ್ ಕಚೇರಿ ದೃಢಪಡಿಸಿದೆ.

'ಮೃತ ಭಾರತೀಯರನ್ನು ಕೇರಳದ ರಿಜೇಶ್ ಕಳಂಗದನ್ (38), ಅವರ ಪತ್ನಿ ಜೇಶಿ (32) ಹಾಗೂ ಗುಡು ಸಲಿಯಕೂಂಡು (49) ಮತ್ತು ಇಮಾಂ ಖಾಸಿಂ ಅಬ್ದುಲ್ ಖಾದರ್ (43) ಎಂದು ಗುರುತಿಸಲಾಗಿದೆ' ಎಂದು ಭಾರತ ಕಾನ್ಸಲರ್ ಆಗಿರುವ ಬಿಜೇಂದರ್ ಸಿಂಗ್ ತಿಳಿಸಿದರು.

ಮೃತರಲ್ಲಿ ಮೂವರು ಪಾಕಿಸ್ತಾನಿಯರು, ನೈಜೀರಿಯಾದ ಮಹಿಳೆ ಸೇರಿದ್ದಾರೆ. ಉಳಿದವರನ್ನು ಗುರುತಿಸುವ ಕಾರ್ಯ ನಡೆದಿದೆ. ದುಬೈ ನಾಗರಿಕ ರಕ್ಷಣಾ ಪಡೆ ಸಿಬ್ಬಂದಿ, ಅಗ್ನಿಶಾಮಕ ಸೇವೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ಬೆಂಕಿ ನಂದಿಸಲು ಹಾಗೂ ಕಟ್ಟಡದಲ್ಲಿ ಸಿಲುಕಿದ್ದವರ ರಕ್ಷಣೆಗೆ ಕ್ರಮ ವಹಿಸಿದರು.

ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅವಘಡ ಸಂಭವಿಸಿದ ಕಟ್ಟಡಕ್ಕೆ ಪ್ರಸ್ತುತ ಬೀಗಮುದ್ರೆ ಮಾಡಲಾಗಿದೆ.

ದುಬೈನಲ್ಲಿ ಇರುವ ಗಗನಚುಂಬಿ ಕಟ್ಟಡಗಳಲ್ಲಿ ಅಗ್ನಿ ವ್ಯಾಪಿಸಬಹುದಾದ ಪರಿಕರಗಳನ್ನು ಹೆಚ್ಚಾಗಿ ಬಳಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಬೆಂಕಿ ಅವಘಡ ಹೆಚ್ಚಾಗಲು ಕಾರಣ ಎನ್ನಲಾಗಿದೆ.

ಅವಘಡ ಕುರಿತು ಸಮಗ್ರ ತನಿಖೆ ನಡೆಸಿ, ವರದಿ ಸಲ್ಲಿಸಲು ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ದುಬೈನ ನಾಗರಿಕ ರಕ್ಷಣಾ ಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ಶಿಕ್ಷಣ

ಎಟಿಐಎನ್‌ಎಫ್‌–2023

ವಿದ್ಯಾರ್ಥಿ ವೇತನ ಕೈಪಿಡಿ

ಅಬ್ದುಲ್ ಕಲಾಂ ಟೆಕ್ನಾಲಜಿ ಇನ್ನೋವೇಷನ್ ನ್ಯಾಷನಲ್ ಫೆಲೋಷಿಪ್-2023 (ಎಟಿಐಎನ್‌ಎಫ್‌), – ಇದು ಎಂಜಿನಿಯರಿಂಗ್, ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಉನ್ನತ ಸಾಧನೆ ಮಾಡುವಂತಹ ಎಂಜಿನಿಯರ್‌ಗಳನ್ನು ಗುರುತಿಸಿ, ಪ್ರೋತ್ಸಾಹಿಸಿ, ಅವರ ಸಂಶೋಧನೆಗೆ ನೆರವು ನೀಡುವುದಕ್ಕಾಗಿ ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್ (ಐಎನ್‌ಎಇ) ಸಂಸ್ಥೆ ರೂಪಿಸಿರುವ ಫೆಲೋಷಿಪ್ ಕಾರ್ಯಕ್ರಮ.

ಅರ್ಹತೆ: ಭಾರತ ಅಥವಾ ವಿದೇಶದಲ್ಲಿ ವೃತ್ತಿಪರ ಶಿಕ್ಷಣ ಕಲಿತಿರುವ ಅಭ್ಯರ್ಥಿಗಳು ಈ ಫೆಲೋಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಎಂಜಿನಿಯರಿಂಗ್ ಪದವಿ ಪಡೆದಿರಬೇಕು. ಫೆಲೋಷಿಪ್ ನೀಡುವ ಸಮಯದಲ್ಲಿ ತಾವು ಕೆಲಸ ಮಾಡುವ ಸಂಸ್ಥೆಯಲ್ಲಿ ಐದು ವರ್ಷಗಳ ಸೇವೆ ಬಾಕಿ ಇರಬೇಕು. ಅಭ್ಯರ್ಥಿಗಳು ಫೆಲೋಷಿಪ್ ಪಡೆಯುವ ಅವಧಿಯಲ್ಲಿ, ಬೇರೆ ಯಾವುದೇ ಫೆಲೋಷಿಪ್ ಹೊಂದಿರಬಾರದು.

ಆರ್ಥಿಕ ನೆರವು: ಮಾಸಿಕ ₹25 ಸಾವಿರ ಮತ್ತು ಇತರೆ ಸೌಲಭ್ಯಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 30-06-2023

ಅರ್ಜಿ ಸಲ್ಲಿಸುವ ವಿಧಾನ: ಇಮೇಲ್ ಮೂಲಕ ಮಾತ್ರ(inaehq@inae.in)

ಹೆಚ್ಚಿನ ಮಾಹಿತಿಗೆ: www.b4s.in/praja/AKTINF2

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

MATHEMATICS

MULTIPLE CHOICE QUESTIONS

48) A Survy was conducted of the TV program watched by 120 students of aschool hostel. It was learnt that 70 students watched ` Discovry channel, 56 watched Sports channel and 24 watched both the programs. Then the number of students who did not watch T V programs on that day was

A) 18 B) 14
C) 16 D) 12

Ans:- A

Expln:- No of Students who did not watch T V
$= 120-(70+56-24) = 18$

49) The Cost and revenue functions of a product are given by $C(x) = 20x + 4000$ and $R(x) = 60x + 2000$ respectvely, where x is the number of items produced and sold. Then the number of Items to be sold to get some profit is............

A) Less than 40 B) Equal to 50
C) Greater than 50 D) Greater than 60

Ans:- C

Expln:- Profit = Revenue − Cost
$= (60x+2000) - (20x+4000)$
$= 40x - 2000$

To, earn Some profit, $= 40x - 2000$ i.e $x > 50$
i.e. the manufacture must sell more than 50 items to get some profit

50) $\frac{\sin x - \sin 3x}{\sin^2 x - \cos^2 x}$ is equal to

(A) $-2 \sin x$ (B) $\frac{2}{\sin x}$
(C) $\frac{1}{\sin x}$ (D) $2 \sin x$

Ans : (D) $2 \sin x$

Expln :– $\sin C - \sin D = 2\frac{\cos C+D}{2}.\sin\frac{C-D}{2}$

$\therefore \sin x - \sin 3x = 2\cos 2x.\sin(-x) = -2\cos 2x.\sin x$

$\therefore \frac{\sin x - \sin 3x}{\sin^2 x - \cos^2 x} = \frac{-2\cos 2x \sin x}{-(\cos^2 x - \sin^2 x)} = \frac{-2\cos 2x \sin x}{-\cos 2x}$

$= 2 \sin x.$

51) In a $\triangle ABC$, cosec A (sin B cos C + cos B sin C) =.........................

A) 0 B) 1
c) (-1) D) none of these

Ans: (B) 1

Expln:-

$\operatorname{cosec} A(\sin B\cos C + \cos B \sin C) = \frac{1}{\sin A}\sin(B+C)$

$A+B+C = 180^0 \quad \therefore B+C = 180^0 - A$

$= \frac{1}{\sin A}\sin(180^0 - A) = \frac{\sin A}{\sin A} = 1.$

52) Given two vectors $\hat{i} - \hat{j}$ and $\hat{i} - 2\hat{j}$. the unit vector, coplanar with the two given vectors and perpendicular to (I – j) is

A) $\frac{1}{\sqrt{2}}(\hat{i}+\hat{j})$ (B) $\frac{1}{\sqrt{5}}(2\hat{i}+\hat{j})$
(C) $\pm\frac{1}{\sqrt{2}}(\hat{i}+\hat{j})$ (D) None of these

Ans : (C) $\pm\frac{1}{\sqrt{2}}(\hat{i}+\hat{j})$

Expln :– Let $\vec{\alpha} = x\hat{i} + y\hat{j} + zk$ be the required vector.
$\vec{\alpha}$ is coplanar with $\hat{i} - \hat{j}, \hat{i} - 2\hat{j}$.

$\therefore \begin{vmatrix} x & y & z \\ 1 & -1 & 0 \\ 1 & -2 & 0 \end{vmatrix} = 0$ i.e., $z(-2+1) = 0$ i.e., $z = 0$

$\therefore \vec{\alpha} = x\hat{i} + y\hat{j}$. Also $\vec{\alpha}$ is $\perp$r to $\hat{i} - \hat{j}$.
$\therefore x - y = 0 \Rightarrow x = y$, i.e., $\vec{\alpha} = x(\hat{i} - \hat{j})$
$|\vec{\alpha}| = \sqrt{x^2 + x^2} = \pm\sqrt{2}\,x.$

Unit vector $= \frac{\vec{\alpha}}{|\vec{\alpha}|} = \frac{x\hat{i} + x\hat{j}}{\pm\sqrt{2}\,x} = \pm\frac{1}{\sqrt{2}}(\hat{i} - \hat{j})$

53) If $\vec{a}, \vec{b}, \vec{c}$ **are three zero vectors such that each one f them is perpendicular to the sum of the other two vectors, then the value of** $|\vec{a}, \vec{b}, \vec{c}|^2$ is

(A) $|\vec{a}|^2 + |\vec{b}|^2 + |\vec{c}|^2$ (B) $|\vec{a}| + |\vec{b}| + |\vec{c}|$
(C) $2\left(|\vec{a}|^2 + |\vec{b}|^2 + |\vec{c}|^2\right)$ (D) None of the above


Ans:- D

54) The slant height of a cone is fixed at 7 cm. if the rate of increase of its height is 0.3 cm/sec, then the rate of increase of its volume when its height is 4 cm is

(A) $\frac{\pi}{2}$ cc/sec (B) π cc/sec
(C) $\frac{\pi}{5}$ cc/sec (D) $\frac{\pi}{10}$ cc/sec

Ans : (D) $\frac{\pi}{10}$ cc/sec

Expln:- Given, slant height is fixed at 7 cm.
$\therefore h^2 + r^2 = 7^2$
When $h = 4, r^2 = 49 - 16 = 33.$



We know $V = \frac{1}{3}\pi r^2 h.$

$\frac{dV}{dt} = \frac{\pi}{3}\left(r^2\frac{dh}{dt} + h.\,2r\frac{dr}{dt}\right)$

As $h^2 + r^2 = 7^2$, $2h\frac{dh}{dt} + 2r\frac{dr}{dt} = 0$

(Contd.......)

PHYSICS

39. A car moves from A to B with a speed of 30 kmph and from B to A with a speed of 20 kmph. What is the average speed of the car?

(a) 50 kmph (b) 25 kmph
(c) 10 kmph (d) 24 kmph

Soln: (d): let *S* be distance between *A* and *B*.

Let t_1 be time taken by the car to move from *A* to *B* with speed v_1 and

t_2 be time taken by the car to move from *B* to *A* with speed v_2. Then

$t_1 = \frac{S}{v_1}$ and $t_2 = \frac{S}{v_2}$

Average speed of the car

$v_{av} = \frac{\text{Total distance travelled}}{\text{Total time taken}} = \frac{2S}{t_1 + t_2}$

$= \frac{2S}{\frac{S}{v_1} + \frac{S}{v_2}} = \frac{2v_1 v_2}{v_1 + v_2}$

Here, $v_1 = 30$ kmph, $v_2 = 20$ kmph

$\therefore v_{av} = \frac{2 \times 30 \times 20}{30 + 20} = 24$ kmph

40. The output of a step-down transformer is measured to be 24 V when connected to a 12 watt light bulb. The value of the peak current is

a) $1\sqrt{2}$ A b) $\sqrt{2}$ A
c) 2 A d) $2\sqrt{2}$ A

Ans:-a

41. One requires 11 eV of energy to dissociate a carbon monoxide molecule into carbon and oxygen atoms. The minimum frequency of the appropriate electromagnetic radiation to achieve the dissociation lies in.

a) visible region b) infrared region
c) ultraviolet region d) microwave region

Ans:C

42. A linearly polarised electromagnetic wave given as $E = E_o\hat{i}\cos(kz - \omega t)$ **is incident normally on a perfectly reflecting infinite wall at z= a. Assuming that the material of the wall is optically inactive, the reflected wave will be given as-**

a) $E_r = -E_o\hat{i}\cos(kz - \omega t)$
b) $E_r = E_o\hat{i}\cos(kz + \omega t)$
c) $E_r = -E_o\hat{i}\cos(kz + \omega t)$
d) $E_r = E_o\hat{i}\sin(kz - \omega t)$

Ans :b

43. Light with an energy flux of 20 W/cm² falls on a non-reflecting surface at normal incidence. If the surface has an area of 30 cm². The total momentum delivered (for complete absorption) during 30 minutes is

a) 36×10^{-5} kg m/s b) 36×10^{-4} kg m/s
c) 108×10^{4} kg m/s d) 1.08×10^{7} kg m/s

Ans:- b

44. A body starts from rest and moves with constant acceleration for *t* s. It travels a distance x_1 in first half time and x_2 in next half of time, then

(a) $x_2 = 3x_1$ (b) $x_2 = x_1$
(c) $x_2 = 4x_1$ (d) $x_2 = 2x_1$

Soln: (a): As the body starts from rest,

$\therefore u = 0$

Let *a* be constant acceleration of the body.

Distance travelled by the body in(*t* /2)s is

$x_1 = \frac{1}{2}a\left(\frac{t}{2}\right)^2 = \frac{1}{8}at^2$ ....(i)

Distance travelled by the body in *t* s is

$x_1 + x_2 = \frac{1}{2}at^2 = 4x_1$ (Using (i))

$\therefore x_2 = 4x_1 - x_1 = 3x_1$

45. A person is driving a vehicle at uniform speed of 5 m s⁻¹ on a level curved track of radius 5m. The coefficient of static friction between tyres and road is 0.1. Will the person slip while taking the turn with the same speed? (Take $g = 10$ m s⁻².)

Choose the correct statement.

(a) A person will slip if $v^2 < 5$ m s^{-1}.
(b) A person will slip if $v^2 = 5$ m s^{-1}.
(c) A person will slip if $v^2 > 10$ m s^{-1}.
(d) A person will slip if $v^2 > 5$ m^2 s^{-2}.

Soln: (d): the person will not slip if

$V^2 \le \mu_s Rg$

Here, $\mu_s = 0.1, R = 5$ m, $g = 10$ m s^{-2}

$\mu_s Rg = 0.1 \times 5\text{m} \times 10\text{m s}^{-2}$

Or $v^2 \le 5$ m^2 s^{-2}

Therefore the person will slip if $v^2 > 5$m^2 s^{-2}.

46. The electric field intensity produced by the radiations coming from 100 W bulb at a 3 m distance is E. The electric field intensity produced by the radiations coming from 50 W bulb at the same distance is................*(Contd)*

ಡೇಟಾ ಅನಾಲಿಟಿಕ್ಸ್‌ಗೆ ಅವಕಾಶಗಳು ಹೇಗಿವೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ

1. ನಾನು ಬಿಎಸ್ಸಿ (ಪಿಸಿಎಂ) ಪದವಿ ಮುಗಿಸಿದ್ದೇನೆ. ಮುಂದೆ ಎಂಎಸ್ಸಿ (ಡೇಟಾ ಸೈನ್ಸ್) ಮಾಡಬೇಕೆಂದುಕೊಂಡಿದ್ದೇನೆ. ಡೇಟಾ ಸೈನ್ಸ್ ಹಾಗೂ ಡೇಟಾ ಸೈನ್ಸ್ ಮತ್ತು ಅನಾಲಿಟಿಕ್ಸ್ ಎಂಬ ಎರಡು ಆಯ್ಕೆಗಳಿವೆ. ಇವೆರಡರಲ್ಲಿ ಯಾವುದು ಸೂಕ್ತ?

ವಿಶಾಲ್, ಬೆಳಗಾವಿ.

ವ್ಯಾಪಾರದ ಮಾಹಿತಿ, ದತ್ತಾಂಶ ತಿಳಿವಳಿಕೆ ಮತ್ತು ತಯಾರಿಕೆ, ಮೌಲ್ಯಮಾಪನ ಮತ್ತು ನಿಯೋಜನೆಗೆ ಉದ್ಯಮಗಳು ಡೇಟಾ ಸೈನ್ಸ್ ಮೇಲೆ ಹೆಚ್ಚು ಅವಲಂಬಿತವಾಗಿರುವುದರಿಂದ, ಜಾಗತಿಕ ಮಾರುಕಟ್ಟೆಯಲ್ಲಿ ಡೇಟಾ ಸೈನ್ಸ್ ತಜ್ಞರಿಗೆ ಬೇಡಿಕೆಯಿದೆ. ಡೇಟಾ ಸೈನ್ಸ್ ಕ್ಷೇತ್ರದಲ್ಲಿರುವ ಅನೇಕ ವಿಭಾಗಗಳಲ್ಲಿ ಅನಾಲಿಟಿಕ್ಸ್ ಪ್ರಮುಖವೆಂದು ಪರಿಗಣಿಸಲಾಗುತ್ತದೆ. ಮೇಲ್ನೋಟಕ್ಕೆ ಎಂ.ಎಸ್ಸಿ ಡೇಟಾ ಸೈನ್ಸ್ ಮತ್ತು ಅನಾಲಿಟಿಕ್ಸ್ ಉತ್ತಮ ಆಯ್ಕೆಯೆಂದು ಅನಿಸಿದರೂ, ಎರಡೂ ಕೋರ್ಸ್‌ಗಳ ಸಂಪೂರ್ಣ ವಿವರ ಪರಿಶೀಲಿಸಿದ ಮೇಲಷ್ಟೇ ನಿರ್ಣಯಿಸಬಹುದು. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = DmaXk-MuoOI.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net/education-career ಭೇಟಿ ನೀಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಮುಂಬೈ ಇಂಡಿಯನ್ಸ್ ಜಯಭೇರಿ

ವೆಂಕಟೇಶ್ ಅಯ್ಯರ್ ಶತಕ ವ್ಯರ್ಥ; ಮಿಂಚಿದ ಇಶಾನ್, ಸೂರ್ಯಕುಮಾರ್


ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವೆಂಕಟೇಶ್ ಅಯ್ಯರ್ –ಪಿಟಿಐ ಚಿತ್ರ

ಮುಂಬೈ (ಪಿಟಿಐ): ವೆಂಕಟೇಶ್ ಅಯ್ಯರ್ ಗಳಿಸಿದ ಅಮೋಘ ಶತಕವನ್ನು ಗೆಲುವಿನ ಮೆಟ್ಟಿಲಾಗಿಸಿಕೊಳ್ಳುವಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿಫಲವಾಯಿತು.

ಇಶಾನ್ ಕಿಶನ್ ಅರ್ಧಶತಕ ಮತ್ತು ಸೂರ್ಯಕುಮಾರ್ ಯಾದವ್ ಅವರ ಬ್ಯಾಟಿಂಗ್ ಬಲದಿಂದ ಮುಂಬೈ ಇಂಡಿಯನ್ಸ್ ತಂಡವು ಐದು ವಿಕೆಟ್‌ಗಳಿಂದ ಕೋಲ್ಕತ್ತ ಎದುರು ಜಯಿಸಿತು.

ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹೊಟ್ಟೆನೋವಿನಿಂದಾಗಿ ರೋಹಿತ್ ಶರ್ಮಾ ತಂಡದ ನಾಯಕತ್ವ ವಹಿಸಲಿಲ್ಲ ಹಾಗೂ ಫೀಲ್ಡಿಂಗ್ ಮಾಡಲಿಲ್ಲ. ಸೂರ್ಯಕುಮಾರ್ ಯಾದವ್ ನಾಯಕತ್ವ ವಹಿಸಿದರು.

ಕೆಕೆಆರ್ ತಂಡವು ವೆಂಕಟೇಶ್ ಅಯ್ಯರ್ ಗಳಿಸಿದ (104; 51ಎ, 4X6, 6X9) ಅಬ್ಬರದ ಶತಕದ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 185 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ಮುಂಬೈ ತಂಡವು 17.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 186 ರನ್ ಗಳಿಸಿತು.

‘ಇಂಪ್ಯಾಕ್ಟ್ ಆಟಗಾರ’ನಾಗಿ ಕಣಕ್ಕಿಳಿದ ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ ಮೊದಲ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿದರು. ಇಶಾನ್ 25 ಎಸೆತಗಳಲ್ಲಿ 58 ರನ್ ಗಳಿಸಿದರು. ಐದು ಬೌಂಡರಿ ಹಾಗೂ ಐದು ಸಿಕ್ಸರ್ ಹೊಡೆದರು.

ಕಳೆದ ಪಂದ್ಯಗಳಲ್ಲಿ ವಿಫಲರಾಗಿದ್ದ ಸೂರ್ಯ ಇಲ್ಲಿ ಲಯ ಕಂಡುಕೊಂಡರು. ಮೂರು ಸಿಕ್ಸರ್ ಹಾಗೂ ನಾಲ್ಕು ಬೌಂಡರಿಗಳಿದ್ದ 43 ರನ್‌ಗಳನ್ನು ಗಳಿಸಿದರು. ತಿಲಕ್ ವರ್ಮಾ ಹಾಗೂ ಟಿಮ್ ಡೇವಿಡ್ ಕೂಡ ಉಪಯುಕ್ತ ಕಾಣಿಕೆ ನೀಡಿ ಮುಂಬೈಗೆ ಆಸರೆಯಾದರು.

ಅಯ್ಯರ್ ಅಬ್ಬರ: ಮೊದಲು ಬ್ಯಾಟ್ ಮಾಡಿದ ಕೋಲ್ಕತ್ತಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ಎರಡನೇ ಓವರ್‌ನಲ್ಲಿಯೇ ಜಗದೀಶನ್ ವಿಕೆಟ್ ಗಳಿಸಿದ ಕ್ಯಾಮರಾನ್ ಗ್ರೀನ್ ಕೇಕೆ ಹಾಕಿದರು. ಆದರೆ ಕ್ರೀಸ್‌ಗೆ ಬಂದ ವೆಂಕಟೇಶ್ ಏಕಾಂಗಿ ಹೋರಾಟ ಮಾಡಿದರು. ಅವರ ಬ್ಯಾಟಿಂಗ್ ಅಬ್ಬರಕ್ಕೆ ಬೌಲರ್‌ಗಳು ದಂಗಾದರು.

203.92 ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಇನ್ನೊಂದು ಬದಿಯಲ್ಲಿ ವಿಕೆಟ್‌ಗಳು ಪತನವಾಗುತ್ತಿದ್ದರೂ ವೆಂಕಟೇಶ್ ಮಾತ್ರ ಎದೆಗುಂದದೇ ಬ್ಯಾಟ್ ಬೀಸಿದರು. 13ನೇ ಓವರ್‌ನಲ್ಲಿ ವೆಂಕಟೇಶ್ ಹೊಡೆದ ಚೆಂಡನ್ನು ಕ್ಯಾಚ್ ಮಾಡಲು ತಿಲಕ್ ವರ್ಮಾ ಪ್ರಯತ್ನಿಸಿದರು. ಆದರೆ ಫಲ ಸಿಗಲಿಲ್ಲ. ಈ ಜೀವದಾನವನ್ನು ಅವರು ಸಮರ್ಥವಾಗಿ ಬಳಸಿಕೊಂಡರು.

ಮಾತಿನ ಚಕಮಕಿ: ಕೆಕೆಆರ್ ತಂಡದ ನಿತೀಶ್ ರಾಣಾ ಮತ್ತು ಮುಂಬೈ ತಂಡದ ಹೃತಿಕ್ ಶೋಕೀನ್ ನಡುವೆ ಮಾತಿನ ಚಕಮಕಿ ನಡೆದು, ಪಂದ್ಯದ ಕಾವು ಹೆಚ್ಚಿಸಿತು. ಶೋಕೀನ್ ಎಸೆತದಲ್ಲಿ ನಿತೀಶ್ ಔಟಾದರು. ಪೆವಿಲಿಯನ್ ಕಡೆ ಹೆಜ್ಜೆಯಿಟ್ಟ ರಾಣಾ ಅವರನ್ನು ಶೋಕೀನ್ ಕೆಣಕಿದರು. ರಾಣಾ ಕೂಡಾ ಪ್ರತ್ಯುತ್ತರ ಕೊಟ್ಟರು. ಮುಂಬೈ ತಂಡದ ಸೂರ್ಯಕುಮಾರ್ ಮತ್ತು ಪೀಯೂಷ್ ಚಾವ್ಲಾ ಅವರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಸಂಕ್ಷಿಪ್ತ ಸ್ಕೋರ್: ಕೋಲ್ಕತ್ತ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 6ಕ್ಕೆ 185 (ವೆಂಕಟೇಶ್ ಅಯ್ಯರ್ 104, ಶಾರ್ದೂಲ್ ಠಾಕೂರ್ 13, ರಿಂಕು ಸಿಂಗ್ 18, ಆ್ಯಂಡ್ರೆ ರಸೆಲ್ ರಸೆಲ್ ಔಟಾಗದೆ 21, ಹೃತಿಕ್ ಶೋಕೀನ್ 34 ಕ್ಕೆ 2, ಪೀಯೂಷ್ ಚಾವ್ಲಾ 19ಕ್ಕೆ 1) ಮುಂಬೈ ಇಂಡಿಯನ್ಸ್: 17.4 ಓವರ್‌ಗಳಲ್ಲಿ 5ಕ್ಕೆ 186 (ರೋಹಿತ್ ಶರ್ಮಾ 20, ಇಶಾನ್ ಕಿಶನ್ 58, ಸೂರ್ಯಕುಮಾರ್ 43 ತಿಲಕ್ ವರ್ಮಾ 30, ಟಿಮ್ ಡೇವಿಡ್ ಔಟಾಗದೆ 24, ಸುಯಶ್ ಶರ್ಮಾ 27 ಕ್ಕೆ 2) ಫಲಿತಾಂಶ: ಮುಂಬೈಗೆ 5 ವಿಕೆಟ್ ಗೆಲುವು

ಅರ್ಜುನ್ ಪದಾರ್ಪಣೆ

ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರ ಮಗ ಅರ್ಜುನ್ ಭಾನುವಾರ ಐಪಿಎಲ್‌ನಲ್ಲಿ ಮುಂಬೈ ತಂಡದ ಪರವಾಗಿ ಪದಾರ್ಪಣೆ ಮಾಡಿದರು.

ಐಪಿಎಲ್‌ನಲ್ಲಿ ಆಡಿದ ಅಪ್ಪ ಮತ್ತು ಮಗನ ಮೊದಲ ಜೋಡಿ ಇದಾಗಿದೆ. ಈ ಹಿಂದೆ ಸಚಿನ್ ಕೂಡ ಮುಂಬೈ ಇಂಡಿಯನ್ಸ್ ತಂಡದಲ್ಲಿ ಆಡಿದ್ದರು. ಪ್ರಸ್ತುತ ಅವರು ಇದೇ ತಂಡದ ಮೆಂಟರ್ ಆಗಿದ್ದಾರೆ.

ಅರ್ಜುನ್ ಅವರಿಗೆ ತಂಡದ ನಾಯಕ ರೋಹಿತ್ ಕ್ಯಾಪ್ ನೀಡಿದರು. 2 ಓವರ್ ಬೌಲಿಂಗ್ ಮಾಡಿದ ಅರ್ಜುನ್ 17 ರನ್ ನೀಡಿದರು. ವಿಕೆಟ್ ಗಳಿಸಲಿಲ್ಲ.

ಕಳೆದ ಎರಡು ಆವೃತ್ತಿಗಳಿಂದ ಅವರು ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದಾರೆ.

ಹೆಟ್ಮೆಯರ್ ಅಬ್ಬರ: ರಾಯಲ್ಸ್‌ಗೆ ಗೆಲುವು


ಹೆಟ್ಮೆಯರ್ ಗೆಲುವಿನ ಸಂಭ್ರಮ – ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): ಸಂಜು ಸ್ಯಾಮ್ಸನ್ (60 ರನ್, 32 ಎ.) ಮತ್ತು ಶಿಮ್ರೊನ್ ಹೆಟ್ಮೆಯರ್ (ಅಜೇಯ 56, 26 ಎ.) ಅವರ ಬಿರುಸಿನ ಅರ್ಧಶತಕಗಳ ನೆರವಿನಿಂದ ರಾಜಸ್ಥಾನ ರಾಯಲ್ಸ್ ತಂಡ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಮೂರು ವಿಕೆಟ್‌ಗಳಿಂದ ಮಣಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಗುಜರಾತ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 177 ರನ್ ಗಳಿಸಿತು. ರಾಯಲ್ಸ್ 19.2 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 179 ರನ್ ಗಳಿಸಿ ಗೆದ್ದಿತು.

55 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡ ರಾಯಲ್ಸ್, ಆರಂಭಿಕ ಆಘಾತ ಅನುಭವಿಸಿತ್ತು. ಆದರೆ ಸಂಜು ಮತ್ತು ಹೆಟ್ಮೆಯರ್ ಅಮೋಘ ಆಟದಿಂದ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ನಾಲ್ಕನೇ ಗೆಲುವು ಪಡೆದ ರಾಯಲ್ಸ್ ತಂಡ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿತು.

ಟೈಟನ್ಸ್ ತಂಡವು ಶುಭಮನ್ ಗಿಲ್ (45; 34ಎ, 4X4, 6X1) ಮತ್ತು ಡೇವಿಡ್ ಮಿಲ್ಲರ್ (46 ರನ್, 30ಎ.) ಅವರ ಉತ್ತಮ ಆಟದ ನೆರವಿನಿಂದ ಸವಾಲಿನ ಮೊತ್ತ ಪೇರಿಸಿತ್ತು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 177 (ಶುಭಮನ್ ಗಿಲ್ 45, ಸಾಯಿ ಸುದರ್ಶನ್ 20, ಹಾರ್ದಿಕ್ ಪಾಂಡ್ಯ 28, ಡೇವಿಡ್ ಮಿಲ್ಲರ್ 46, ಅಭಿನವ್ ಮನೋಹರ್ 27, ಸಂದೀಪ್ ಶರ್ಮಾ 25ಕ್ಕೆ2, ಟ್ರೆಂಟ್ ಬೌಲ್ಟ್ 46ಕ್ಕೆ1)
ರಾಜಸ್ಥಾನ ರಾಯಲ್ಸ್: 19.2 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 179 (ದೇವದತ್ತ ಪಡಿಕ್ಕಲ್ 26, ಸಂಜು ಸ್ಯಾಮ್ಸನ್ 60, ಶಿಮ್ರೊನ್ ಹೆಟ್ಮೆಯರ್ ಔಟಾಗದೆ 56, ಶಮಿ 25ಕ್ಕೆ 3, ರಶೀದ್ ಖಾನ್ 46ಕ್ಕೆ 2) ಫಲಿತಾಂಶ: ರಾಯಲ್ಸ್‌ಗೆ 3 ವಿಕೆಟ್ ಜಯ

ರಣಜಿ ವಿಜೇತರಿಗೆ ₹ 5 ಕೋಟಿ

ನವದೆಹಲಿ (ಪಿಟಿಐ): ದೇಶಿ ಕ್ರಿಕೆಟ್ ಟೂರ್ನಿಗಳ ಪ್ರಶಸ್ತಿ ಮೊತ್ತವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಹೆಚ್ಚಳ ಮಾಡಿದೆ. ಇದರಿಂದಾಗಿ ರಣಜಿ ಟ್ರೋಫಿ ವಿಜೇತರು ಇನ್ನು ಮುಂದೆ ₹ 5 ಕೋಟಿ ನಗದು ಪ್ರಶಸ್ತಿ ಗಳಿಸುವರು.

ರಣಜಿ ವಿಜೇತರು ಇಲ್ಲಿಯವರೆಗೆ ₹ 2 ಕೋಟಿ ಪಡೆಯುತ್ತಿದ್ದರು. ಇನ್ನು ಮುಂದೆ ಐದು ಕೋಟಿ ರೂಪಾಯಿ ಲಭಿಸಲಿದೆ. ರನ್ನರ್ಸ್ ಅಪ್ ತಂಡಕ್ಕೆ ₹ 3 ಕೋಟಿ ಹಾಗೂ ಸೆಮಿಫೈನಲ್‌ನಲ್ಲಿ ಸೋತವರಿಗೆ ₹ 1 ಕೋಟಿ ನೀಡಲಾಗುವುದು.

‘ದೇಶಿ ಟೂರ್ನಿಗಳ ಪ್ರಶಸ್ತಿ ಮೊತ್ತ ಹೆಚ್ಚಿಸಲಾಗಿದೆ. ಮಹಿಳಾ ವಿಭಾಗದ ವಿಜೇತರಿಗೂ ₹ 6 ಲಕ್ಷದಿಂದ ₹ 50 ಲಕ್ಷ ದವರೆಗೆ ಹೆಚ್ಚಿಸಲಾಗಿದೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಇರಾನಿ ಕಪ್ ವಿಜೇತರಿಗೆ ₹ 50 ಲಕ್ಷ, ದುಲೀಪ್ ಟ್ರೋಫಿಗೆ ₹ 1 ಕೋಟಿ, ದೇವಧರ್ ಟ್ರೋಫಿಗೆ ₹ 40 ಲಕ್ಷ ಹಾಗೂ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ವಿಜೇತರಿಗೆ ₹ 80 ಲಕ್ಷ ಲಭಿಸಲಿದೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	5	4	1	0	8	1.354
ಲಖನೌ	5	3	2	0	6	0.761
ಗುಜರಾತ್	5	3	2	0	6	0.192
ಪಂಜಾಬ್	5	3	2	0	6	-0.109
ಕೋಲ್ಕತ್ತ	5	2	3	0	4	0.320
ಚೆನ್ನೈ	4	2	2	0	4	0.225
ಬೆಂಗಳೂರು	4	2	2	0	4	-0.316
ಮುಂಬೈ	4	2	2	0	4	-0.389
ಹೈದರಾಬಾದ್	4	2	2	0	4	-0.822
ಡೆಲ್ಲಿ	5	0	5	0	0	-1.488

* ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ವೆಂಕಟೇಶ್	ಕೋಲ್ಕತ್ತ	234

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	11

ಸಂಕ್ಷಿಪ್ತ ಸುದ್ದಿ

ಚೆಸ್: ಡಿಂಗ್ ಲಿರೆನ್ ತಿರುಗೇಟು

ಅಸ್ತಾನಾ, ಕಜಕಸ್ತಾನ: ಚಾಣಾಕ್ಷ ನಡೆಗಳ ಮೂಲಕ ಮಿಂಚಿದ ಚೀನಾದ ಡಿಂಗ್ ಲಿರೆನ್ ಅವರು ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಆರನೇ ಪಂದ್ಯದಲ್ಲಿ ಇಯಾನ್ ನಿಪೊಮ್‌ನಿಷಿ ಅವರನ್ನು ಮಣಿಸಿದರು.

ಇದೀಗ ಇಬ್ಬರೂ 3–3 ಪಾಯಿಂಟ್ಸ್‌ಗಳಿಂದ ಸಮಬಲ ಸಾಧಿಸಿದ್ದಾರೆ. ಐದನೇ ಪಂದ್ಯದಲ್ಲಿ ಸೋತಿದ್ದ ಲಿರೆನ್, ಭಾನುವಾರ 44 ನಡೆಗಳಲ್ಲಿ ಗೆಲುವು ತಮ್ಮದಾಗಿಸಿಕೊಂಡರು. ಸೋಮವಾರ ವಿಶ್ರಾಂತಿಯ ದಿನವಾಗಿದ್ದು, ಏಳನೇ ಪಂದ್ಯ ಮಂಗಳವಾರ ನಡೆಯಲಿದೆ.

ಫುಟ್‌ಬಾಲ್: ಸೆಮಿಗೆ ಬೆಂಗಳೂರು ಎಫ್‌ಸಿ

ಕೋಯಿಕ್ಕೋಡ್ (ಪಿಟಿಐ): ಬಿಎಫ್‌ಸಿ ತಂಡದವರು ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯ ಭಾನುವಾರದ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡದ ಜೊತೆ 1–1 ಗೋಲುಗಳ ಡ್ರಾ ಸಾಧಿಸಿದರು.

ಈ ಮೂಲಕ ‘ಎ’ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೆಮಿಫೈನಲ್ ಪ್ರವೇಶಿಸಿದರು. ಬಿಎಫ್‌ಸಿ ಪರ ರಾಯ್ ಕೃಷ್ಣ ಹಾಗೂ ಬ್ಲಾಸ್ಟರ್ಸ್ ತಂಡದ ಪರ ದಿಯಾಮಂತಕೊಸ್ ಅವರು ಗೋಲು ಗಳಿಸಿದರು.

ಬಾಬರ್ ಅಜಂ ಶತಕ; ಪಾಕ್‌ಗೆ ಜಯ

ಲಾಹೋರ್ (ಎಪಿ): ನಾಯಕ ಬಾಬರ್ ಅಜಂ ಗಳಿಸಿದ ಅಜೇಯ ಶತಕದ ನೆರವಿನಿಂದ ಪಾಕಿಸ್ತಾನ ತಂಡ, ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 38 ರನ್‌ಗಳಿಂದ ಮಣಿಸಿತು.

ಶನಿವಾರ ನಡೆದ ಪಂದ್ಯದಲ್ಲಿ 58 ಎಸೆತಗಳಲ್ಲಿ 101 ರನ್ ಗಳಿಸಿದ ಬಾಬರ್, ಪಾಕ್ ತಂಡ 4 ವಿಕೆಟ್‌ಗಳಿಗೆ 192 ರನ್ ಗಳಿಸಲು ಕಾರಣರಾದರು. ವೇಗದ ಬೌಲರ್ ಹ್ಯಾರಿಸ್ ರವೂಫ್ (27ಕ್ಕೆ 4) ಅವರ ಪರಿಣಾಮಕಾರಿ ದಾಳಿಯ ಮುಂದೆ ಪರದಾಡಿದ ನ್ಯೂಜಿಲೆಂಡ್ 7 ವಿಕೆಟ್‌ಗಳಿಗೆ 154 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 194 (ಮೊಹಮ್ಮದ್ ರಿಜ್ವಾನ್ 50, ಬಾಬರ್ ಅಜಂ ಔಟಾಗದೆ 101, ಇಫ್ತಿಕಾರ್ ಅಹ್ಮದ್ ಔಟಾಗದೆ 33, ಮ್ಯಾಟ್ ಹೆನ್ರಿ 29ಕ್ಕೆ 2) ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 154 (ಟಾಮ್ ಲಥಾಮ್ 19, ಚಾಡ್ ಬೊವ್ಸ್ 26, ಮಾರ್ಕ್ ಚಾಪ್‌ಮನ್ ಔಟಾಗದೆ 65, ಹ್ಯಾರಿಸ್ ರವೂಫ್ 27ಕ್ಕೆ 4, ಇಮಾದ್ ವಸೀಂ 19ಕ್ಕೆ 1) ಫಲಿತಾಂಶ: ಪಾಕಿಸ್ತಾನಕ್ಕೆ 38 ರನ್ ಗೆಲುವು

ಬ್ರಿಜ್‌ಭೂಷಣ್ ಶರಣ್ ಸ್ಪರ್ಧೆ ಇಲ್ಲ

ಗೊಂಡಾ, ಉತ್ತರ ಪ್ರದೇಶ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹಾಲಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಹೇಳಿದ್ದಾರೆ.

ಡಬ್ಲ್ಯುಎಫ್‌ಐ ಚುನಾವಣೆ ಮೇ 7 ರಂದು ನಡೆಯಲಿದೆ. ಫೆಡರೇಷನ್‌ನ ಕಾರ್ಯದರ್ಶಿ ವಿ.ಎನ್.ಪ್ರಸೂದ್ ನೇತೃತ್ವದಲ್ಲಿ ಭಾನುವಾರ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚುನಾವಣೆಯ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಯಿತು.

ಬ್ರಿಜ್‌ಭೂಷಣ್, ಡಬ್ಲ್ಯುಎಫ್‌ಐ ಅಧ್ಯಕ್ಷ ಹುದ್ದೆಯಲ್ಲಿ 12 ವರ್ಷಗಳನ್ನು ಪೂರೈಸಿದ್ದಾರೆ. ಅವರು ತಲಾ ಮೂರು ವರ್ಷಗಳ ನಾಲ್ಕು ಅವಧಿಗಳಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ರಾಷ್ಟ್ರೀಯ ಕ್ರೀಡಾ ನೀತಿಯ ಪ್ರಕಾರ ಮತ್ತೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ.

'ಚುನಾವಣೆಯ ದಿನಾಂಕವನ್ನು ಈ ಹಿಂದೆಯೇ ನಿಗದಿಪಡಿಸಬೇಕಾಗಿತ್ತು, ಆದರೆ ಇತ್ತೀಚಿನ ವಿವಾದದಿಂದಾಗಿ ಚುನಾವಣೆ ನಡೆಸಲು ಆಗಿರಲಿಲ್ಲ. ಇದೀಗ ಚುನಾವಣೆ ಪ್ರಕ್ರಿಯೆ ಆರಂಭಿಸಿದ್ದೇವೆ. ನಾನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿಲ್ಲ’ ಎಂದು ಬ್ರಿಜ್‌ಭೂಷಣ್ ಸ್ಪಷ್ಟಪಡಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ–ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯ ಇಂದು

ಬೆಂಗಳೂರಿನಲ್ಲಿ ಧೋನಿ ಜಪ

• ಗಿರೀಶ ದೊಡ್ಡಮನಿ

ಬೆಂಗಳೂರು: ಉದ್ಯಾನನಗರಿಯಲ್ಲಿ ಈಗ ‘ಕ್ಯಾಪ್ಟನ್ ಕೂಲ್’ ಮಹೇಂದ್ರಸಿಂಗ್ ಧೋನಿಯವರದ್ದೇ ಜಪ.

ಸೋಮವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವಣ ಐಪಿಎಲ್ ಪಂದ್ಯದ ಪ್ರಮುಖ ಆಕರ್ಷಣೆಯೇ 41 ವರ್ಷದ ಧೋನಿ. ನಾಲ್ಕು ವರ್ಷಗಳ ನಂತರ ಅವರು ಬೆಂಗಳೂರಿನ ಅಂಗಳದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅವರು ಈ ಐಪಿಎಲ್ ಟೂರ್ನಿಯ ನಂತರ ನಿವೃತ್ತಿ ಘೋಷಿಸುವ ಸಾಧ್ಯತೆ ಇದೆ. ಆದ್ದರಿಂದ ಬೆಂಗಳೂರಿನಲ್ಲಿ ಅವರು ಆಡಲಿರುವ ಕೊನೆಯ ಪಂದ್ಯ ಇದಾಗಬಹುದು.

ಬಲಾಬಲ

ಪಂದ್ಯ	30
ಚೆನ್ನೈಗೆಲುವು	19
ಬೆಂಗಳೂರು ಜಯ	10
ಫಲಿತಾಂಶವಿಲ್ಲ	1


ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ಫಫ್ ಡುಪ್ಲೆಸಿ – ಪ್ರಜಾವಾಣಿ ಚಿತ್ರ

ಅದಕ್ಕಾಗಿಯೇ ಅವರ ಆಟವನ್ನು ಕಣ್ತುಂಬಿಕೊಳ್ಳಲು ಅಭಿಮಾನಿಗಳು ಮುಗಿಬಿದ್ದಿದ್ದಾರೆ. ಈ ಪಂದ್ಯದ ಟಿಕೆಟ್‌ಗಳು ಸಂಪೂರ್ಣವಾಗಿ ಮಾರಾಟವಾಗಿವೆ. ಹೇಗಾದರೂ ಮಾಡಿ ಟಿಕೆಟ್ ದಕ್ಕಿಸಿಕೊಳ್ಳಲು ಜನರು ಕ್ರೀಡಾಂಗಣದ ಸುತ್ತ ಎಡತಾಕುತ್ತಿದ್ದಾರೆ. ಸದಾ ಆರ್‌ಸಿಬಿ ಮಂತ್ರ ಜಪಿಸುವ ಬಹಳಷ್ಟು ಅಭಿಮಾನಿಗಳೂ ಧೋನಿಗಾಗಿ ಅಂಗಳದತ್ತ ಮುಖ ಮಾಡಿದ್ದಾರೆ.

ಈ ಹಿಂದೆಯೂ ಚೆನ್ನೈ ಮತ್ತು ಬೆಂಗಳೂರು ತಂಡಗಳು ಇಲ್ಲಿ ಸೆಣಸಾಡಿದಾಗಲೆಲ್ಲ ಹೈವೋಲ್ಟೇಜ್ ವಾತಾವರಣ ಇರುತ್ತಿತ್ತು. ಈ ಸಲವೂ ಅದು ಮೇರೆ ಮೀರಿದೆ. ಚೆನ್ನೈ ಈ ಬಾರಿ ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದು ಉಳಿದೆರಡರಲ್ಲಿ ಸೋತಿದೆ. ಆದರೆ, ಆ ಪಂದ್ಯಗಳಲ್ಲಿ ಧೋನಿ ಬ್ಯಾಟಿಂಗ್ ಮಾಡುವಾಗ ಡಿಜಿಟಲ್ ಆ್ಯಪ್‌ನಲ್ಲಿ ನೇರವೀಕ್ಷಣೆಗಳ ಸಂಖ್ಯೆ ಎರಡು ಕೋಟಿಯನ್ನೂ ದಾಟಿದ ದಾಖಲೆಯಾಗಿದೆ.

ಧೋನಿ ಬಳಗ ಮತ್ತು ಆರ್‌ಸಿಬಿ ನಡುವಣ ಪಂದ್ಯ ಹೆಚ್ಚು ಕುತೂಹಲ ಕೆರಳಿಸಲು ಇನ್ನೂ ಎರಡು ಪ್ರಮುಖ ಕಾರಣಗಳಿವೆ. ಈ ಹಿಂದೆ ಅವರೊಂದಿಗೆ ಚೆನ್ನೈ ತಂಡದಲ್ಲಿದ್ದ ಫಫ್ ಡುಪ್ಲೆಸಿ ಈಗ ಬೆಂಗಳೂರು ತಂಡದ ನಾಯಕರಾಗಿದ್ದಾರೆ. ಧೋನಿಯ ‘ಆಪ್ತಮಿತ್ರ’ ವಿರಾಟ್ ಕೊಹ್ಲಿ ಕೂಡ ಅಮೋಘ ಫಾರ್ಮ್‌ನಲ್ಲಿದ್ದಾರೆ. ಈ ಟೂರ್ನಿಯಲ್ಲಿ ಅವರು ಮೂರು ಅರ್ಧಶತಕ ಬಾರಿಸಿದ್ದಾರೆ.

ಆರ್‌ಸಿಬಿ ಆಡಿದ ನಾಲ್ಕು ಪಂದ್ಯಗಳಲ್ಲಿ ಎರಡು ಗೆದ್ದು, ಎರಡರಲ್ಲಿ ಸೋತಿದೆ. ಆದರೆ ಅಮೋಘ ಫಾರ್ಮ್‌ನಲ್ಲಿರುವ ಚೆನ್ನೈನ ಆರಂಭಿಕ ಜೋಡಿ ಋತುರಾಜ್ ಗಾಯಕವಾಡ್ ಮತ್ತು ಡೇವೊನ್ ಕಾನ್ವೆ ಅವರನ್ನು ಕಟ್ಟಿಹಾಕುವ ಸವಾಲು ಆರ್‌ಸಿಬಿಯ ಅನುಭವಿ ವೇಗಿಗಳಾದ ಮೊಹಮ್ಮದ್ ಸಿರಾಜ್, ಹರ್ಷಲ್ ಪಟೇಲ್ ಅವರ ಮುಂದಿದೆ.

ಡೆಲ್ಲಿ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿ ಮೂರು ವಿಕೆಟ್ ಗಳಿಸಿದ್ದ ಕನ್ನಡಿಗ ವೈಶಾಖ ವಿಜಯಕುಮಾರ್ ಅವರಿಗೂ ಮತ್ತೊಂದು ಅವಕಾಶ ಸಿಗುವುದು ಬಹುತೇಕ ಖಚಿತ. ಚೆನ್ನೈನ ಅಜಿಂಕ್ಯ ರಹಾನೆ, ಮೋಯಿನ್ ಅಲಿ, ರವೀಂದ್ರ ಜಡೇಜ ಹಾಗೂ ಬೆನ್ ಸ್ಟೋಕ್ಸ್ ಅವರ ಅಬ್ಬರಕ್ಕೆ ಕಡಿವಾಣ ಹಾಕುವ ಪರೀಕ್ಷೆ ಅವರಿಗೆ ಎದುರಾಗಬಹುದು.

ಆದರೆ ಆತಿಥೇಯ ಬೆಂಗಳೂರು ತಂಡಕ್ಕೆ ಬ್ಯಾಟಿಂಗ್ ವಿಭಾಗದಲ್ಲಿ ಫಫ್, ವಿರಾಟ್ ಮತ್ತು ಮ್ಯಾಕ್ಸ್‌ವೆಲ್ ಬಿಟ್ಟರೆ ಉಳಿದವರಿಂದ ಹೆಚ್ಚು ನಿರೀಕ್ಷೆ ಇಲ್ಲ. ದಿನೇಶ್ ಕಾರ್ತಿಕ್ ಸತತ ವೈಫಲ್ಯ ಅನುಭವಿಸಿದ್ದಾರೆ. ಅಗ್ರ ಮೂವರು ಬ್ಯಾಟರ್‌ಗಳು ಮಿಂಚದಿದ್ದರೆ ಗೆಲುವಿನ ಹಾದಿ ಕಠಿಣವಾಗುತ್ತದೆ.

ಈ ಟೂರ್ನಿಯಲ್ಲಿ ಉಭಯ ತಂಡಗಳು ಬಿ ಗುಂಪಿನಲ್ಲಿವೆ. ಆದ್ದರಿಂದ ಲೀಗ್ ಹಂತದಲ್ಲಿ ಒಂದೇ ಬಾರಿ ಮುಖಾಮುಖಿಯಾಗಲಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನೆಮಾ ಆ್ಯಪ್


ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ –ಎಎಫ್‌ಪಿ ಚಿತ್ರ

‘ಮಹಿ’ಗೆ ಮಂಡಿನೋವು

ಚೆನ್ನೈ ಸೂಪರ್ ಕಿಂಗ್ಸ್ ತಂಡವು ಭಾನುವಾರ ಸಂಜೆ ಅಭ್ಯಾಸ ನಡೆಸಿತು. ಆದರೆ, ಧೋನಿ ಕಳೆದ ಎರಡು ದಿನಗಳಿಂದ ಮಂಡಿನೋವಿನಿಂದ ಬಳಲುತ್ತಿದ್ದು ಸ್ವಲ್ಪ ಹೊತ್ತು ಮಾತ್ರ ಅಭ್ಯಾಸ ನಡೆಸಿದರು.

‘ಧೋನಿಗೆ ಮಂಡಿನೋವು ಹೊಸದಲ್ಲ. ಬಹಳ ಕಾಲದಿಂದ ಅದನ್ನು ಸಮರ್ಥವಾಗಿ ನಿರ್ವಹಣೆ ಮಾಡುತ್ತಿದ್ದಾರೆ. ಅದರಿಂದ ಅವರ ಆಟಕ್ಕೇನೂ ತೊಂದರೆಯಿಲ್ಲ’ ಎಂದು ಕೋಚ್ ಮೈಕ್ ಹಸ್ಸಿ ಸ್ಪಷ್ಟಪಡಿಸಿದ್ದಾರೆ.

ಐಪಿಎಲ್ ಟಿಕೆಟ್: ಅಭಿಮಾನಿಗಳಿಗೆ ಲಾಠಿ ಏಟು

ಪ್ರಜಾವಾಣಿ ವಾರ್ತೆ


ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್ ನಂಬರ್ 2ರ ಎದುರು ಭಾನುವಾರ ಸೇರಿದ್ದ ಜನ

ಬೆಂಗಳೂರು: ‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯದ ಟಿಕೆಟ್ ಮಾರಲಾಗುತ್ತಿದೆ’ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ಪೋಸ್ಟ್ ನಂಬಿ ಕ್ರೀಡಾಂಗಣ ಎದುರು ಭಾನುವಾರ ಸೇರಿದ್ದ ಅಭಿಮಾನಿಗಳನ್ನು ಚದುರಿಸಲು ಪೊಲೀಸರು ಲಾಠಿ ಬೀಸಿದರು.

ಲಾಠಿ ಪ್ರಹಾರದಿಂದಾಗಿ ಕ್ರಿಕೆಟ್ ಅಭಿಮಾನಿಗಳು, ರಸ್ತೆಯಲ್ಲಿ ದಿಕ್ಕಾಪಾಲಾಗಿ ಓಡಿದರು. ಎಲ್ಲೆಂದರಲ್ಲಿ ಚಪ್ಪಲಿಗಳು ಬಿದ್ದಿದ್ದವು. ಲಾಠಿ ಏಟಿನಿಂದ ಕೆಲವರು ಗಾಯಗೊಂಡರು. ಅವರನ್ನು ಸ್ನೇಹಿತರೇ ಎತ್ತಿಕೊಂಡು ಸ್ಥಳದಿಂದ ಹೊರಟು ಹೋದರು. ಇನ್ನು ಹಲವರು, ಪೊಲೀಸರ ವರ್ತನೆಯನ್ನು ಖಂಡಿಸಿ ಧಿಕ್ಕಾರ ಕೂಗಿದರು.

‘ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವೆ ಏಪ್ರಿಲ್ 17ರಂದು ಐಪಿಎಲ್ ಪಂದ್ಯ ನಡೆಯಲಿದೆ. ಇದರ ಟಿಕೆಟ್‌ಗಳನ್ನು ಕ್ರೀಡಾಂಗಣದ ಗೇಟ್ ನಂಬರ್ 2ರಲ್ಲಿ ಏಪ್ರಿಲ್ 16ರಂದು ಬೆಳಿಗ್ಗೆ 10.30 ಗಂಟೆಯಿಂದ ಮಾರಲಾಗುತ್ತದೆ. ಒಂದು ಟಿಕೆಟ್ ಬೆಲೆ ₹ 1,251’ ಎಂಬುದಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹರಿದಾಡಿತ್ತು.

ನಿಜವೆಂದು ನಂಬಿದ್ದ ಎರಡು ಸಾವಿರಕ್ಕೂ ಹೆಚ್ಚು ಅಭಿಮಾನಿಗಳು, ಶನಿವಾರ ರಾತ್ರಿಯೇ ಗೇಟ್ ನಂಬರ್ 2ರ ಬಳಿ ಬಂದು ಸರದಿಯಲ್ಲಿ ನಿಂತಿದ್ದರು. ಕೆಲವರು ಸ್ಥಳದಲ್ಲೇ ಮಲಗಿ ರಾತ್ರಿ ಕಳೆದಿದ್ದರು. ನಸುಕಿನಿಂದ ಸರದಿ ಹೆಚ್ಚಾಗಿತ್ತು. ಬೆಳಿಗ್ಗೆ 10.30 ಗಂಟೆಯಾದರೂ ಗೇಟ್ ನಂಬರ್ 2ರ ಕೌಂಟರ್ ತೆರೆದಿರಲಿಲ್ಲ.

ಅಭಿಮಾನಿಗಳ ಸರದಿ ನೋಡಿ ಕ್ರೀಡಾಂಗಣದ ಸಿಬ್ಬಂದಿಯೇ ಆಶ್ಚರ್ಯಗೊಂಡಿದ್ದರು. ‘ಹಲವು ದಿನಗಳ ಹಿಂದೆಯೇ ಟಿಕೆಟ್ ಮಾರಲಾಗಿದೆ. ಸದ್ಯ ಯಾವುದೇ ಟಿಕೆಟ್ ಮಾರುತ್ತಿಲ್ಲ. ವಾಪಸು ಹೋಗಿ’ ಎಂದು ಸಿಬ್ಬಂದಿ ಹೇಳಿದ್ದರು. ಸಿಟ್ಟಾದ ಅಭಿಮಾನಿಗಳು, ‘ಟಿಕೆಟ್ ಬೇಕು’ ಎಂದು ಕೂಗಾಡಲಾರಂಭಿಸಿದರು. ಬ್ಯಾರಿಕೇಡ್‌ಗಳನ್ನು ತಳ್ಳಿದರು. ಸ್ಥಳದಲ್ಲಿದ್ದ ಪೊಲೀಸರ ಜೊತೆ ವಾಗ್ವಾದ ನಡೆಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು.

ಕ್ರೀಡಾಂಗಣ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಟೆಸ್ಟ್: ಕರುಣರತ್ನೆ, ಮೆಂಡಿಸ್ ಶತಕ ಸಂಭ್ರಮ

ಗಾಲ್, ಶ್ರೀಲಂಕಾ (ಎಎಫ್‌ಪಿ): ನಾಯಕ ದಿಮುತ್ ಕರುಣರತ್ನೆ (179) ಮತ್ತು ಕುಸಾಲ್ ಮೆಂಡಿಸ್ (140) ಅವರ ಭರ್ಜರಿ ಶತಕಗಳ ನೆರವಿನಿಂದ ಶ್ರೀಲಂಕಾ ತಂಡದವರು ಐರ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತ ಪೇರಿಸಿದ್ದಾರೆ.

ಗಾಲ್ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ಪಂದ್ಯದ ಮೊದಲ ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡ 4 ವಿಕೆಟ್‌ಗಳಿಗೆ 386 ರನ್ ಗಳಿಸಿದೆ.

235 ಎಸೆತಗಳನ್ನು ಎದುರಿಸಿದ ಕರುಣರತ್ನೆ15 ಬೌಂಡರಿ ಹೊಡೆದರೆ, ಮೆಂಡಿಸ್ ಅವರ 193 ಎಸೆತಗಳ ಇನಿಂಗ್ಸ್‌ನಲ್ಲಿ ಒಂದು ಸಿಕ್ಸರ್ ಹಾಗೂ 18 ಬೌಂಡರಿಗಳು ಇದ್ದವು. ಇವರಿಬ್ಬರು ಎರಡನೇ ವಿಕೆಟ್‌ಗೆ 281 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ ಮೊದಲ ಇನಿಂಗ್ಸ್ 88 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 386 (ನಿಶಾನ್ ಮಧುಷ್ಕಾ 29, ದಿಮುತ್ ಕರುಣರತ್ನೆ 179, ಕುಸಾಲ್ ಮೆಂಡಿಸ್ 140, ದಿನೇಶ್ ಚಾಂಡಿಮಲ್ ಬ್ಯಾಟಿಂಗ್ 18, ಪ್ರಭತ್ ಜಯಸೂರ್ಯ ಬ್ಯಾಟಿಂಗ್ 12, ಜಾರ್ಜ್ ಡಾಕ್ರೆಲ್ 65ಕ್ಕೆ 1, ಕರ್ಟಿಸ್ ಕ್ಯಾಂಫರ್ 44ಕ್ಕೆ 1,) ಐರ್ಲೆಂಡ್ ತಂಡದ ವಿರುದ್ಧದ ಪಂದ್ಯ

ಟೈಗರ್ ಕಪ್ ಕ್ರಿಕೆಟ್ ಟೂರ್ನಿಗೆ ಇಂದು ಚಾಲನೆ

ಬೆಂಗಳೂರು: ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ 11ನೇ ಆವೃತ್ತಿಯ ಪಂದ್ಯಗಳು ಇಲ್ಲಿನ ರಾಜರಾಜೇಶ್ವರಿ ನಗರದ ಗ್ಲೋಬಲ್ ವಿಲೇಜ್ ಕಾಲೇಜು ಮೈದಾನದಲ್ಲಿ ಏ.17 ರಂದು ಆರಂಭವಾಗಲಿದೆ.

12 ವರ್ಷ, 14 ವರ್ಷ ಮತ್ತು 16 ವರ್ಷ ವಯಸ್ಸಿನೊಳಗಿನವರ ವಿಭಾಗಗಳಲ್ಲಿ ಪಂದ್ಯಗಳು ಆಯೋಜನೆಯಾಗಿವೆ. 30 ಓವರ್‌ಗಳ ಪಂದ್ಯ ನಡೆಯಲಿದ್ದು, ಒಟ್ಟು 48 ತಂಡಗಳು ಪಾಲ್ಗೊಳ್ಳಲಿವೆ ಎಂದು ಪ್ರಕಟಣೆ ತಿಳಿಸಿದೆ. ಈ ಟೂರ್ನಿಗೆ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್‌ಹೆರಾಲ್ಡ್’ ಮೀಡಿಯಾ ಪಾರ್ಟ್‌ನರ್ ಆಗಿದೆ.

‘ಕ್ರಿಕೆಟರ್ಸ್ ಫಾರ್ ವೈಲ್ಡ್‌ಲೈಫ್ ಕನ್ಸರ್ವೇಷನ್’ ಬ್ಯಾನರ್‌ನಡಿ ಪ್ರತಿವರ್ಷ ಟೂರ್ನಿ ಆಯೋಜಿಸಲಾಗುತ್ತದೆ.